ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ಜೂನ್ 19 ಭಾನುವಾರ 2022

ಸಂಪುಟ: 43 | ಸಂಚಿಕೆ: 64 | ಪುಟಗಳು: 12 | ₹4

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523,
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ, ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

ಮೈಸೂರು ಮಿತ್ರ ಭಾನುವಾರ 19 ಜೂನ್ 2022

214 ಪದವಿ ಕಾಲೇಜು ಸಂಯೋಜನೆ ಮುಂದುವರಿಸಲು ಮೈವಿವಿ ಶಿಫಾರಸು

ಮೈಸೂರು, ಜೂ. 18 (ಆರ್‌ಕೆ)– ಮೈಸೂರು ವಿಶ್ವವಿದ್ಯಾನಿಲಯ ವ್ಯಾಪ್ತಿಯ 214 ಪದವಿ ಕಾಲೇಜುಗಳಿಗೆ 2022–23ನೇ ಸಾಲಿನಲ್ಲಿ ಸಂಯೋಜನೆ (ಅಫಿಲಿಯೇಷನ್) ಮುಂದುವರಿಸಲು ಶನಿವಾರ ನಡೆದ ಶೈಕ್ಷಣಿಕ ಮಂಡಳಿ ಮತ್ತು ಸಿಂಡಿಕೇಟ್ ವಿಶೇಷ ಸಭೆಗಳಲ್ಲಿ ಶಿಫಾರಸ್ಸು ಮಾಡಲಾಯಿತು.

ಶನಿವಾರ ಮಧ್ಯಾಹ್ನ 12 ಗಂಟೆಗೆ ಮಾನಸಗಂಗೋತ್ರಿಯ ವಿಜ್ಞಾನ ಭವನದಲ್ಲಿ ಶೈಕ್ಷಣಿಕ ಮಂಡಳಿ ಸಭೆ ನಡೆದರೆ, ಮಧ್ಯಾಹ್ನ 3 ಗಂಟೆಗೆ ಕ್ರಾಫರ್ಡ್ ಭವನದ ಸಭಾಂಗಣದಲ್ಲಿ ಸಿಂಡಿಕೇಟ್ ಸಭೆ ಆಯೋಜಿಸಲಾಗಿತ್ತು. ಕುಲಪತಿ ಪ್ರೊ.ಜಿ.ಹೇಮಂತ್‌ಕುಮಾರ್ ಅಧ್ಯಕ್ಷತೆ ವಹಿಸಿದ್ದ ಸಭೆಗಳಲ್ಲಿ 23 ಸರ್ಕಾರಿ, 4 ಹೊಸ ಕಾಲೇಜು ಸೇರಿದಂತೆ ಪ್ರಸಕ್ತ ಸಾಲಿನಲ್ಲಿ ಸಂಯೋಜನೆ ಮುಂದುವರೆಸುವಂತೆ ಕೋರಿ ಒಟ್ಟು 214 ಕಾಲೇಜುಗಳಿಂದ ಅರ್ಜಿಗಳು ಬಂದಿದ್ದು, ಈ ಸಂಬಂಧ ಅನುಮೋದನೆಗಾಗಿ ಮಂಡಿಸಲಾಗಿದೆ ಎಂದು ಪರೀಕ್ಷಾಂಗ ಕುಲಸಚಿವ ಪ್ರೊ.ಜ್ಞಾನಪ್ರಕಾಶ್ ತಿಳಿಸಿದರು.

ಸಂಯೋಜನೆ ಮುಂದುವರಿಸಲು ನಿಯಮಾನುಸಾರ ಅಗತ್ಯ ಮೂಲ ಸೌಲಭ್ಯಗಳನ್ನು ಕಲ್ಪಿಸಲಾಗಿದೆಯೇ ಎಂಬುದರ ಬಗ್ಗೆ ಸ್ಥಳೀಯ ವಿಚಾರಣಾ ಸಮಿತಿಯು ಕಾಲೇಜುಗಳಿಗೆ ಭೇಟಿ ನೀಡಿ ಖುದ್ದು ಪರಿಶೀಲಿಸಿ ವರದಿಯೊಂದಿಗೆ ಶಿಫಾರಸ್ಸು ಮಾಡಿರುವುದನ್ನು ಪ್ರೊ. ಜ್ಞಾನಪ್ರಕಾಶ್ ಸಭೆಗೆ ಮಂಡಿಸಿದರು.

ಕೆಲ ಖಾಸಗಿ ಕಾಲೇಜುಗಳಲ್ಲಿ ಉಪನ್ಯಾಸಕರು, ಸಿಬ್ಬಂದಿ ಕೊರತೆ ಇದೆ. ನೇಮಕಾತಿಯಲ್ಲಿ ರೋಸ್ಟರ್ ಪದ್ಧತಿ ಅನುಸರಿಸಿಲ್ಲ. ಕೊಠಡಿ, ಶೌಚಾಲಯ ಸೇರಿ ಮೂಲಭೂತ ಸೌಲಭ್ಯಗಳಿಲ್ಲದಿರುವುದು ಕಳೆದ ಸಾಲಿನ ಸಮಿತಿ ಭೇಟಿ ನೀಡಿ ಪರಿಶೀಲಿಸಿದಾಗ ಕಂಡು ಬಂದಿತ್ತು. ಅವುಗಳನ್ನು ಪೂರೈಸಿದರಷ್ಟೇ ಮುಂದಿನ ಸಾಲಿಗೆ ಸಂಯೋಜನೆ ಮುಂದುವರಿಸಲಾಗುವುದು ಎಂದು ಎಚ್ಚರಿಕೆ ನೀಡಲಾಗಿತ್ತು.

ಈ ಬಾರಿ ಸಮಿತಿ ಅದನ್ನೆಲ್ಲಾ ಗಮನಿಸಿ ಎಲ್ಲಾ ಸೌಕರ್ಯಗಳನ್ನು ಒದಗಿಸಿರುವುದನ್ನು ಖಚಿತಪಡಿಸಿಕೊಂಡಿದ್ದರೆ ಮಾತ್ರ ಪ್ರಸಕ್ತ ಸಾಲಿಗೆ ಮುಂದುವರಿಸಿ ಎಂದು ಶೈಕ್ಷಣಿಕ ಮಂಡಳಿ ಸದಸ್ಯರು ಹಾಗೂ ಶಾಸಕರಾದ ಎಲ್.ನಾಗೇಂದ್ರ, ನಿರಂಜನಕುಮಾರ್,



ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ತಿಳಿಸಿದರು.

ಸ್ಥಳೀಯ ವಿಚಾರಣಾ ಸಮಿತಿಯು ಖುದ್ದು ಭೇಟಿ ನೀಡಿ ಪರಿಶೀಲಿಸಿದ ನಂತರವಷ್ಟೇ ಶಿಫಾರಸ್ಸು ಮಾಡಿದೆ. ಶಿಕ್ಷಣಕ್ಕೆ ಬೇಕಾದ ಮೂಲ ಸೌಕರ್ಯ ಒದಗಿಸಿರುವುದು ದೃಢಪಟ್ಟಿರುವುದರಿಂದ ಪ್ರಸಕ್ತ ಸಾಲಿನಲ್ಲಿ ಸಂಯೋಜನೆ ಮುಂದುವರಿಸಬಹುದೆಂದು ಸಭೆಯು ಅಭಿಪ್ರಾಯಪಟ್ಟಿತು. ಆ ಪೈಕಿ 173 ಪ್ರಥಮ ದರ್ಜೆ ಕಾಲೇಜುಗಳ ಸಂಯೋಜನೆ ಮುಂದುವರಿಸುವುದು, 37 ಶಿಕ್ಷಣ ಕಾಲೇಜುಗಳಿಗೆ ಆನ್‌ಲೈನ್ ಸಂಯೋಜನೆ ನೀಡುವುದು ಹಾಗೂ ಮೈಸೂರಿನ ಎಂಐಟಿ, ವಿಕ್ಟರಿ, ನೃಪತುಂಗ ಮತ್ತು ಹಾಸನದ ವಿದ್ಯಾಸೌಧ ಅಕಾಡೆಮಿ ಆಫ್ ಮ್ಯಾನೇಜ್‌ಮೆಂಟ್ ಸೈನ್ಸ್ ಹೊಸ ಕಾಲೇಜುಗಳಿಗೆ ಬಿ.ಕಾಂ., ಬಿಸಿಎ ಕೋರ್ಸ್ ನಡೆಸಲು ಸಂಯೋಜನೆ ನೀಡಲು ಸಹ ಸಭೆಗಳಲ್ಲಿ ಅನುಮತಿ ನೀಡಲಾಯಿತು.

ಹೆಚ್ಚುವರಿಯಾಗಿ 60 ವಿದ್ಯಾರ್ಥಿಗಳಿಗೆ ಪ್ರವೇಶ ಕೋರಿರುವ 6 ಕಾಲೇಜುಗಳು ಹಾಗೂ ಬಿಸಿಎ ಕಾಂಬಿನೇಷನ್ ಕೇಳಿರುವ 4 ಕಾಲೇಜುಗಳಿಗೂ ಸಭೆಯಲ್ಲಿ ಅನುಮೋದನೆ ನೀಡಲಾಯಿತು. ಕುಲಸಚಿವ ಪ್ರೊ. ಆರ್. ಶಿವಪ್ಪ, ಕಾಲೇಜು ಶಿಕ್ಷಣ ಅಭಿವೃದ್ಧಿ ಮಂಡಳಿ ನಿರ್ದೇಶಕ ಪ್ರೊ. ಲೋಕನಾಥ್, ಹಣಕಾಸು ಅಧಿಕಾರಿ ಸಂಗೀತ ಗಜಾನನ ಭಟ್ ಹಾಗೂ ಇತರ ಸದಸ್ಯರು ಶೈಕ್ಷಣಿಕ ಮಂಡಳಿ ವಿಶೇಷ ಸಭೆಯಲ್ಲಿ ಉಪಸ್ಥಿತರಿದ್ದರು.

ಪಠ್ಯಪುಸ್ತಕ ಪರಿಷ್ಕರಣೆ ವಿರೋಧಿಸಿ ಬೆಂಗಳೂರಲ್ಲಿ ಪಕ್ಷಾತೀತ ಪ್ರತಿಭಟನೆ

- ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು, ಶ್ರೀ ನಂಜಾವಧೂತ ಶ್ರೀಗಳು, ಡಿ.ಕೆ.ಶಿವಕುಮಾರ್, ಸುಪ್ರೀಂಕೋರ್ಟ್ ನಿವೃತ್ತ ನ್ಯಾಯಮೂರ್ತಿ ಗೋಪಾಲಗೌಡ, ಸಿ.ಎಂ.ಇಬ್ರಾಹಿಂ ಇತರರು ಭಾಗಿ
- ಪಠ್ಯಪುಸ್ತಕ ಪರಿಷ್ಕರಣಾ ಸಮಿತಿ ಅಧ್ಯಕ್ಷರಾಗಿದ್ದ ರೋಹಿತ್ ಚಕ್ರತೀರ್ಥ ವಿರುದ್ಧ ಕ್ರಮಕ್ಕೆ ಆಗ್ರಹ

ಬೆಂಗಳೂರು,ಜೂ. 18(ಕೆಎಂಶಿ)–ಶಾಲಾ ಪಠ್ಯಪುಸ್ತಕ ಪರಿಷ್ಕರಣೆ ವಿರೋಧಿಸಿ ಹಾಗೂ ರೋಹಿತ್ ಚಕ್ರತೀರ್ಥ ವಿರುದ್ಧ ಕಾನೂನು ಕ್ರಮಕ್ಕೆ ಆಗ್ರಹಿಸಿ ರಾಜಧಾನಿಯಲ್ಲಿ ಪಕ್ಷಾತೀತವಾಗಿ ಪ್ರತಿಭಟನೆ ನಡೆಸಲಾಯಿತು.

ವಿಶ್ವಮಾನವ ಕ್ರಾಂತಿಕಾರಿ ಮಹಾಕವಿ ಕುವೆಂಪು ಹೋರಾಟ ಸಮಿತಿ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಮಾಜಿ ಪ್ರಧಾನಿ ದೇವೇಗೌಡರು, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಶ್ರೀ ನಂಜಾವಧೂತ ಸ್ವಾಮೀಜಿ ಸೇರಿದಂತೆ ಪಕ್ಷಾತೀತವಾಗಿ ವಿವಿಧ ರಾಜಕೀಯ ಮುಖಂಡರು, ಮಠಾಧೀಶರು, ಸಾಹಿತಿಗಳು, ಕನ್ನಡಪರ ಹೋರಾಟಗಾರರು ಹಾಗೂ ಒಕ್ಕಲಿಗರ ಸಂಘದ ಪದಾಧಿಕಾರಿಗಳು ಭಾಗವಹಿಸಿ, ಪಠ್ಯ ಪರಿಷ್ಕರಣೆಯನ್ನು ಹಿಂಪಡೆಯಬೇಕೆಂದು ಆಗ್ರಹಿಸಿದರು.

ಕಾರ್ಯಕ್ರಮ ಪ್ರಾರಂಭಕ್ಕೂ ಮುನ್ನ ಸಂಗೊಳ್ಳಿ ರಾಯಣ್ಣ ರೈಲ್ವೆ ನಿಲ್ದಾಣದಿಂದ ಫ್ರೀಡಂಪಾರ್ಕ್‌ವರೆಗೆ ವಿವಿಧ ಸಂಘಟನೆಗಳ ಮುಖಂಡರ ನೇತೃತ್ವದಲ್ಲಿ ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಲಾಯಿತು.

ಮೆರವಣಿಗೆಯುದ್ದಕ್ಕೂ ನಾಡಗೀತೆಗೆ, ರಾಷ್ಟ್ರಕವಿ ಕುವೆಂಪು ಅವರಿಗೆ ಅವಮಾನ ಮಾಡಿರುವುದನ್ನು ತೀವ್ರವಾಗಿ ಖಂಡಿಸಲಾಯಿತು. ರೋಹಿತ್ ಚಕ್ರತೀರ್ಥ ವಿರುದ್ಧ ಘೋಷಣೆಗಳನ್ನು ಕೂಗಲಾಯಿತು. ನಂತರ ಫ್ರೀಡಂ ಪಾರ್ಕ್‌ನಲ್ಲಿ ಸಮಾವೇಶಗೊಂಡಾಗ ಸಾಹಿತಿ ಬರಗೂರು ರಾಮಚಂದ್ರಪ್ಪ ಸಂವಿಧಾನ ಪೀಠಿಕೆಯನ್ನು ಬೋಧಿಸಿದರು.

ಸಮಾರಂಭದಲ್ಲಿ ಪಾಲ್ಗೊಂಡ ಮಾಜಿ ಪ್ರಧಾನಿ ದೇವೇಗೌಡರು, ಸುಪ್ರೀಂಕೋರ್ಟ್ ನಿವೃತ್ತ ನ್ಯಾಯಮೂರ್ತಿ ಗೋಪಾಲಗೌಡ, ಮುಖ್ಯಮಂತ್ರಿ ಚಂದ್ರು, ಹಿರಿಯ ವಕೀಲರಾದ ಸಿ.ಎಚ್.ಹನುಮಂತರಾಯಪ್ಪ, ಜೆಡಿಎಸ್ ರಾಜ್ಯಾಧ್ಯಕ್ಷ ಸಿ.ಎಂ.ಇಬ್ರಾಹಿಂ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಡಾ.ರಾಜ್‌ಕುಮಾರ್ ಅಭಿಮಾನಿಗಳ ಸಂಘದ ಅಧ್ಯಕ್ಷ ಸಾ.ರಾ.ಗೋವಿಂದು, ಸಂಗೀತ ನಿರ್ದೇಶಕ ಹಂಸಲೇಖ, ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾರೆಡ್ಡಿ, ಮಾಜಿ ಸಚಿವ ಎಂ.ಕೃಷ್ಣಪ್ಪ, ಮಾವಳ್ಳಿ ಶಂಕರ್, ದಲಿತಪರ ಸಂಘಟನೆಗಳ ಮುಖಂಡರು, ಮಾಜಿ ಮೇಯರ್‌ಗಳು, ಕಾರ್ಮಿಕ ಸಂಘಟನೆಗಳ ಮುಖಂಡರು ಸೇರಿದಂತೆ ಹಲವು ನಾಯಕರು ಸರ್ಕಾರದ ಪಠ್ಯ ಪರಿಷ್ಕರಣೆ ಧೋರಣೆಯನ್ನು ಖಂಡಿಸಿದರು.



ನಾಡಗೀತೆಗೆ ಅವಮಾನ ಮಾಡಿರುವ, ಕುವೆಂಪು ಅವರಿಗೆ ಅಗೌರವ ತೋರಿರುವ ರೋಹಿತ್ ಚಕ್ರತೀರ್ಥ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು. ಪರಿಷ್ಕರಣೆ ಮಾಡಿರುವ ಪಠ್ಯವನ್ನು ಹಿಂತೆಗೆದುಕೊಂಡು ಈ ಹಿಂದಿನ ಬರಗೂರು ರಾಮಚಂದ್ರಪ್ಪ ನೇತೃತ್ವದ ಸಮಿತಿ ಪರಿಷ್ಕರಿಸಿದ್ದ ಪಠ್ಯವನ್ನು ಮುಂದುವರೆಸಬೇಕೆಂದು ಒತ್ತಾಯಿಸಿದರು. ಕುವೆಂಪು ಆದಿಯಾಗಿ ಬುದ್ಧ, ಮಹಾವೀರ, ಬಸವಣ್ಣ, ವಾಲ್ಮೀಕಿ, ಸಾವಿತ್ರಿಬಾಯಿ ಫುಲೆ, ಪೆರಿಯಾರ್, ರಾಮಸ್ವಾಮಿ, ನಾರಾಯಣ ಗುರು, ಸಂಗೊಳ್ಳಿ ರಾಯಣ್ಣ, ಸುರಪುರ ನಾಯಕರು, ಅಕ್ಕಮಹಾದೇವಿ, ಟಿಪ್ಪು ಸುಲ್ತಾನ್, ಬಾಬಾ ಸಾಹೇಬ್ ಅಂಬೇಡ್ಕರ್, ಸಿದ್ಧಗಂಗಾ ಸ್ವಾಮೀಜಿ, ಆದಿಚುಂಚನಗಿರಿಯ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ಹೀಗೆ ಎಲ್ಲ ಮಹನೀಯರಿಗೆ ರೋಹಿತ್ ಚಕ್ರತೀರ್ಥ ಸಮಿತಿ ಅಪಮಾನ ಮಾಡಿದೆ. ರಾಜ್ಯದ ಪ್ರತಿಯೊಬ್ಬ ಪ್ರಜ್ಞಾವಂತರು ಇದನ್ನು ಖಂಡಿಸಬೇಕು ಎಂದು ಪ್ರತಿಭಟನೆಯಲ್ಲಿ ಒಕ್ಕೊರಲಿನಿಂದ ಒತ್ತಾಯಿಸಲಾಯಿತು. ಮುಸ್ಲಿಂ, ಕ್ರೈಸ್ತ ಧರ್ಮಗುರುಗಳು, ಜಾಣಗೆರೆ ವೆಂಕಟರಾಮಯ್ಯ, ಶಾಸಕ ಡಾ.ರಂಗನಾಥ್, ಕರವೇ ಅಧ್ಯಕ್ಷ ಶಿವರಾಮೇಗೌಡ, ಸಾಹಿತಿ ಮುಕುಂದರಾಜ್ ಪ್ರತಿಭಟನೆಯಲ್ಲಿದ್ದರು.

ಜೂ.26ರಂದು ಬಿಲ್ಡರ್ಸ್ ಗ್ರೀನ್ ಮ್ಯಾರಥಾನ್



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬಿಲ್ಡರ್ಸ್ ಗ್ರೀನ್ ಮ್ಯಾರಥಾನ್ ಕುರಿತ ಪೋಸ್ಟರ್ ಬಿಡುಗಡೆ ಮಾಡಲಾಯಿತು.

ಮೈಸೂರು,ಜೂ.18(ಪಿಎಂ)– ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ (ಬಿಎಐ) ಮೈಸೂರು ಕೇಂದ್ರ, ಮೈಸೂರು ಬಿಲ್ಡರ್ಸ್ ಚಾರಿಟಬಲ್ ಟ್ರಸ್ಟ್ (ಎಂಬಿಸಿಟಿ) ಮತ್ತು ಡೆಕಾಥ್ಲಾನ್ ಸಂಯುಕ್ತಾಶ್ರಯದಲ್ಲಿ ಜೂ.26ರಂದು ಬೆಳಗ್ಗೆ 6ಕ್ಕೆ ಮಾನಸ ಗಂಗೋತ್ರಿ ಆವರಣದಲ್ಲಿ ಬಿಎಐ–ಭೈರಿ ಡೆವಲಪರ್ಸ್ ಬಿಲ್ಡರ್ಸ್ ಗ್ರೀನ್ ಮ್ಯಾರಥಾನ್ ಏರ್ಪಡಿಸಲಾಗಿದೆ ಎಂದು ಬಿಎಐ ಪರಿಸರ ಮಾಸಾಚರಣೆ ಸಮಿತಿ ಅಧ್ಯಕ್ಷ ವಿ.ನಾಗರಾಜ್ ಭೈರಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಬಿಎಐ ಮೈಸೂರು ಕೇಂದ್ರದಿಂದ ಜೂನ್ ತಿಂಗಳಿಡೀ ಹಮ್ಮಿಕೊಂಡಿರುವ ಪರಿಸರ ಮಾಸಾಚರಣೆ ಭಾಗವಾಗಿ ಈ ಮ್ಯಾರಥಾನ್ ನಡೆಯುತ್ತಿದೆ. ಇದರಲ್ಲಿ ನಾಗರಿಕರು ಪಾಲ್ಗೊಳ್ಳಲು ಅವಕಾಶವಿದ್ದು, 5 ಕಿಮೀ (ಪುರುಷರು ಮತ್ತು ಮಹಿಳೆಯರು) ಸ್ಪರ್ಧೆಗೆ 299 ರೂ. ಮತ್ತು 10 ಕಿಮೀ (ಪುರುಷರು ಮತ್ತು ಮಹಿಳೆಯರು) ಸ್ಪರ್ಧೆಗೆ 399 ರೂ. ನೋಂದಣಿ ಶುಲ್ಕ ನಿಗದಿ ಮಾಡಲಾಗಿದೆ ಎಂದು ಹೇಳಿದರು.

10 ಕಿಮೀ ವಿಭಾಗದಲ್ಲಿ ಪ್ರಥಮ ಸ್ಥಾನಕ್ಕೆ 6 ಸಾವಿರ ರೂ., ದ್ವಿತೀಯ ಸ್ಥಾನಕ್ಕೆ 4 ಸಾವಿರ ರೂ., ತೃತೀಯ ಸ್ಥಾನಕ್ಕೆ 3 ಸಾವಿರ ರೂ. ನಗದು ಬಹುಮಾನ ನೀಡಲಾಗುವುದು. ಅಂತೆಯೇ 5 ಕಿಮೀ ವಿಭಾಗದಲ್ಲಿ ಕ್ರಮವಾಗಿ 5 ಸಾವಿರ ರೂ., 3 ಸಾವಿರ ರೂ. ಮತ್ತು ಸಾವಿರ ರೂ. ನಗದು ಬಹುಮಾನ ನೀಡಲಾಗುವುದು. 500 ಸ್ಪರ್ಧಿಗಳು ಪಾಲ್ಗೊಳ್ಳುವ ನಿರೀಕ್ಷೆ ಇದೆ. ಹೆಚ್ಚಿನ ವಿವರಗಳಿಗೆ ಮೊ.ಸಂ.96633 97522, 84959 05616 ಮತ್ತು 98867 71871 ಸಂಪರ್ಕಿಸಬಹುದು ಎಂದರು. ಬಿಎಐ ಮೈಸೂರು ಘಟಕದ ಅಧ್ಯಕ್ಷ ಆರ್.ರಘುನಾಥ್, ಸಮಿತಿ ಕಾರ್ಯದರ್ಶಿ ವೆಂಕಟೇಶ್ ಪ್ರಸಾದ್, ಸಂಚಾಲಕ ದಿವಾಕರ್, ಮ್ಯಾರಥಾನ್ ಸಂಚಾಲಕರಾದ ಅಶ್ವಿನ್ ಪಾಳೇಗಾರ್, ಸಾಗರ್ ಗೋಷ್ಠಿಯಲ್ಲಿದ್ದರು.



ಮೈಸೂರಿನ ಸುತ್ತೂರು ಶಾಖಾ ಮಠಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಭೇಟಿ ನೀಡಿ, ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರೊಂದಿಗೆ ಚರ್ಚಿಸುತ್ತಿರುವುದು. ಸಂಸದ ಪ್ರತಾಪ್ ಸಿಂಹ, ಮುಡಾ ಅಧ್ಯಕ್ಷ ರಾಜೀವ್ ಇದ್ದರು.

ಕೆ.ಆರ್. ಕ್ಷೇತ್ರದಲ್ಲಿ ವಿವಿಧ ಫಲಾನುಭವಿಗಳಿಂದ ಅರ್ಜಿ ಸ್ವೀಕಾರ

ಮೈಸೂರು, ಜೂ.18(ಎಸ್‌ಬಿಡಿ)– ಮೈಸೂರಿನ ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಮೂರು ಸ್ಥಳದಲ್ಲಿ ಒಂದೇ ಸೂರಿನಡಿ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳ ವಿವಿಧ ಯೋಜನೆಗಳಿಗೆ ಅರ್ಜಿ ಸಲ್ಲಿಕೆ ಕಾರ್ಯಕ್ರಮ ನಡೆಯಿತು.

ಕೃಷ್ಣರಾಜ ಕ್ಷೇತ್ರ ವ್ಯಾಪ್ತಿಯಲ್ಲಿ ಸಾವಿರಾರು ಫಲಾನುಭವಿಗಳಿಗೆ ಸಾಮಾಜಿಕ ಭದ್ರತೆ ಯೋಜನೆಯಡಿ ಈಗಾಗಲೇ ಸೌಲಭ್ಯ ಒದಗಿಸಿದ್ದು, ಪ್ರಧಾನಿ ಮೋದಿ ಅವರ ಆಗಮನದ ಹಿನ್ನೆಲೆಯಲ್ಲಿ ಶಾಸಕ ಎಸ್.ಎ.ರಾಮದಾಸ್ ನೇತೃತ್ವದಲ್ಲಿ ನೂರಾರು ಅರ್ಹ ಆಕಾಂಕ್ಷಿಗಳಿಂದ ಅರ್ಜಿ ಸ್ವೀಕರಿಸಲಾಯಿತು.

ಜಯನಗರದ ಪೈಲ್ವಾನ್ ಬಸವಯ್ಯ ಸಮುದಾಯಭವನ, ಅಗ್ರಹಾರದ ಅಕ್ಕನ ಬಳಗ ಉದ್ಯಾನವನ ಹಾಗೂ ಸಿದ್ಧಾರ್ಥ ಲೇಔಟ್ ಸಿಐಟಿಬಿ ಕಲ್ಯಾಣ ಮಂಟಪದಲ್ಲಿ ಶುಕ್ರವಾರ ಬೆಳಗ್ಗೆ 9ರಿಂದ ಸಂಜೆ 5ರವರೆಗೂ ಕಾರ್ಯಕ್ರಮ ನಡೆದಿದ್ದು, ಕ್ಷೇತ್ರದ 19 ವಾರ್ಡ್‌ಗಳ ಫಲಾನುಭವಿಗಳು ಪ್ರಯೋಜನ ಪಡೆದುಕೊಂಡರು. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಕಾರ್ಮಿಕ ಇಲಾಖೆ, ಆರೋಗ್ಯ ಇಲಾಖೆ, ಆಹಾರ ನಾಗರಿಕ ಸರಬರಾಜು ಇಲಾಖೆ ಅಧಿಕಾರಿಗಳು ಭಾಗಿಯಾಗಿ ಫಲಾನುಭವಿಗಳಿಗೆ ಸೂಕ್ತ ಮಾರ್ಗದರ್ಶನ ನೀಡಿ, ಅರ್ಜಿ ಸ್ವೀಕರಿಸಿದರು. ಇದೇ ವೇಳೆ ಮಾತೃವಂದನಾ ಕಾರ್ಯಕ್ರಮದಡಿಯಲ್ಲಿ ನೂರಾರು ಗರ್ಭಿಣಿ ಸ್ತ್ರೀಯರಿಗೆ ಸೀರೆ, ಫಲತಾಂಬೂಲ ನೀಡಿ ಮಡಿಲು ತುಂಬಿ ಹರಸಲಾಯಿತು. ಅಲ್ಲದೆ ಪೌಷ್ಟಿಕಾಂಶ ಕೊರತೆಯಿರುವ ನೂರಾರು ಮಕ್ಕಳಿಗೆ ಹಾಲಿನ ಪುಡಿ ಹಾಗೂ ಮೊಟ್ಟೆ ವಿತರಿಸಲಾಯಿತು.

ಹಲವು ಫಲಾನುಭವಿಗಳಿಗೆ ಪಡಿತರ ಚೀಟಿ, ಭಾಗ್ಯಲಕ್ಷ್ಮಿ ಹಾಗೂ ತಾಯಿ ಕಾರ್ಡ್ ವಿತರಿಸಿದ ಶಾಸಕ ಎಸ್.ಎ. ರಾಮದಾಸ್, ಜೂ.20ರಂದು ಪ್ರಧಾನಿ ನರೇಂದ್ರ ಮೋದಿ ಅವರ ಕಾರ್ಯಕ್ರಮಕ್ಕೆ ಆಹ್ವಾನ ನೀಡಿದರು. ಕಾರ್ಯಕ್ರಮದಲ್ಲಿ ಮೇಯರ್ ಸುನಂದಾ ಪಾಲನೇತ್ರ, ಪಾಲಿಕೆ ಆಡಳಿತ ಪಕ್ಷದ ನಾಯಕ ಶಿವಕುಮಾರ್, ಪಾಲಿಕೆ ಸದಸ್ಯರಾದ ಬಿ.ವಿ. ಮಂಜುನಾಥ್, ರೂಪ ಯೋಗೀಶ್, ಛಾಯಾ ನವೀನ್, ಸೌಮ್ಯ ಉಮೇಶ್, ಪಿ.ಟಿ.ಕೃಷ್ಣ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಅಧಿಕಾರಿ ಮಧೂಸೂಧನ್, ಉಪ ತಹಸೀಲ್ದಾರ್ ರೂಪ, ತಾಲೂಕು ಆರೋಗ್ಯಾಧಿಕಾರಿ ರಾಜೇಶ್ವರಿ, ಬಿಜೆಪಿ ನಗರದ ಪ್ರಧಾನ ಕಾರ್ಯದರ್ಶಿ ವಾಣೀಶ್, ಕೆ.ಆರ್.ಕ್ಷೇತ್ರದ ಅಧ್ಯಕ್ಷ ಎಂ.ವಡಿವೇಲು, ಪ್ರಧಾನ ಕಾರ್ಯದರ್ಶಿಗಳಾದ ಓಂಶ್ರೀನಿವಾಸ್, ನಾಗೇಂದ್ರ ಕುಮಾರ್, ಮುಖಂಡ ಪ್ರಸಾದ್ ಬಾಬು ಮತ್ತಿತರರು ಉಪಸ್ಥಿತರಿದ್ದರು.



ಶಾಸಕ ಎಸ್.ಎ.ರಾಮದಾಸ್ ನೇತೃತ್ವದಲ್ಲಿ ತಾಯಿ ಕಾರ್ಡ್ ವಿತರಿಸಲಾಯಿತು.

ಜೂ.24ರಿಂದ ಉಚಿತ ಆಂಜಿಯೋಪ್ಲಾಸ್ಟಿ ಕಾರ್ಯಾಗಾರ

ಮೈಸೂರು,ಜೂ.18–ಬೆಂಗಳೂರಿನ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯು ಅಮೆರಿಕಾದ ಮೆಡ್ಟ್ರಾನಿಕ್ಸ್, ಹಾಗೂ ಡಾ.ಗೋವಿಂದರಾಜು ಸುಬ್ರಮಣಿ ಹಾರ್ಟ್ ಫೌಂಡೇಷನ್, ಅಮೆರಿಕಾದ ವಿಸ್ಕಿನ್‌ಸನ್ ಸಹಯೋಗದೊಂದಿಗೆ 150 ರೋಗಿಗಳಿಗೆ ಆಂಜಿಯೋಪ್ಲಾಸ್ಟಿ ಕಾರ್ಯಾಗಾರವನ್ನು ಜೂ.24ರಿಂದ 26ರವರೆಗೆ ಬೆಂಗಳೂರಿನ ಜಯದೇವ ಆಸ್ಪತ್ರೆಯಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಜಯದೇವ ಹೃದ್ರೋಗ ವಿಜ್ಞಾನ ಸಂಸ್ಥೆಯ ನಿರ್ದೇಶಕ ಪದ್ಮಶ್ರೀ ಡಾ. ಸಿ.ಎನ್.ಮಂಜುನಾಥ್ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ಕಾರ್ಯಾಗಾರವನ್ನು 150 ಜನ ಬಡ ರೋಗಿಗಳು ಹಾಗೂ ಬಡತನದ ರೇಖೆಗಿಂತ ಕೆಳಗಿರುವ ಹಿರಿಯ ನಾಗರಿಕರಿಗಾಗಿ ಆಯೋಜಿಸಲಾಗಿದೆ. ಪ್ರತಿ ರೋಗಿಗೂ ಉನ್ನತ ಮಟ್ಟದ ಮೆಡಿಕೇಟೆಡ್ ಸ್ಟಂಟ್‌ಗಳನ್ನು ಉಚಿತವಾಗಿ ಅಳವಡಿಸಲಾಗುವುದು. ಈ ಸೌಲಭ್ಯವನ್ನು ಈಗಾಗಲೇ ಆಂಜಿಯೋಗ್ರಾಮ್ ತಪಾಸಣೆಗೆ ಒಳಪಟ್ಟಿರುವ ರೋಗಿಗಳು ಪಡೆಯಬಹುದು. ಅವಶ್ಯಕವಿರುವ ರೋಗಿಗಳು ದಾಖಲಾತಿ ವೇಳೆ ಬಿಪಿಎಲ್ ಕಾರ್ಡ್ ಅಥವಾ ಕಡಿಮೆ ಆದಾಯ ಪ್ರಮಾಣಪತ್ರವನ್ನು ಹೊಂದಿರಬೇಕು. ತಮ್ಮ ಹೆಸರನ್ನು ಜೂ.20ರ ಬೆಳಗ್ಗೆ 10 ಗಂಟೆಯಿಂದ ಸಂಜೆ 4ರವರೆಗೆ ನಿರ್ದೇಶಕರ ಕಚೇರಿ, ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ, ಬನ್ನೇರುಘಟ್ಟ ರಸ್ತೆ, ಜಯನಗರ 9ನೇ ಬ್ಲಾಕ್, ಬೆಂಗಳೂರು ಇಲ್ಲಿ ನೋಂದಾಯಿಸಿಕೊಳ್ಳಬಹುದು. ಹೆಚ್ಚಿನ ವಿವರಗಳಿಗೆ 9480827888 ಅಥವಾ 080–22977433/ 322 ಸಂಪರ್ಕಿಸಬಹುದು.

ಪ್ರೀಶಿಯಾ ರತ್ನಾಭರಣಗಳ ಉತ್ಸವ



ಮೈಸೂರಿನ ಪ್ರತಿಷ್ಠಿತ ಜುವೆಲ್ಲರಿ ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್ ಶೋ ರೂಂನಲ್ಲಿ ಪ್ರೀಶಿಯಾ ರತ್ನಾಭರಣಗಳ ಉತ್ಸವ ಜೂನ್ 17 ರಿಂದ 10 ದಿನಗಳ ಕಾಲ ಮೈಸೂರು ಶೋ ರೂಂನಲ್ಲಿ ನಡೆಯಲಿದ್ದು, ಈ ಪ್ರೀಶಿಯಾ ರತ್ನಾಭರಣಗಳ ಉತ್ಸವಕ್ಕೆ ಗ್ರಾಹಕರಾದ ಈರಮ್ ಫಸಲ್, ಸ್ಫೂರ್ತಿಗೌಡ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಶೋ ರೂಂನ ಸಹಾಯಕ ಸ್ಟೋರ್ ಹೆಡ್ ಫಸಲ್ ರೆಹಮಾನ್ ಉಪಸ್ಥಿತರಿದ್ದರು. ಈ ಪ್ರೀಶಿಯಾ ರತ್ನಾಭರಣಗಳ ಉತ್ಸವವು ಪ್ರೀಶಿಯಾ, ಜೆಮ್ ಆಭರಣ, ಅನ್‌ಕಟ್ ವಜ್ರಾಭರಣಗಳನ್ನು ಉತ್ತಮ ಚಿನ್ನದಲ್ಲಿ ಹೆಣೆದ, ಅಮೂಲ್ಯವಾದ ಸ್ಟೋನ್‌ಗಳಿಂದ ಕೂಡಿದೆ. ಎಮರಾಲ್ಡ್, ರೂಬಿ ಸಫೈರ್ ಮತ್ತು ಅತ್ಯಾಕರ್ಷಕ ಅನ್‌ಕಟ್ ಡೈಮಂಡ್‌ಗಳಂತಹ ಅತ್ಯಮೂಲ್ಯ ಸ್ಟೋನ್‌ಗಳಿಂದ ಅತ್ಯುತ್ಕೃಷ್ಟವಾದ ಚಿನ್ನದಿಂದ ತಯಾರಿಸಲಾದ ಆಭರಣಗಳು ಇಲ್ಲಿವೆ. ಇದರ ಜೊತೆಗೆ ಜೀವನಪರ್ಯಂತ ಉಚಿತ ನಿರ್ವಹಣೆ 1 ವರ್ಷದ ವಿಮೆ ಬೈಬ್ಯಾಕ್ ಗ್ಯಾರಂಟಿ ಹಾಗೂ ವಿವರಗಳೊಂದಿಗೆ ಪಾರದರ್ಶಕ ಬೆಲೆಯನ್ನು ನೀಡುತ್ತದೆ.

ಇಂದು ಹಲವೆಡೆ ನೀರು ಸರಬರಾಜಲ್ಲಿ ವ್ಯತ್ಯಯ

ಮೈಸೂರು, ಜೂ.18–ಬೆಳಗೊಳ ಯಂತ್ರಾಗಾರದಲ್ಲಿ ತುರ್ತು ಕಾಮಗಾರಿ ಕೈಗೊಂಡಿರುವುದರಿಂದ ಜೂ.18ರಂದು ಮಂಡಿ ಮೊಹಲ್ಲಾ, ಲಷ್ಕರ್ ಮೊಹಲ್ಲಾ, ಯಾದವಗಿರಿ, ಬನ್ನಿಮಂಟಪ ಎ, ಬಿ, ಸಿ ಲೇಔಟ್, ಈರನಗೆರೆ, ಸಿದ್ದಿಖಿನಗರ, ಶಿವರಾತ್ರೀಶ್ವರ ನಗರ, ತಿಲಕ್‌ನಗರ, ಬಡೇಮಕಾನ್, ಅಲೀಂ ನಗರ, ದೇವರಾಜ ಮೊಹಲ್ಲಾ ಭಾಗಶಃ, ನಜರ್‌ಬಾದ್, ವಿದ್ಯಾರಣ್ಯಪುರಂ, ವಿಶ್ವೇಶ್ವರನಗರ, ಚಾಮುಂಡಿಪುರಂ, ದೇವರಾಜ ಮೊಹಲ್ಲಾ, ಲೂರ್ದು ನಗರ, ಮೀನಾ ಬಜಾರ್, ವಾರ್ಡ್ ಸಂಖ್ಯೆ 8, 17, 18, 19 23ರಿಂದ 27, 40, 41, 55, 60, 61, 62, ಮೇಟಗಳ್ಳಿ ಪ್ರದೇಶಗಳಲ್ಲಿ ನೀರು ಸರಬರಾಜು ವ್ಯತ್ಯಯವಾಗಲಿದೆ.



ಪರೀಕ್ಷೆ ಇಲ್ಲದೆ ಪ್ರಥಮ ಪಿಯುಸಿ ಪಾಸು: ದ್ವಿತೀಯ ಪಿಯು ಫಲಿತಾಂಶ ಕುಸಿತಕ್ಕೆ ಕಾರಣ

ಪದವಿಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕ ವಿವರಣೆ

ಮೈಸೂರು,ಜೂ.18(ಎಂಟಿವೈ)–ಕೋವಿಡ್ ಕಾರಣಕ್ಕೆ ಪ್ರಥಮ ಪಿಯುಸಿಯ ಎಲ್ಲ ವಿದ್ಯಾರ್ಥಿಗಳನ್ನು ಪರೀಕ್ಷೆ ನಡೆಸದೆ ಉತ್ತೀರ್ಣ ಮಾಡಿದ್ದರ ಪರಿಣಾಮ ಈ ಬಾರಿ ಜಿಲ್ಲೆಯ ದ್ವಿತೀಯ ಪಿಯುಸಿ ಫಲಿತಾಂಶ ಕಡಿಮೆ ಆಗಿದೆ ಎಂದು ಪದವಿಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಡಿ.ಕೆ.ಶ್ರೀನಿವಾಸ್ ಮೂರ್ತಿ ತಿಳಿಸಿದರು.

ದ್ವಿತೀಯ ಫಲಿತಾಂಶ ಪ್ರಕಟಗೊಂಡ ಹಿನ್ನೆಲೆಯಲ್ಲಿ ತಮ್ಮ ಕಚೇರಿಯಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಎರಡ್ಮೂರು ಜಿಲ್ಲೆಗಳನ್ನು ಹೊರತು ಪಡಿಸಿದರೆ ಎಲ್ಲ ಜಿಲ್ಲೆಗಳ ಫಲಿತಾಂಶದಲ್ಲೂ ಇಳಿಕೆಯಾಗಿದೆ. ರಾಜ್ಯದ ಫಲಿತಾಂಶಕ್ಕೆ ಹೋಲಿಕೆ ಮಾಡಿದರೆ, ಕಲಾ ವಿಭಾಗ ಹೊರತು ಪಡಿಸಿ ಜಿಲ್ಲೆಯಲ್ಲಿ ವಾಣಿಜ್ಯ, ವಿಜ್ಞಾನ ವಿಭಾಗದ ಫಲಿತಾಂಶ ಉತ್ತಮವಾಗಿ ಬಂದಿದೆ. ಈ ಸಲ ರಾಜ್ಯದ ಫಲಿತಾಂಶ ಕಲಾ ವಿಭಾಗದಲ್ಲಿ ಶೇ.45ರಷ್ಟಾಗಿದ್ದರೆ, ಜಿಲ್ಲೆಯಲ್ಲಿ ಶೇ.48ರಷ್ಟಾಗಿದೆ. ಅಂತೆಯೆ ವಾಣಿಜ್ಯ ವಿಭಾಗದಲ್ಲಿ ರಾಜ್ಯದ ಫಲಿತಾಂಶ ಶೇ.64ರಷ್ಟಾಗಿದ್ದರೆ, ಜಿಲ್ಲೆಯಲ್ಲಿ ಶೇ.69ರಷ್ಟಾಗಿದೆ. ವಿಜ್ಞಾನ ವಿಭಾಗದಲ್ಲೂ ರಾಜ್ಯದಲ್ಲಿ ಶೇ.72ರಷ್ಟಾಗಿದ್ದರೆ, ಜಿಲ್ಲೆಯಲ್ಲಿ ಶೇ.72ರಷ್ಟಾಗಿದೆ ಎಂದು ತಿಳಿಸಿದರು. ಗ್ರಾಮೀಣ ಪ್ರದೇಶದ ಕಲಾ ವಿಭಾಗದ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಅನುತ್ತೀರ್ಣರಾಗಿದ್ದಾರೆ. ಇದು ಜಿಲ್ಲೆಯ ಫಲಿತಾಂಶ ಇಳಿಕೆಗೆ ಮತ್ತೊಂದು ಕಾರಣವಾಗಿದೆ. 2022–23ನೇ ಸಾಲಿನಲ್ಲಿ ಫಲಿತಾಂಶ ವೃದ್ಧಿಗೆ ಈಗಿನಿಂದಲೇ ವಿಶೇಷ ತರಗತಿ ಸೇರಿದಂತೆ ಇನ್ನಿತರ ಕಾರ್ಯಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ನಿಧನ

ವಿಕ್ರಮ್ ಹೆಬ್ಬಾರ್



ಮೈಸೂರು, ಜೂ. 18– ಮೈಸೂರಿನ ಕೆ.ಆರ್.ಎಸ್. ರಸ್ತೆಯಲ್ಲಿರುವ ಜೆ.ಕೆ. ಟೈರ್ ಅಂಡ್ ಇಂಡಸ್ಟ್ರೀಸ್ ಲಿಮಿಟೆಡ್‌ನ ಸೀನಿಯರ್ ಜನರಲ್ ಮ್ಯಾನೇಜರ್–ಹೆಚ್‌ಆರ್, ಐಆರ್ ಮತ್ತು ಹೆಚ್‌ಎಸ್‌ಇ ಮತ್ತು ವಿಜಯನಗರ ಎರಡನೇ ಹಂತದ ನಿವಾಸಿ ವಿಕ್ರಮ್ ಹೆಬ್ಬಾರ್ (52) ಗುರುವಾರ ನಿಧನರಾದರು.

ವಿಕ್ರಮ್ ಹೆಬ್ಬಾರ್ ಅವರು ಇಂಡಿಯನ್ ಏರ್‌ಫೋರ್ಸ್‌ನಲ್ಲಿ ಸೇವೆ ಸಲ್ಲಿಸಿದ್ದು, 9 ವರ್ಷಗಳ ಸುದೀರ್ಘ ಸೇವಾ ಪದಕ ಮತ್ತು 50 ವರ್ಷಗಳ ಸ್ವಾತಂತ್ರ್ಯೋತ್ಸವ ಪದಕವನ್ನು ಇಂಡಿಯನ್ ಏರ್‌ಫೋರ್ಸ್‌ನಿಂದ ಪಡೆದಿದ್ದರು. ಇವರು ಪತ್ನಿ, ಓರ್ವ ಪುತ್ರ ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ಗೋಕುಲಂ ರುದ್ರಭೂಮಿಯಲ್ಲಿ ಶುಕ್ರವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

19.06.2022 ಭಾನುವಾರ, ಮಳೆ ನಕ್ಷತ್ರ : ಮೃಗಶಿರ 08.06.2022 ರಿಂದ 21.06.2022
ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ ಮಾಸ, ಕೃಷ್ಣ ಪಕ್ಷ
ತಿಥಿ: ಷಷ್ಠೀ, ನಕ್ಷತ್ರ : ಧನಿಷ್ಠ, ರಾಹುಕಾಲ: ಸಂಜೆ 4.30 ರಿಂದ 6 ರವರೆಗೆ

- **ಜೆಎಸ್‌ಎಸ್ ವಿವಾಹ ವೇದಿಕೆ :** ವಧು–ವರರ ಮುಖಾಮುಖಿ ಸಮಾವೇಶ, ಸ್ಥಳ: ಶ್ರೀ ಶಿವರಾತ್ರಿ ರಾಜೇಂದ್ರ ಭವನ, ಜೆಎಸ್‌ಎಸ್ ಆಸ್ಪತ್ರೆ ಆವರಣ, ಬೆಳಗ್ಗೆ 10ರಿಂದ.
- **ಸುವಹನ ಪ್ರಕಾಶಕರು, ಮೈಸೂರು, ಉಷಾ ಸಾಹಿತ್ಯ ಮಾಲೆ, ಮೈಸೂರು:** ಡಾ.ಚಂದ್ರಶೇಖರಯ್ಯ ಅವರ ಧೀರ ಸನ್ಯಾಸಿ (ತರಳಬಾಳು ಜಗದ್ಗುರು ಶ್ರೀ ಶಿವಕುಮಾರ ಮಹಾಸ್ವಾಮಿಗಳವರ ಜೀವನ ಚರಿತ್ರೆ) ಹಾಗೂ ಡಾ.ಹೆಚ್.ಎಸ್.ರುದ್ರೇಶ್ ಅವರ ತಪಸ್ವಿನಿ (ಊರ್ಮಿಳೆ ನಾಟಕ), ಕಣ್ಣಾಮುಚ್ಚೆ ಕಾಡೇಗೂಡೆ (ಕಥಾಸಂಕಲನ) ಮತ್ತು ಭಾವಬಿಂಬ (ಕವನ ಸಂಕಲನ) ಪುಸ್ತಕಗಳ ಬಿಡುಗಡೆ ಸಮಾರಂಭ, ಅಧ್ಯಕ್ಷತೆ: ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್ (ಸಿಪಿಕೆ), ಧೀರ ಸನ್ಯಾಸಿ ಕೃತಿ ಲೋಕಾರ್ಪಣೆ: ವಿಶ್ರಾಂತ ಪ್ರಾಂಶುಪಾಲ ಪ್ರೊ.ಕೃಷ್ಣೇಗೌಡ, ಡಾ.ಹೆಚ್.ಎಸ್.ರುದ್ರೇಶ್ ಅವರ ಕೃತಿಗಳ ಲೋಕಾರ್ಪಣೆ: ಪ್ರೊ.ಮೊರಬದ ಮಲ್ಲಿಕಾರ್ಜುನ ಸ್ಥಳ: ರೋಟರಿ ಮೈಸೂರು ವೆಸ್ಟ್ ಚಾರಿಟಬಲ್ ಟ್ರಸ್ಟ್, ಕಾಮಾಕ್ಷಿ ಆಸ್ಪತ್ರೆ ರಸ್ತೆ, ಸರಸ್ವತಿಪುರಂ, ಬೆಳಗ್ಗೆ 10.30ಕ್ಕೆ.
- **ದೇಸಿರಂಗ ಸಾಂಸ್ಕೃತಿಕ ಸಂಸ್ಥೆ:** ವಿಚಾರವಾದಿ ಪ್ರಗತಿಪರ ಚಿಂತಕ ಪ್ರೊ.ಕೆ.ರಾಮದಾಸ್ ನೆನಪಿನಲಿ... ಸಂವಾದ, ಪುಸ್ತಕ ಬಿಡುಗಡೆ, ಲೇಖನ ಪ್ರಶಸ್ತಿ ಪ್ರದಾನ ಸಮಾರಂಭ, ಉದ್ಘಾಟನೆ: ಹೈಕೋರ್ಟ್ ಹಿರಿಯ ನ್ಯಾಯಮೂರ್ತಿ ಪ್ರೊ.ರವಿವರ್ಮಕುಮಾರ್, ಅಧ್ಯಕ್ಷತೆ: ಸಾಮಾಜಿಕ ಹೋರಾಟಗಾರ್ತಿ ಇಂದಿರಾ ಕೃಷ್ಣಪ್ಪ, ಪುಸ್ತಕ ಬಿಡುಗಡೆ: ಹಿರಿಯ ಲೇಖಕ ಸನತ್‌ಕುಮಾರ್ ಬೆಳಗಲಿ, ಪ್ರಶಸ್ತಿ ಪ್ರದಾನ: ಸಾಹಿತಿ ಡಾ.ವಸುಂಧರಾ ಭೂಪತಿ, ಸ್ಥಳ: ಕಿರು ರಂಗಮಂದಿರ, ಕಲಾಮಂದಿರದ ಆವರಣ, ಬೆಳಗ್ಗೆ 10.30ಕ್ಕೆ.
- **ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರ :** ಬೇಸಿಗೆ ಮೇಳ–2022, ದಸರಾ ವಸ್ತುಪ್ರದರ್ಶನ ಮೈದಾನ, ಮಧ್ಯಾಹ್ನ 3.30ರಿಂದ ರಾತ್ರಿ 9 ಗಂಟೆಯವರೆಗೆ.
- **ವಿದ್ಯುತ್ ಪ್ರಕಾಶನ, ಮೈಸೂರು, ಕನ್ನಡ ಸಾಹಿತ್ಯ ಕಲಾಕೂಟ :** ಹಿರಿಯ ಸಾಹಿತಿ ಡಾ. ಕೆ.ಲೀಲಾ ಪ್ರಕಾಶ್ ಅವರ ಮೂರು ಕೃತಿಗಳ ಲೋಕಾರ್ಪಣೆ ಸಮಾರಂಭ, ಅಧ್ಯಕ್ಷತೆ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಕೃತಿಗಳ ಲೋಕಾರ್ಪಣೆ : ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್, ಕೃತಿಗಳನ್ನು ಕುರಿತು ಮಾತನಾಡುವವರು : ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಡಾ. ಬಿ.ವಿ. ವಸಂತ ಕುಮಾರ್, ಕನ್ನಡ ಪ್ರತಿಜ್ಞಾ ಯೌಗಂಧರಾಯಣ : ಸಾಹಿತಿ ಡಾ. ಕಬ್ಬಿನಾಲೆ ವಸಂತ ಭಾರದ್ವಾಜ್, ಸಮಾಹಿತ (ಕವನ ಸಂಕಲನ : ಸಾಹಿತಿ ಡಾ. ವೈ.ಡಿ. ರಾಜಣ್ಣ, ಪ್ರಾಸ್ತಾವಿಕ ನುಡಿ : ಕನ್ನಡ ಸಾಹಿತ್ಯ ಕಲಾಕೂಟ ಅಧ್ಯಕ್ಷ ಎಂ. ಚಂದ್ರಶೇಖರ್, ಉಪಸ್ಥಿತರು : ವಿದ್ಯುತ್ ಪ್ರಕಾಶನದ ಚಿ.ನ. ಕೇಶವಪ್ರಕಾಶ್, ಡಾ. ಕೆ. ಲೀಲಾಪ್ರಕಾಶ್, ಸ್ಥಳ: ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಭಾಂಗಣ, ಜೆಎಲ್‌ಬಿ ರಸ್ತೆ, ಸಂಜೆ 5ಕ್ಕೆ.
- **ಶ್ರೀ ನಾದಬ್ರಹ್ಮ ಸಂಗೀತ ಸಭಾ :** ವಿದ್ವಾನ್ ಎಸ್.ಆರ್. ವಿನಯ್ ಅವರಿಂದ ಕರ್ನಾಟಕ ಶಾಸ್ತ್ರೀಯ ಗಾಯನ, ವಿದ್ವಾನ್ ಅನಿರುಧ್ ಭಾರದ್ವಾಜ್–ಪಿಟೀಲು, ವಿದ್ವಾನ್ ಆರ್. ಅದಮ್ಯ ರಮಾನಂದ್–ಮೃದಂಗ, ವಿದ್ವಾನ್ ಆರ್. ಶ್ರೀನಿಧಿ ಕೌಂಡಿನ್ಯ–ಘಟಂ, ಸ್ಥಳ: ಸಂಗೀತ ಕಲಾನಿಧಿ ಕೆ. ವಾಸುದೇವಾಚಾರ್ಯ ಭವನ, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ.
- **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಯುಕ್ತೇಶಾನಂದ ಅವರಿಂದ ಶ್ರೀ ಮಾತೆಯವರ ದೈವತ್ವ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.
- **ಗಾನಭಾರತೀ :** ವಾಲ್ಮೀಕಿ ರಾಮಾಯಣ ಆಧಾರಿತ ನಾಟಕ 'ಅಯೋಧ್ಯ ಕಾಂಡ' ನಾಟಕ ಪ್ರದರ್ಶನ, ನಿರ್ದೇಶನ : ಹಿರಿಯ ರಂಗನಿರ್ದೇಶಕ ಪ್ರಸನ್ನ, ಸಂಗೀತ : ಅನುಶೆಟ್ಟಿ, ಸ್ಥಳ: ವೀಣೆ ಶೇಷಣ್ಣ ಭವನ, ಕುವೆಂಪುನಗರ, ಸಂಜೆ 7ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ : 6.05 ಚಿಂತನ–ಡಾ. ಬಸವರಾಜ್ ಬಿ. ಉತ್ತಂಗಿ, 6.20 ಗೀತಾರಾಧನ, 6.30 ಮೈಸೂರಿನ ಯೋಗ ವಿದ್ಯಾ ಪರಂಪರೆ–ಮಾಲಿಕೆ, ಲೇಖನ ಪ್ರಸ್ತುತಿ–ಡಾ.ಎ.ಎಸ್.ಚಂದ್ರಶೇಖರ್, 6.35 "ಬದುಕು ಬದಲಿಸಿದ ಶೋಧ", ಲೇಖನ ಮತ್ತು ಪ್ರಸ್ತುತಿ–ಸುರೇಂದ್ರನಾಥ್ ಸಾತ್ವಿಕ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ ಸರಣಿ, ಗಾಯನ–ಎಸ್. ಸಂಗೀತಾ, ಎಂ.ರಾಘವೇಂದ್ರ, ವ್ಯಾಖ್ಯಾನ– ಡಾ.ಹೆಚ್.ಎಂ.ಕಲಾಶ್ರೀ, 7.15 ಪ್ರಾಯೋಜಿತ ಕಾರ್ಯಕ್ರಮ "ಸಮಗ್ರ ವಿಕಾಸಕ್ಕಾಗಿ ದಿಟ್ಟ ಹೆಜ್ಜೆ", ಪ್ರಾಯೋಜಕರು ವಿಕಾಸ್ ಅಕಾಡೆಮಿ, ಕಲಬುರ್ಗಿ, 9.05 ಈಸಿ ಇಂಗ್ಲೀಷ್–ಕನ್ನಡದ ಮೂಲಕ ಇಂಗ್ಲೀಷ್ ಕೈಕೆಯ ಬಾನುಲಿ ಸರಣಿ, ರಚನೆ ಮತ್ತು ಪ್ರಸ್ತುತಿ–ಸಿ.ಕೆ. ವಿಜಯನಾರಸಿಂಹ, 9.30 ಆಕಾಶವಾಣಿಯೊಂದಿಗೆ ಸ್ವಾತಂತ್ರ್ಯ ಚಳವಳಿಯ ಪಯಣ, 9.40 ನಮ್ಮ ಆರೋಗ್ಯ "ಮೂಳೆಗಳ ಆರೋಗ್ಯ" ಕುರಿತು ಡಾ.ರೇಖಾ ವಿ.ಭಟ್ ಅವರೊಂದಿಗೆ ಮಾತುಕತೆ, 10.00 ಕೇಳಿಗಿಳಿಗಳೇ–ಕಥೆ ಕೇಳುಪುಟ್ಟಾ–ಅಮೃತ ವಿದ್ಯಾಲಯಂನ ಮಕ್ಕಳಿಂದ ಕಾರ್ಯಕ್ರಮ, 10.30 ಮಕ್ಕಳ ಮಂಟಪ "ನಂದಗೋಕುಲ" ಪ್ರಸ್ತುತಿ– ಕೆ.ಬಿ. ಮೀನಾ, 11.15 ಯೋಗದತ್ತ ಜಗತ್ತು–ವಿಶೇಷ ಸರಣಿ "ಮಹಿಳೆ ಮತ್ತು ಯೋಗ" ಕುರಿತು ಡಾ.ಜಯಶ್ರೀ ಬೆಂಗೇರಿ ಅವರೊಡನೆ ಸಂದರ್ಶನ **ಮಧ್ಯಾಹ್ನ:** 12.35 ದೇವರನಾಮ–ಅಂಬುಜಾ ಶ್ರೀಧರ್, 12.45 ಜನಪದ ಸಂಗೀತ–ಮರಿಸಿದ್ದಮ್ಮ ಮತ್ತು ತಂಡ, 1.20 ಅಂತಾರಾಷ್ಟ್ರೀಯ ಯೋಗ ದಿನದ ಅಂಗವಾಗಿ "ಯೋಗ ಸುಯೋಗ" ಬಾನುಲಿ ಸರಣಿ ಭಾಗವಹಿಸುವವರು ಡಾ.ಸ್ಫೂರ್ತಿ, 2.35 ಚಲನ ಚಿತ್ರ ಧ್ವನಿವಾಹಿನಿ "ಮಲಯ ಮಾರುತ", 3.40 ಯಕ್ಷಗಾನ ತಾಳ ಮದ್ದಲೆ, ಪ್ರಸಂಗ "ಶ್ರೀರಾಮ ಪರಂಧಾಮ", ಪ್ರಸ್ತುತಿ–ಪಡುಬಿದ್ರಿಎಯ ಗಜಾನನ ಯಕ್ಷ ಕಲಾರಂಗದ ಕಲಾವಿದರು, 9.05ಚಿಣ್ಣರ ಸುದ್ದಿ ಲೋಕ, ಪ್ರಚಲಿತ ವಿದ್ಯಮಾನಗಳ ವಾರ್ತಾ ಸಂಚಿಕೆ, 9.30 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ–ಮಿನಾಲ್ ಮಟೆಗಾಂವ್‌ಕರ್–ಗಾಯನ, 11.00 ಸವಿನೆನಪು

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 19 ಭಾನುವಾರ 2022

ಸಂಪುಟ: 43 | ಸಂಚಿಕೆ: 64 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4


ದ್ವಿತೀಯ ಪಿಯು ಫಲಿತಾಂಶ ಪ್ರಕಟ

ಶೇ.61.88ರಷ್ಟು ತೇರ್ಗಡೆ

ಗ್ರಾಮೀಣರೇ ಮೇಲು

- ಕಳೆದ ಬಾರಿಗಿಂತ ಶೇ.0.8ರಷ್ಟು ಹೆಚ್ಚು ಉತ್ತೀರ್ಣ: ವಿದ್ಯಾರ್ಥಿನಿಯರ ಪಾರುಪತ್ಯ
- ದಕ್ಷಿಣ ಕನ್ನಡ ಪ್ರಥಮ, ಉಡುಪಿ ದ್ವಿತೀಯ, ವಿಜಯಪುರ ತೃತೀಯ; ಚಿತ್ರದುರ್ಗಕ್ಕೆ ಕಡೇ ಸ್ಥಾನ
- ಗಣಿತದಲ್ಲಿ ನೂರಕ್ಕೆ ನೂರು ಅಂಕ ಗಳಿಸಿದ 14 ಸಾವಿರ ವಿದ್ಯಾರ್ಥಿಗಳು

ಬೆಂಗಳೂರು,ಜೂ.18(ಕೆಎಂಶಿ)–ಕಳೆದ ಏಪ್ರಿಲ್–ಮೇ ಮಾಹೆಯಲ್ಲಿ ನಡೆದ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಎಂದಿನಂತೆ ಬಾಲಕಿಯರು ಮೇಲುಗೈ ಸಾಧಿಸಿದ್ದರೆ, ಗ್ರಾಮೀಣ ವಿದ್ಯಾರ್ಥಿಗಳು ನಗರ ಪ್ರದೇಶದವರಿಗಿಂತ ಮುಂದಿದ್ದಾರೆ. ವಿಜ್ಞಾನ, ವಾಣಿಜ್ಯ ಹಾಗೂ ಕಲಾ ವಿಭಾಗದಲ್ಲಿ ಪ್ರಥಮ ಸ್ಥಾನಗಳನ್ನು ಪಡೆಯಲು ಪ್ರತಿಭಾವಂತ ವಿದ್ಯಾರ್ಥಿಗಳು ಪೈಪೋಟಿ ನಡೆಸಿದ್ದರೆ, ಗಣಿತ ವಿಭಾಗದಲ್ಲಿ 14 ಸಾವಿರ ವಿದ್ಯಾರ್ಥಿಗಳು ಪೂರ್ಣ ಅಂಕ ಗಳಿಸಿದ್ದಾರೆ.



ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ.ನಾಗೇಶ್, ಬಳ್ಳಾರಿ ಜಿಲ್ಲೆಯ ಕೊಟ್ರೇಶ್ ಕಾಲೇಜಿನ ಕಲಾ ವಿಭಾಗದ ಇಬ್ಬರು ವಿದ್ಯಾರ್ಥಿಗಳು ಪ್ರಥಮ ಸ್ಥಾನ ಪಡೆದಿದ್ದಾರೆ. ಈ ಬಾರಿ ಶೇ.61.88ರಷ್ಟು ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. 2020ರಲ್ಲಿ ನಡೆದ ದ್ವಿತೀಯ ಪಿಯು ಪರೀಕ್ಷೆಗೆ ಹಾಜರಾದ ಒಟ್ಟು ವಿದ್ಯಾರ್ಥಿಗಳ ಪೈಕಿ ಶೇ.61.80ರಷ್ಟು ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದರು. ಕಳೆದ ಬಾರಿಗಿಂತ ಈ ಬಾರಿ ಶೇ.0.8ರಷ್ಟು ಹೆಚ್ಚು ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ ಎಂದು ಮಾಹಿತಿ ನೀಡಿದರು. ▶ 7ನೇ ಪುಟಕ್ಕೆ

ಸಿಮ್ರಾನ್ ರಾಜ್ಯಕ್ಕೆ ಪ್ರಥಮ



ಬೆಂಗಳೂರಿನ ಸಿಮ್ರಾನ್ ಶೇಷರಾವ್ 600ಕ್ಕೆ 598 ಅಂಕ ಗಳಿಸಿ, ರಾಜ್ಯಕ್ಕೆ ಟಾಪರ್ ಆಗಿದ್ದಾರೆ. ಈಕೆ ಜಯನಗರದ ಆರ್‌ವಿ ಕಾಲೇಜು ವಿಜ್ಞಾನ ವಿಭಾಗದ ವಿದ್ಯಾರ್ಥಿ ಹಾಗೂ ಶೇಷರಾವ್–ರೂಪರಾವ್ ದಂಪತಿ ಪುತ್ರಿ. ವಿಜ್ಞಾನ ವಿಭಾಗದಲ್ಲಿ ರಾಜ್ಯದ ನಾಲ್ವರು 597 ಹಾಗೂ 7 ವಿದ್ಯಾರ್ಥಿಗಳು 596 ಅಂಕ ಪಡೆದಿದ್ದಾರೆ. ಬಿ.ಆರ್.ನೇಹಾ, ಮನ್ವಾ ವಿನಯಕ್ ಕೇಜ್ರಿವಾಲ್, ನೀಲು ಸಿಂಗ್, ಆಕಾಶ್‌ದಾಸ್ ತಲಾ 596 ಅಂಕಗಳೊಂದಿಗೆ ವಾಣಿಜ್ಯ ವಿಭಾಗದಲ್ಲಿ ಪ್ರಥಮ ಸ್ಥಾನದಲ್ಲಿದ್ದು, 6 ಮಂದಿ 595 ಅಂಕ ಪಡೆದಿದ್ದಾರೆ. ಇನ್ನು ಬಿ.ಬಿ.ಶ್ವೇತಾ ಹಾಗೂ ಮಡಿವಾಳರ ಸಹನಾ 594 ಅಂಕಗಳೊಂದಿಗೆ ಕಲಾ ವಿಭಾಗದಲ್ಲಿ ಪ್ರಥಮ ಸ್ಥಾನ ಗಳಿಸಿದ್ದಾರೆ. ನಾಲ್ವರು 593, ಓರ್ವ 592, ನಾಲ್ವರು 591 ಅಂಕ ಪಡೆದಿದ್ದಾರೆ.

ಮೈಸೂರು ಜಿಲ್ಲೆಗೆ 17ನೇ ಸ್ಥಾನ

- ಈ ಬಾರಿ ಶೇ.3ರಷ್ಟು ಫಲಿತಾಂಶ ಇಳಿಕೆ
- ಜಿಲ್ಲೆಯಲ್ಲಿ ಶೇ.59.86ರಷ್ಟು ಫಲಿತಾಂಶ

ಮೈಸೂರು, ಜೂ.18 (ಎಂಟಿವೈ)– ದ್ವಿತೀಯ ಪಿಯುಸಿ ಪರೀಕ್ಷೆಯ ಫಲಿತಾಂಶದಲ್ಲಿ ಮೈಸೂರು ಜಿಲ್ಲೆ ಶೇ.64.45ರಷ್ಟು ಫಲಿತಾಂಶ ಗಳಿಸಿ ರಾಜ್ಯದಲ್ಲೇ 17ನೇ ಸ್ಥಾನ ಪಡೆದಿದೆ. ಕಳೆದ ವರ್ಷದ ಫಲಿತಾಂಶಕ್ಕೆ ಹೋಲಿಸಿದರೆ ಈ ಬಾರಿ ಜಿಲ್ಲೆಯ ಫಲಿತಾಂಶ ಶೇ.3ರಷ್ಟು ಇಳಿಕೆಯಾಗಿದೆ.

ಮೈಸೂರು ಜಿಲ್ಲೆಯಲ್ಲಿ ಈ ವರ್ಷ 35,187 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು, ಅವರಲ್ಲಿ 21,063 ವಿದ್ಯಾರ್ಥಿಗಳು ಉತ್ತೀರ್ಣರಾಗುವ ಮೂಲಕ ಜಿಲ್ಲೆಯ ಒಟ್ಟಾರೆ ಫಲಿತಾಂಶ ಶೇ.59.86ರಷ್ಟು ದಾಖಲಾಗಿದೆ. ಆದರೆ, ಪದವಿ ಪೂರ್ವ ಶಿಕ್ಷಣ ಇಲಾಖೆ ಈ ಫಲಿತಾಂಶವನ್ನು ಪರಿಗಣಿಸುವುದಿಲ್ಲ. ಬದಲಿಗೆ ಹೊಸದಾಗಿ ಪರೀಕ್ಷೆ ಬರೆದ ವಿದ್ಯಾರ್ಥಿಗಳ ಫಲಿತಾಂಶವನ್ನು ಶೇಕಡವಾರು ಅಂಕಿ–ಅಂಶಕ್ಕೆ ಪರಿಗಣಿಸಿದೆ. ಈ ವರ್ಷ ಹೊಸದಾಗಿ 31,1194 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದರು. ಅವರಲ್ಲಿ 20,106 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ. ಖಾಸಗಿಯಾಗಿ ಪರೀಕ್ಷೆ ಬರೆದಿದ್ದ 1065ರಲ್ಲಿ 281 ಮಂದಿ ಪಾಸ್ ಆಗಿದ್ದು, ಆ ವರ್ಗದ ಫಲಿತಾಂಶ ಶೇ.26.38ರಷ್ಟು ದಾಖಲಾಗಿದೆ. ಪುನರಾವರ್ತಿತ 2,928 ವಿದ್ಯಾರ್ಥಿಗಳಲ್ಲಿ 676 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದು, ಫಲಿತಾಂಶ ಶೇ.23.09ರಷ್ಟಾಗಿದೆ. ಒಟ್ಟಾರೆ ಫಲಿತಾಂಶ ಅವಲೋಕಿಸಿದರೆ ಈ ಬಾರಿ ಶೇ.64.45ರಷ್ಟು ಫಲಿತಾಂಶ ಪಡೆದು ▶ 7ನೇ ಪುಟಕ್ಕೆ

ಮೈಸೂರು ಮಹಾಜನದ ಸೂರ್ಯರಂಗನ್, ಆದಿಚುಂಚನಗಿರಿ ಕಾಲೇಜಿನ ಕಾರ್ತಿಕ್ ಮೌದ್ಗಲ್ಯ ವಿಜ್ಞಾನದಲ್ಲಿ ಮೈಸೂರು ಜಿಲ್ಲೆಯ ಟಾಪರ್ಸ್

ನವಕಿಸ್‌ನ ವರ್ಷಿಣಿ ವಾಣಿಜ್ಯ ವಿಭಾಗದಲ್ಲಿ ಮೇರು ಶ್ರೇಣಿ

ಮೈಸೂರು, ಜೂ.18(ಎಂಟಿವೈ)–ಮೈಸೂರು ನಗರದ ಇಬ್ಬರು ವಿಜ್ಞಾನ ವಿಭಾಗದ ವಿದ್ಯಾರ್ಥಿಗಳು ಹಾಗೂ ವಾಣಿಜ್ಯ ವಿಭಾಗದ ಓರ್ವ ವಿದ್ಯಾರ್ಥಿನಿ 600ಕ್ಕೆ 594 ಅಂಕಗಳನ್ನು ಗಳಿಸುವ ಮೂಲಕ ಜಿಲ್ಲೆಯ ಟಾಪರ್‌ಗಳಾಗಿದ್ದಾರೆ.


ಸೂರ್ಯರಂಗನ್

ಮೈಸೂರು ನಗರದ ಮಹಾಜನ ಪದವಿಪೂರ್ವ ಕಾಲೇಜಿನ ಹೆಚ್.ಪಿ. ಸೂರ್ಯರಂಗನ್, ಕುವೆಂಪುನಗರದ ಆದಿಚುಂಚನಗಿರಿ ಪಿಯು ಕಾಲೇಜಿನ ಎಸ್.ವಿ.ಕಾರ್ತಿಕ್ ಮೌದ್ಗಲ್ಯ ಹಾಗೂ ಬನ್ನೂರು ರಸ್ತೆ ನವಕಿಸ್ ಕಾಲೇಜಿನ ಎಸ್.ವರ್ಷಿಣಿ ಜಿಲ್ಲೆಯ ಟಾಪರ್‌ಗಳು. ವಿಜ್ಞಾನ ವಿಭಾಗದ ಹೆಚ್.ಪಿ.ಸೂರ್ಯರಂಗನ್, ಕನ್ನಡ, ಭೌತಶಾಸ್ತ್ರ, ರಸಾಯನ ಶಾಸ್ತ್ರ, ಗಣಿತಶಾಸ್ತ್ರ ಹಾಗೂ ಗಣಕಶಾಸ್ತ್ರ(ಕಂಪ್ಯೂಟರ್) ವಿಷಯಗಳಲ್ಲಿ 100ಕ್ಕೆ 100 ಅಂಕ ಪಡೆದಿದ್ದು, ಇಂಗ್ಲಿಷ್‌ನಲ್ಲಿ ಮಾತ್ರ 94 ಅಂಕ ಗಳಿಸಿದ್ದಾರೆ. ಈತ ಮೈಸೂರಿನ ಪಡುವಾರಹಳ್ಳಿ (ವಿನಾಯಕನಗರ) ನಿವಾಸಿ ಹೆಚ್.ಜೆ.ಪ್ರಸನ್ನ ಮತ್ತು ಎ.ಎಸ್. ಲಲಿತ ದಂಪತಿ ಪುತ್ರ. ಸೂರ್ಯರಂಗನ್‌ನನ್ನು ಕಾಲೇಜಿನ ಆಡಳಿತ ಮಂಡಳಿ ಅಧ್ಯಕ್ಷ ಟಿ.ಮುರಳೀಧರ್ ಭಾಗವತ್, ಕಾರ್ಯದರ್ಶಿ ವಿಜಯಲಕ್ಷ್ಮೀ ಮುರಳೀಧರ್, ಪ್ರಾಚಾರ್ಯರಾದ ಉಮಾರಾಣಿ ಮತ್ತಿತರರು ಅಭಿನಂದಿಸಿದ್ದಾರೆ. ಕುವೆಂಪುನಗರದ ಆದಿಚುಂಚನಗಿರಿ ಪಿಯು ಕಾಲೇಜಿನ ಎಸ್.ವಿ.ಕಾರ್ತಿಕ್ ಮೌದ್ಗಲ್ಯ ಕೂಡ 594 ಅಂಕ ಗಳಿಸಿದ್ದು, ಈತ ಎಸ್.ಆರ್. ವೆಂಕಟೇಶ್ ಹಾಗೂ ಬಿ.ಎ.ರೂಪಾ ದಂಪತಿ ಪುತ್ರ. ಮೈಸೂರಿನ ವಿವಿಎಸ್ ಜಿಜೆ ಪಿಯು ಕಾಲೇಜಿನ ಸಿ.ಮಯೂರ ಆದಿತ್ಯ 593 ಅಂಕ ಪಡೆದು ಮೂರನೇ ಸ್ಥಾನ ಪಡೆದಿದ್ದು, ▶ 7ನೇ ಪುಟಕ್ಕೆ

3 ವಿಭಾಗಗಳ ಮೊದಲ ಮೂವರು

ವಿಜ್ಞಾನ ವಿಭಾಗ: ಹೆಚ್.ಪಿ.ಸೂರ್ಯರಂಗನ್–594, ಎಸ್.ವಿ.ಕಾರ್ತಿಕ್ ಮೌದ್ಗಲ್ಯ–594, ಸಿ.ಮಯೂರ ಆದಿತ್ಯ–593 **ವಾಣಿಜ್ಯ ವಿಭಾಗ:** ಎಸ್.ವರ್ಷಿಣಿ–594, ಎಸ್.ಪಿ.ಇಂಚರ–593, ಕೆ.ಎನ್.ಭೂಮಿಕಾ–590 ಕಲಾ ವಿಭಾಗ: ನಿದಾ ತರ್ನ್ನುಮ್–581, ಆರ್.ರೀಶಾ–579, ಎಸ್.ಕೆ.ಕೀರ್ತನಾ–578

ಕಲಾ ಹಾಗೂ ವಾಣಿಜ್ಯ ವಿಭಾಗದ ಮೊದಲ ಮೂರು ಸ್ಥಾನಗಳನ್ನು ವಿದ್ಯಾರ್ಥಿನಿಯರು ಹಾಗೂ ವಿಜ್ಞಾನ ವಿಭಾಗದ 3 ಸ್ಥಾನಗಳಲ್ಲಿ ವಿದ್ಯಾರ್ಥಿಗಳು ಮಿಂಚಿರುವುದು ವಿಶೇಷವಾಗಿದ್ದು, ಇವರನ್ನು ಡಿಡಿಪಿಯು ಶ್ರೀನಿವಾಸ್ ಅಭಿನಂದಿಸಿದ್ದಾರೆ.

ಶಾಸಕ ಸಾರಾ ಮಹೇಶ್ ಪತ್ನಿ ಅನಿತಾ ಫಸ್ಟ್ ಕ್ಲಾಸ್ ಪಾಸ್


ಅನಿತಾ ಮಹೇಶ್

ಭೇರ್ಯ,ಜೂ.18(ಮಹೇಶ್)–ಕೆ.ಆರ್.ನಗರ ಶಾಸಕ ಸಾ.ರಾ. ಮಹೇಶ್ ಅವರ ಪತ್ನಿ ಶ್ರೀಮತಿ ಅನಿತಾ ಮಹೇಶ್ ಅವರು ದ್ವಿತೀಯ ಪಿಯು ಪರೀಕ್ಷೆ ಕಲಾ ವಿಭಾಗದಲ್ಲಿ 418 ಅಂಕದೊಂದಿಗೆ ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾಗಿದ್ದಾರೆ.

ಕನ್ನಡ 98, ಇಂಗ್ಲೀಷ್ 70, ಇತಿಹಾಸ 70, ಅರ್ಥಶಾಸ್ತ್ರ 56, ಸಮಾಜಶಾಸ್ತ್ರ 70 ಹಾಗೂ ರಾಜ್ಯಶಾಸ್ತ್ರ ವಿಷಯದಲ್ಲಿ 55 ಅಂಕಗಳನ್ನು ಪಡೆದಿದ್ದಾರೆ. ಅನಿತಾ ಮಹೇಶ್ ಅವರು 1993ರಲ್ಲಿ ಎಸ್‌ಎಸ್‌ಎಲ್‌ಸಿಯಲ್ಲಿ ತೇರ್ಗಡೆಯಾಗಿದ್ದರು. ನಂತರ ಮುಂದೆ ವ್ಯಾಸಂಗ ಮುಂದುವರೆಸಲು ಸಾಧ್ಯವಾಗಿರಲಿಲ್ಲ. ಕಾರಣ 30

30 ವರ್ಷದ ನಂತರ ಓದಿನ ಆಸಕ್ತಿ: ಪ್ರಶಂಸೆ

ವರ್ಷಗಳ ನಂತರ, ಈಗ ದ್ವಿತೀಯ ಪಿಯುಸಿ ಪರೀಕ್ಷೆಯನ್ನು ಖಾಸಗಿಯಾಗಿ ಬರೆದು ತೇರ್ಗಡೆಯಾಗುವಲ್ಲಿ ಯಶಸ್ವಿಯಾಗಿದ್ದಾರೆ. ಇವರ ಹಿರಿಯ ಪುತ್ರ ಧನುಷ್ ಎಂಬಿಬಿಎಸ್ ಪೂರ್ಣಗೊಳಿಸಿ, ಬೆಂಗಳೂರಿನ ಪ್ರತಿಷ್ಠಿತ ಕಾಲೇಜಿನಲ್ಲಿ ಎಂಎಸ್ ಮಾಡುತ್ತಿದ್ದರೆ, ಕಿರಿಯ ಪುತ್ರ ಜಯಂತ್ ಉದ್ಯಮಿ. ಜೊತೆಗೆ ತಂದೆ ಸಾ.ರಾ.ಮಹೇಶ್ ಅವರಿಗೆ ರಾಜಕೀಯವಾಗಿ ನೆರವಾಗುತ್ತಿದ್ದಾರೆ. ಇದೆಲ್ಲದರ ಮಧ್ಯೆ ಅನಿತಾ ಅವರು ದ್ವಿತೀಯ ಪಿಯು ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದು, ಅವರನ್ನು ಹಲವರು ಅಭಿನಂದಿಸಿದ್ದಾರೆ. ಅಲ್ಲದೆ ಅವರ ಓದಿನ ಆಸಕ್ತಿ ಬಗ್ಗೆ ಪ್ರಶಂಸಿಸಿದ್ದಾರೆ.

ಜೂ.21ರಂದು ಎಲ್ಲಾ ಶಾಲೆಗಳಲ್ಲಿ ಯೋಗ ದಿನಾಚರಣೆ

ಸಾರ್ವಜನಿಕ ಶಿಕ್ಷಣ ಇಲಾಖೆ ಆದೇಶ




ಬೆಂಗಳೂರು, ಜೂ. 18(ಕೆಎಂಶಿ)–ಇದೇ 21ರಂದು ರಾಜ್ಯದ ಎಲ್ಲ ಶಾಲೆಗಳಲ್ಲಿ ಅಂತಾರಾಷ್ಟ್ರೀಯ ಯೋಗ ದಿನ ಆಚರಿಸುವಂತೆ ಸಾರ್ವಜನಿಕ ಶಿಕ್ಷಣ ಇಲಾಖೆ ಆದೇಶಿಸಿದೆ.

ಸ್ಥಳೀಯ ಚುನಾಯಿತ ಪ್ರತಿನಿಧಿಗಳು, ಅಧಿಕಾರಿಗಳು, ಎಸ್.ಡಿ.ಎಂ.ಸಿ ಸದಸ್ಯರು, ಶಿಕ್ಷಕರು ಹಾಗೂ ಸ್ಥಳೀಯ ಯೋಗ ಸಂಸ್ಥೆಗಳ ಸಹಕಾರದೊಂದಿಗೆ ರಾಜ್ಯದ ಎಲ್ಲ ಶಾಲೆಗಳಲ್ಲಿ ಯೋಗ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಬೇಕೆಂದು ಸೂಚಿಸಲಾಗಿದೆ.

ಅಂತಾರಾಷ್ಟ್ರೀಯ ಯೋಗ ದಿನದ ಪ್ರಯುಕ್ತ ರಾಜ್ಯದ ಎಲ್ಲ ಶಾಲೆಗಳಲ್ಲಿ ಅಂದು ಅರ್ಧ ದಿನ ಶಾಲೆಯನ್ನು ನಡೆಸಲು ಸೂಚಿಸಲಾಗಿದೆ. ಆ ದಿನದ ಮೊದಲ ಒಂದೂವರೆ ಗಂಟೆಯ ಅವಧಿಯಲ್ಲಿ ವಿದ್ಯಾರ್ಥಿಗಳ ವಯಸ್ಸಿಗೆ ಅನುಗುಣವಾದ ಯೋಗಾಸನಗಳ ಅಭ್ಯಾಸ ಹಾಗೂ ಪ್ರದರ್ಶನಗಳನ್ನು ಹಮ್ಮಿಕೊಳ್ಳಬೇಕೆಂದು ತಿಳಿಸಿದೆ. ಆ ದಿನದ ಅರ್ಧ ದಿನ ಪಾಠಗಳನ್ನು ಸರಿದೂಗಿಸಲು ಜೂ.25 ಶನಿವಾರದಂದು ಪೂರ್ಣ ದಿನದ ಶಾಲೆಯನ್ನು ನಡೆಸುವಂತೆ ಆದೇಶಿಸಲಾಗಿದೆ.

ಪಿಯುಸಿ ಪರೀಕ್ಷೆಯಲ್ಲಿ ಫೇಲ್, ಕಡಿಮೆ ಅಂಕ ಬಂದ ಕಾರಣಕ್ಕೆ

ಶ್ರೀರಂಗಪಟ್ಟಣ, ಕುಶಾಲನಗರ ಸೇರಿ ರಾಜ್ಯದಲ್ಲಿ ಆರು ವಿದ್ಯಾರ್ಥಿಗಳ ಆತ್ಮಹತ್ಯೆ


ಸ್ಪಂದನಾ · ಸಂಧ್ಯಾ · ಪವಿತ್ರ · ಪ್ರಣಬ್ · ಪೂಜಾ · ಸುಹಾಸಿನಿ

ಮೈಸೂರು, ಜೂ.18–ದ್ವಿತೀಯ ಪಿಯುಸಿಯಲ್ಲಿ ಅನುತ್ತೀರ್ಣ ಹಾಗೂ ನಿರೀಕ್ಷಿತ ಅಂಕ ಗಳಿಸಲಿಲ್ಲ ಎಂಬ ಕಾರಣಕ್ಕಾಗಿ ಮನನೊಂದು ಶ್ರೀರಂಗಪಟ್ಟಣ, ಕುಶಾಲನಗರ ಸೇರಿದಂತೆ ರಾಜ್ಯದಲ್ಲಿ ಆರು ವಿದ್ಯಾರ್ಥಿಗಳು ಆತ್ಮಹತ್ಯೆಗೆ ಶರಣಾಗಿದ್ದಾರೆ.

ಕೊಡಗು ಜಿಲ್ಲೆ ಕುಶಾಲನಗರ ತಾಲೂಕು ಹೆರೂರು ಗ್ರಾಮದ ಸಂಧ್ಯಾ ದ್ವಿತೀಯ ಪಿಯುಸಿಯಲ್ಲಿ ತೇರ್ಗಡೆ ಹೊಂದಿದ್ದರೂ, ನಿರೀಕ್ಷಿತ ಅಂಕ ಗಳಿಸಿಲ್ಲವೆಂದು ಆತ್ಮಹತ್ಯೆಗೆ ಶರಣಾದರೆ, ಶ್ರೀರಂಗಪಟ್ಟಣ ತಾಲೂಕು ಮಹದೇವಪುರ ಗ್ರಾಮದ ಎಂ.ಜೆ.ಸ್ಪಂದನಾ, ಗದಗದ ಹತ್ತಿ ಗ್ರಾಮದ ಪವಿತ್ರ ಲಿಂಗದಾಳ ಮತ್ತು ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲೂಕು ಕಡ್ಲೆ ಗ್ರಾಮದ ಪ್ರಣಬ್ ಈಶ್ವರ ನಾಯ್ಕ್ ಅನುತ್ತೀರ್ಣಗೊಂಡಿದ್ದರಿಂದ ನೇಣಿಗೆ ಶರಣಾಗಿದ್ದಾರೆ.

ಕುಶಾಲನಗರ ತಾಲೂಕು ಹೆರೂರು ಗ್ರಾಮದ ನಿವೃತ್ತ ಯೋಧ ಶುಭಾಷ್ ಪುತ್ರಿ ಸಂಧ್ಯಾ(18) ಕುಶಾಲನಗರದ ವಿವೇಕಾನಂದ ಪ್ರಥಮ ದರ್ಜೆ ಕಾಲೇಜಿನಲ್ಲಿ ದ್ವಿತೀಯ ಪಿಯುಸಿ ವ್ಯಾಸಂಗ ಮಾಡುತ್ತಿದ್ದರು. ಎಸ್‌ಎಸ್‌ಎಲ್‌ಸಿಯಲ್ಲಿ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದ ಈಕೆ, ದ್ವಿತೀಯ ಪಿಯುಸಿಯಲ್ಲಿ ಶೇ.90ಕ್ಕಿಂತ ಹೆಚ್ಚು ಅಂಕ ಗಳಿಸುವ ನಿರೀಕ್ಷೆಯಲ್ಲಿದ್ದಳಂತೆ. ಇಂದು ಪರೀಕ್ಷಾ ಫಲಿತಾಂಶ ಹೊರ ಬಿದ್ದಿದ್ದು, ಈಕೆಗೆ ಶೇ.67ರಷ್ಟು (404) ಅಂಕ ಬಂದಿದ್ದರಿಂದ ಮನನೊಂದು ಮನೆಯಲ್ಲೇ ನೇಣಿಗೆ ಶರಣಾಗಿದ್ದಾಳೆ. ಈ ಸಂಬಂಧ ಕುಶಾಲನಗರ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಂಡ್ಯದ ಸ್ಯಾಂತೋಮ್ ಪದವಿ ಪೂರ್ವ ಕಾಲೇಜಿನಲ್ಲಿ ದ್ವಿತೀಯ ಪಿಯುಸಿ ವ್ಯಾಸಂಗ ಮಾಡುತ್ತಿದ್ದ ಶ್ರೀರಂಗಪಟ್ಟಣ ತಾಲೂಕು ಮಹದೇವಪುರ ಗ್ರಾಮದ ▶ 7ನೇ ಪುಟಕ್ಕೆ

ಹಾಲಿನ ಟ್ಯಾಂಕರ್‌ಗೆ ಕಾರು ಡಿಕ್ಕಿ: ಇಬ್ಬರು ಯುವತಿಯರು ಸಾವು



ಹುಣಸೂರು, ಜೂ.18–ಟಯರ್ ಪಂಕ್ಚರ್ ಆದ ಪರಿಣಾಮ ನಿಯಂತ್ರಣ ತಪ್ಪಿದ ಕಾರು ಹಾಲಿನ ಟ್ಯಾಂಕರ್‌ಗೆ ಡಿಕ್ಕಿ ಹೊಡೆದು ಇಬ್ಬರು ಯುವತಿಯರು ಸಾವನ್ನಪ್ಪಿದ ಘಟನೆ ಹುಣಸೂರು ತಾಲೂಕು ರಂಗಯ್ಯನಕೊಪ್ಪಲು ಗೇಟ್ ಬಳಿ ಶನಿವಾರ ಸಂಜೆ ಸಂಭವಿಸಿದೆ.

ಕಾರಿನಲ್ಲಿ ದೊರೆತ ದಾಖಲೆಗಳನ್ನಾಧರಿಸಿ ಮೃತ ಯುವತಿಯರನ್ನು ಮೈಸೂರಿನ ಆಲನಹಳ್ಳಿಯ ಚಂದ್ರಶೇಖರ್ ಮೂರ್ತಿ ಎಂಬುವರ ಪುತ್ರಿ ಸಾಫ್ಟ್‌ವೇರ್ ಇಂಜಿನಿಯರ್ ಜೀವಿತಾ (24) ಮತ್ತು ಆಕೆ ಸ್ನೇಹಿತೆ ಬೆಂಗಳೂರಿನ ▶ 7ನೇ ಪುಟಕ್ಕೆ

2023ಕ್ಕೆ ಕರ್ನಾಟಕದಲ್ಲಿ ಬಿಜೆಪಿ ಮತ್ತೆ ಅಧಿಕಾರಕ್ಕೆ

ಚಿತ್ರದುರ್ಗ: ಮುಂದಿನ ವರ್ಷ ನಡೆಯಲಿರುವ ವಿಧಾನಸಭಾ ಚುನಾವಣೆಯಲ್ಲಿ ಕರ್ನಾಟಕದಲ್ಲಿ ಪಕ್ಷ ಮತ್ತೊಮ್ಮೆ ಅಧಿಕಾರಕ್ಕೆ ಬರುವ ಸಂಪೂರ್ಣ ವಿಶ್ವಾಸವಿದೆ. ರಾಜ್ಯದ ಪ್ರತಿ ಗ್ರಾಮ ಪಂಚಾಯಿತಿಯಲ್ಲಿ ಕಮಲ ಅರಳಿದರೆ ಇದು ಸುಲಭವಾಗಲಿದೆ ಎಂದು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅಭಿಪ್ರಾಯಪಟ್ಟರು.



ಇಲ್ಲಿನ ಮುರುಘಾ ಮಠದ ಅನುಭವ ಮಂಟಪದಲ್ಲಿ ಬಿಜೆಪಿ ಶನಿವಾರ ಏರ್ಪಡಿಸಿದ್ದ ಗ್ರಾಮೀಣ ಮತ್ತು ನಗರ ಸ್ಥಳೀಯ ಸಂಸ್ಥೆಗಳ ಜನಪ್ರತಿನಿಧಿಗಳ ರಾಜ್ಯಮಟ್ಟದ ಸಮಾವೇಶದಲ್ಲಿ ಅವರು ಮಾತನಾಡಿದರು. ಕೇಂದ್ರ ಮತ್ತು ರಾಜ್ಯ ಸರ್ಕಾರ ಕಾರ್ಯವೈಖರಿಯನ್ನು ಶ್ಲಾಘಿಸಿದರು. ಜನಪರ ಯೋಜನೆಗಳ ಬಗ್ಗೆ ಸವಿಸ್ತಾರವಾಗಿ ವಿವರಿಸಿ, ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಸರ್ಕಾರದ ಸೌಲಭ್ಯಗಳು ತಲುಪಿಸುವ ಜವಾಬ್ದಾರಿ ಸ್ಥಳೀಯ ಸಂಸ್ಥೆಗಳ ಜನಪ್ರತಿನಿಧಿಗಳ ಮೇಲಿದೆ ಎಂಬುದನ್ನು ನೆನಪಿಸಿದರು. ಪ್ರಧಾನಿ ಮೋದಿ ಅವರು ಗ್ರಾಮೀಣಾಭಿವೃದ್ಧಿಗೆ ಒತ್ತು ನೀಡುತ್ತಿದ್ದಾರೆ. ಗ್ರಾಮ ವಿಕಾಸ ಯೋಜನೆಗೆ ಅಗತ್ಯ ಅನುದಾನ ಬಿಡುಗಡೆ ಮಾಡಲಾಗುತ್ತಿದೆ. ಡಿಜಿಟಲ್ ಇಂಡಿಯಾ ರೂಪುಗೊಳ್ಳುತ್ತಿದ್ದು, ಹಳ್ಳಿಗಳಲ್ಲಿ ಆಪ್ಟಿಕಲ್ ಫೈಬರ್ ಕೇಬಲ್ ಅಳವಡಿಕೆ ಕಾರ್ಯ ನಡೆಯುತ್ತಿದೆ. ಹಳ್ಳಿಗಳು ಜೋಡಣೆಯಾದರೆ ಗ್ರಾಮ ಪಂಚಾಯಿತಿಗಳು ಸಶಕ್ತೀಕರಣಗೊಳ್ಳುತ್ತವೆ ಎಂದರು.

ಪ್ರಧಾನಮಂತ್ರಿ ಆವಾಸ್ ಯೋಜನೆ, ಆಯುಷ್ಮಾನ್, ಗರೀಬ್ ಕಲ್ಯಾಣ್, ಕಿಸಾನ್ ಸಮ್ಮಾನ್ ಯೋಜನೆಗಳ ಪ್ರಗತಿ ಕರ್ನಾಟಕದಲ್ಲಿ ಅತ್ಯುತ್ತಮವಾಗಿದೆ. ಬಯಲು ಶೌಚಮುಕ್ತ ರಾಜ್ಯವಾಗಿ ಕರ್ನಾಟಕ ಹೊರಹೊಮ್ಮಿದೆ. ಅರ್ಹ ಫಲಾನುಭವಿಗಳನ್ನು ಗುರುತಿಸಿ ನೋಂದಣಿ ಮಾಡಿಸುವ ಹೊಣೆಗಾರಿಕೆ ಕಾರ್ಯಕರ್ತರ ಮೇಲಿದೆ ಎಂದರು.

ಮೈಸೂರು, ನಾಗನಹಳ್ಳಿ ರೈಲು ನಿಲ್ದಾಣಗಳ ಅಂಗಳ

488 ಕೋಟಿ ವೆಚ್ಚದಲ್ಲಿ ಮರು ನಿರ್ಮಾಣ

ಮೈಸೂರು, ಜೂ.18(ಆರ್‌ಕೆ)–ಮೈಸೂರು ಮತ್ತು ನಾಗನಹಳ್ಳಿ ರೈಲು ನಿಲ್ದಾಣದ ಯಾರ್ಡ್ 488 ಕೋಟಿ ರೂ. ಅಂದಾಜು ವೆಚ್ಚದಲ್ಲಿ ಮರು ನಿರ್ಮಾಣ ಮಾಡಲಾಗುವುದು ಎಂದು ಮೈಸೂರು–ಕೊಡಗು ಸಂಸದ ಪ್ರತಾಪ್ ಸಿಂಹ ತಿಳಿಸಿದ್ದಾರೆ.

ಮೈಸೂರಿನ ರೈಲು ನಿಲ್ದಾಣದ ಡಿಆರ್‌ಎಂ ಕಚೇರಿ ಸಭಾಂಗಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 395.73 ಕೋಟಿ ರೂ. ವೆಚ್ಚದಲ್ಲಿ ಮೈಸೂರು ರೈಲು ನಿಲ್ದಾಣ (ಅಂಗಳ) ವಿಸ್ತರಿಸುವುದರೊಂದಿಗೆ ಪುನರ್ ನಿರ್ಮಾಣ ಹಾಗೂ 92.07 ಕೋಟಿ ರೂ. ವೆಚ್ಚದಲ್ಲಿ ನಾಗನಹಳ್ಳಿ ನಿಲ್ದಾಣದ ಅಂಗಳ ಪುನರ್ ನಿರ್ಮಾಣ ಮಾಡಿ ಮೆಮು ಶೆಡ್ ಜೊತೆಗೆ ಡ್ರೈಫಿಟ್ ಲೈನ್ ಮಾಡುವ ಕಾಮಗಾರಿಗಳಿಗೆ ಜೂ.20ರಂದು ಸಂಜೆ ಮಹಾರಾಜ ಕಾಲೇಜು ಮೈದಾನದಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಶಿಲಾನ್ಯಾಸ ಮಾಡುವರು ಎಂದರು.

ಹಳೇ ಕ್ವಾಟ್ರರ್ಸ್‌ನಲ್ಲಿ ವಾಸವಿರುವ ರೈಲ್ವೆ ಸಿಬ್ಬಂದಿಗೆ ಮೈಸೂರಿನ ಒಂಟಿಕೊಪ್ಪಲು ದೇವಸ್ಥಾನದ ಎದುರಿನಲ್ಲಿರುವ ಯಾದವಗಿರಿಯ ರೈಲ್ವೆ ಕ್ವಾಟ್ರರ್ಸ್‌ನಲ್ಲಿ 300 ಹೊಸ ಮನೆಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ. ರೈಲು ನಿಲ್ದಾಣ ವಿಸ್ತರಿಸುವುದರಿಂದ ಪ್ರಸ್ತುತ ಪ್ರಯಾಣಿಕರ ದಟ್ಟಣೆ ನಿರ್ವಹಣೆ ಸಾಧ್ಯವಾಗುವುದಲ್ಲದೆ, ಸೌಲಭ್ಯಗಳನ್ನು ಹೆಚ್ಚಿಸಿದಂತಾಗುತ್ತದೆ ಎಂದರು.

ನಾಳೆ ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಪ್ರಧಾನಿ ಮೋದಿ ಅವರಿಂದ ಕಾಮಗಾರಿಗಳಿಗೆ ಶಂಕುಸ್ಥಾಪನೆ: ಸಂಸದ ಪ್ರತಾಪ್ ಸಿಂಹ ಪ್ರಕಟ

ಮೈಸೂರು ರೈಲು ನಿಲ್ದಾಣ ವಿಸ್ತರಣೆ

> ದಿನದಿಂದ ದಿನಕ್ಕೆ ರೈಲು ಪ್ರಯಾಣಿಕರ ಸಂಖ್ಯೆ ಹೆಚ್ಚಾಗುತ್ತಿರುವುದರಿಂದ ಹೆಚ್ಚುವರಿ ರೈಲುಗಳ ಅಗತ್ಯವಿದೆ. ಪಾರಂಪರಿಕ ಕಟ್ಟಡವಾದ್ದರಿಂದ ಪೂರ್ವ ಭಾಗದಲ್ಲಿ ವಿಸ್ತರಣೆಗೆ ಅವಕಾಶವಿಲ್ಲದ ಕಾರಣ, ಪಶ್ಚಿಮ ಭಾಗದಲ್ಲಿರುವ 300 ರೈಲ್ವೆ ಕ್ವಾಟ್ರರ್ಸ್ ಹಳೇ ಕಟ್ಟಡಗಳನ್ನು ತೆರವುಗೊಳಿಸಿ ಆ ಜಾಗದಲ್ಲಿ 3 ಹೆಚ್ಚುವರಿ ಪ್ಲಾಟ್‌ಫಾರಂ ಲೈನ್‌ಗಳು, 4 ಫಿಟ್ ಲೈನ್‌ಗಳು, 4 ಸ್ಟೇಬಲ್‌ಲೈನ್‌ಗಳು ಹಾಗೂ 1ಹೆಚ್ಚುವರಿ ಜೋಡಣೆ ಲೈನ್ (ಶೆಂಟಿಂಗ್ ನೆಕ್) ಅನ್ನು ನಿರ್ಮಿಸಿ ಮೈಸೂರು ರೈಲು ನಿಲ್ದಾಣವನ್ನು ವಿಸ್ತರಿಸಲಾಗುವುದು. **–ಪ್ರತಾಪ್ ಸಿಂಹ, ಸಂಸದ**


ಸಂಸದ ಪ್ರತಾಪ್ ಸಿಂಹ ಶನಿವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡುತ್ತಿರುವುದು.

ನಾಗನಹಳ್ಳಿಯಿಂದ ಮೆಮು ಸೇವೆ: 92.07 ಕೋಟಿ ವೆಚ್ಚದಲ್ಲಿ ಪ್ರಸ್ತಾವಿತ ನಾಗನಹಳ್ಳಿ ರೈಲು ನಿಲ್ದಾಣದ ಯಾರ್ಡ್ ಮರು ನಿರ್ಮಾಣ ಮಾಡಲು ಉದ್ದೇಶಿಸಿದ್ದು, 1 ಹೆಚ್ಚುವರಿ ಪ್ಲಾಟ್‌ಫಾರಂ ಲೈನ್, 1 ಸ್ಟೆಬ್ಲಿಂಗ್ ಲೈನ್, 1 ಮೆಮು ಶೆಡ್ ಜೊತೆಗೆ ಡ್ರೈಫಿಟ್‌ಲೈನ್ ನಿರ್ಮಿಸಲಾಗುತ್ತಿದೆ. ಅದರಿಂದಾಗಿ ನಾಗನಹಳ್ಳಿಯಿಂದಲೇ ಮೆಮು ರೈಲು ಸಂಚಾರ ಆರಂಭಿಸಬಹುದಾಗಿದ್ದು, ಈ ರೈಲು ಕೋಚಿಂಗ್ ಕಾಂಪ್ಲೆಕ್ಸ್‌ನಿಂದಾಗಿ ಹೆಚ್ಚುವರಿ ರೈಲುಗಳ ನಿಲುಗಡೆ, ▶ 7ನೇ ಪುಟಕ್ಕೆ

ಮಹಾರಾಜ ಕಾಲೇಜು ಮೈದಾನದ ಪ್ರಧಾನಿ ಮೋದಿ ಕಾರ್ಯಕ್ರಮಕ್ಕೆ ಸಾರ್ವಜನಿಕರಿಗೆ ಮುಕ್ತ ಅವಕಾಶ

ಮೈಸೂರು: ಮೈಸೂರು ಮಹಾರಾಜ ಕಾಲೇಜು ಮೈದಾನದಲ್ಲಿ ನಡೆಯಲಿರುವ ಪ್ರಧಾನಿ ಮೋದಿಯವರ ಕಾರ್ಯಕ್ರಮಕ್ಕೆ ಸಾರ್ವಜನಿಕರಿಗೆ ಮುಕ್ತ ಅವಕಾಶವಿದೆ. ಶಾಂತಿ ಮತ್ತು ಶಿಸ್ತು ಕಾಯ್ದುಕೊಂಡು ಈ ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ಸಂಸದ ಪ್ರತಾಪ್ ಸಿಂಹ ಮನವಿ ಮಾಡಿದ್ದಾರೆ.

ಕೇವಲ ಕೇಂದ್ರ ಸರ್ಕಾರದ ಯೋಜನೆಗಳ ಫಲಾನುಭವಿಗಳೊಂದಿಗೆ ಪ್ರಧಾನಿ ಮೋದಿಯವರು ಸಂವಾದ ನಡೆಸುವರು ಎಂದು ಬಿಂಬಿಸಲಾಗುತ್ತಿದೆ. ಆದರೆ ಇದು ಸಾರ್ವಜನಿಕ ಕಾರ್ಯಕ್ರಮ. ಇದರಲ್ಲಿ ಪಾಲ್ಗೊಳ್ಳಲು ಎಲ್ಲರಿಗೂ ಅವಕಾಶವಿದೆ. ಇದಕ್ಕೆ ಪಾಸ್‌ನ ಅಗತ್ಯವಿಲ್ಲ ಎಂದು ತಿಳಿಸಿದ್ದಾರೆ.

ಯೋಗ ಕಾರ್ಯಕ್ರಮದಲ್ಲಿ ರಾಜಮನೆತನದವರೂ ಭಾಗಿ

ಮೈಸೂರು: ಜೂನ್ 21ರಂದು ಅರಮನೆ ಆವರಣದಲ್ಲಿ ನಡೆಯಲಿರುವ ಅಂತರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿ ಪ್ರಧಾನಿಗಳೊಂದಿಗೆ ಮೈಸೂರು ರಾಜಮನೆತನದವರೂ ಭಾಗಿಯಾಗಲಿದ್ದಾರೆ ಎಂದು ಸಂಸದ ಪ್ರತಾಪ್ ಸಿಂಹ ತಿಳಿಸಿದ್ದಾರೆ.



ಸುದ್ದಿಗಾರರಿಗೆ ಈ ವಿಷಯ ತಿಳಿಸಿದ ಅವರು, ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವಂತೆ ಪ್ರಮೋದಾದೇವಿ ಒಡೆಯರ್, ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರನ್ನು ಆಹ್ವಾನಿಸಲಾಗಿದ್ದು, ಅವರೂ ಪ್ರಧಾನಿ ಅವರೊಂದಿಗೆ ಯೋಗ ಕಾರ್ಯಕ್ರಮದ ವೇದಿಕೆಯಲ್ಲಿ ಭಾಗವಹಿಸುವರು ಎಂದರು.

ಕಾರ್ಯಕ್ರಮದಲ್ಲಿ ಪ್ರಧಾನಮಂತ್ರಿಗಳು, ಮುಖ್ಯಮಂತ್ರಿಗಳು, ಕೇಂದ್ರ ಆಯುಷ್ ಇಲಾಖೆ ಸಚಿವರು, ಜಿಲ್ಲಾ ಉಸ್ತುವಾರಿ ಸಚಿವರು ಸೇರಿ ಕೇವಲ ಐವರು ಗಣ್ಯರಿಗೆ ಮಾತ್ರ ಅವಕಾಶ ಎಂದು ಹೇಳಿದ್ದರಿಂದ ರಾಜಮನೆತನದವರನ್ನು ಕಡೆಗಣಿಸಲಾಗಿದೆ ಎಂದು ಸಾಮಾಜಿಕ ಜಾಲತಾಣಗಳಲ್ಲಿ ಸಾರ್ವಜನಿಕರು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದರು. ಇದೀಗ ಎಚ್ಚೆತ್ತ ಜಿಲ್ಲಾಡಳಿತವು, ರಾಜ ಮನೆತನದವರನ್ನು ಆಹ್ವಾನಿಸುವ ಮೂಲಕ ವಿವಾದಕ್ಕೆ ತೆರೆ ಎಳೆದಿದೆ. ಆದರೆ, ಅಂತರರಾಷ್ಟ್ರೀಯ ಯೋಗ ದಿನಾಚರಣೆ ವೇದಿಕೆಯಲ್ಲಿ ಪ್ರಧಾನಿಗಳೊಂದಿಗೆ ಯಾವ ಯಾವ ಗಣ್ಯರು ಉಪಸ್ಥಿತರಿರುತ್ತಾರೆ ಎಂಬುದರ ಬಗ್ಗೆ ಅಧಿಕೃತ ಪಟ್ಟಿ ಪ್ರಕಟವಾಗಿಲ್ಲ. ಅಂದು ಬೆಳಗ್ಗೆ ಯೋಗ ಪ್ರದರ್ಶನ ಮುಗಿದ ಬಳಿಕ ಪ್ರಧಾನಿ ಮೋದಿ ಅರಮನೆಯಲ್ಲಿ ರಾಜಮನೆತನದವರೊಂದಿಗೆ ಬೆಳಗಿನ ಉಪಾಹಾರ ಸೇವಿಸುವುದು ಸಂಭವನೀಯ ಪ್ರವಾಸ ಪಟ್ಟಿಯಲ್ಲಿ ಸೇರ್ಪಡೆಯಾಗಿದೆ.

ನಕ್ಕರೆ ಅದೇ ಸ್ವರ್ಗ

ಪ್ರಶ್ನೆ ಪತ್ರಿಕೆಯಲ್ಲಿನ ಪ್ರಶ್ನೆ : "ಕ್ರಿಕೆಟ್ ಆಟದ ಬಗ್ಗೆ ಅತೀ ಚಿಕ್ಕದಾಗಿ ಒಂದು ಪ್ರಬಂಧ ಬರೆಯಿರಿ"

ಗುಂಡ ಬರೆದದ್ದು : "ಮಳೆ ಬಂದ ಕಾರಣ ಪಂದ್ಯ ರದ್ದಾಯಿತು!"

ಮೈಸೂರು ಮಿತ್ರ

ಭಾನುವಾರ, 19 ಜೂನ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ತಾನು ಮಾಡದ ಒಳ್ಳೆಯ ಕೆಲಸಕ್ಕಾಗಿ ಪ್ರತಿಯೊಬ್ಬನೂ ತಪ್ಪಿತಸ್ಥನೇ –ವಾಲ್ಟೇರ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಧರ್ಮಕ್ಕೆ ದಟ್ಟಿ ಕೊಟ್ರೆ ಹಿತ್ಲಿಗೆ ಹೋಗಿ ಮೊಳ ಹಾಕ್ದ

ನಿಮ್ಮ ಪತ್ರಗಳು

ಇಂತಹ ಉತ್ಸಾಹಿ ಯುವ ನಾಯಕರ ಸಂಖ್ಯೆ ಹೆಚ್ಚಲಿ





ಮಾನ್ಯರೆ,

ಮೈಸೂರು ಲಲಿತ ಮಹಲ್ ರಸ್ತೆಯಲ್ಲಿ ಚಾಮುಂಡಿಬೆಟ್ಟಕ್ಕೆ ತಿರುವು ಪಡೆಯುವ ಸರ್ಕಲ್‌ಗೆ ವರ್ಷದ ಹಿಂದೆ ವೀರ ಸಂಗೊಳ್ಳಿ ರಾಯಣ್ಣ ಅವರ ಹೆಸರು ನಾಮಕರಣ ಮಾಡಿ, ವೃತ್ತದಲ್ಲಿ ಅವರ ಪ್ರತಿಮೆಯನ್ನು ತಾತ್ಕಾಲಿಕವಾಗಿ ಸ್ಥಾಪಿಸಲಾಗಿತ್ತು. ಆದರೆ ಪ್ರತಿಮೆ ಸ್ಥಾಪಿಸಿದ್ದ ವೇದಿಕೆಗೆ ಹೊದಿಸಲಾಗಿದ್ದ ಕನ್ನಡ ಬಾವುಟ ವಾಹನಗಳ ಹೊಗೆ, ಧೂಳಿನಿಂದ ಮಾಸಿ, ಕೊಳಕಾಗಿ, ಹರಿದು ಹೋಗಿತ್ತು 'ಮೈಸೂರು ಮಿತ್ರ' ಇದರ ಬಗ್ಗೆ ಸರ್ಕಲ್‌ಗೆ ಹೊಂದಿಕೊಂಡಂತಿರುವ ಕುರುಬಾರಹಳ್ಳಿ ಗ್ರಾಮದ ಯುವ ಮುಖಂಡರೂ ಆದ ದಿ ಸಿಟಿ ಕೋ–ಆಪರೇಟಿವ್ ಬ್ಯಾಂಕ್ ನಿರ್ದೇಶಕ ಪ್ರಕಾಶ್ ಅವರ ಗಮನ ಸೆಳೆದಿತ್ತು ಅವರು ಎರಡೇ ದಿನದಲ್ಲಿ ಹೊಸ ಕನ್ನಡ ಬಾವುಟ ಅಳವಡಿಸಿದ್ದಾರೆ. ಅವರು 'ಮಿತ್ರ'ನ ಮೆಚ್ಚಿನ ಮಿತ್ರನು ಹೌದು. ಥ್ಯಾಂಕ್ಸ್ ಪ್ರಕಾಶ್. – **ಮೈಸೂರು ಮಿತ್ರ**

ಪ್ರಧಾನಿಗಾಗಿ ಗಿಡ–ಮರ ಕತ್ತರಿಸುವುದು ಸರಿಯೇ?

ಮಾನ್ಯರೆ,

ಜೂ. 21 ರಂದು ವಿಶ್ವ ಯೋಗ ದಿನಾಚರಣೆಯಲ್ಲಿ ಪಾಲ್ಗೊಳ್ಳಲು ಪ್ರಧಾನಿ ನರೇಂದ್ರ ಮೋದಿ ಮೈಸೂರಿಗೆ ಆಗಮಿಸುತ್ತಿದ್ದು, ಅವರ ಸ್ವಾಗತಕ್ಕಾಗಿ ಬೆಳೆದು ನಿಂತ ಗಿಡ–ಮರಗಳನ್ನು ಕತ್ತರಿಸಲಾಗುತ್ತಿದ್ದು, ಪರಿಸರ ಪ್ರೇಮಿಗಳಾದ ನಮಗೆ ಬೇಸರ ತರಿಸಿದೆ. ಪ್ರಧಾನ ಮಂತ್ರಿಗಳಿಗೆ ಸ್ವಾಗತ ಕೋರಲು ಅನೇಕ ಮಾರ್ಗಗಳಿವೆ. ಅದನ್ನು ಬಿಟ್ಟು ರಸ್ತೆಯಲ್ಲಿ ಬೆಳೆದು ನಿಂತಿರುವ ಮರ ಗಿಡಗಳನ್ನೇಕೆ ಕತ್ತರಿಸ ಬೇಕು? ಇದು ಸೂಕ್ತವಾದ ಸ್ವಾಗತವೇ? ಕೋವಿಡ್ ಸಂದರ್ಭದಲ್ಲಿ ಆಸ್ಪತ್ರೆಯಲ್ಲಿ ಮನುಷ್ಯರಿಗೆ ಉಸಿರಾಡಲು ಆಮ್ಲಜನಕವಿಲ್ಲದೆ ನರಳಾಟವಾಡುವ ದೃಶ್ಯಗಳನ್ನು ಇಂದಿಗೂ ಸಹ ನೆನಪಿಸಿಕೊಳ್ಳುವುದಕ್ಕೂ ಆಗುವುದಿಲ್ಲ. ಅಷ್ಟಕ್ಕೂ ಪ್ರಧಾನ ಮಂತ್ರಿಗಳು ನಾ ಬರುವ ರಸ್ತೆಯ ಉದ್ದಕ್ಕೂ ಇರುವ ಗಿಡ–ಮರ ಕತ್ತರಿಸಿ ಎಂದು ಹೇಳಿದ್ದಾರೆಯೇ? ಒಂದು ಗಿಡ ಬೆಳೆಸು ವುದಕ್ಕೆ ಆಗದವರು ಇಂದು ಭಾಷಣ ಮಾಡುವಾಗ ಮಾತ್ರ ಗಿಡ–ಮರ ಬೆಳೆಸಿ – ನಾಡು ಉಳಿಸಿ ಎಂಬ ಸಂದೇಶ ಸಾರುತ್ತಾರೆ. ಆದರೆ ಇರುವ ಗಿಡ–ಮರಗಳನ್ನು ನಾಶ ಮಾಡದೆ ನಮ್ಮೆಲ್ಲರ ಆರೋಗ್ಯದ ಹಿತಕ್ಕಾಗಿ ಗಿಡ–ಮರಗಳನ್ನು ರಕ್ಷಿಸುವುದರ ಜೊತೆಗೆ ಗಿಡಗಳನ್ನು ನೆಡುವುದು ಮತ್ತು ಅವುಗಳನ್ನು ಪೋಷಿಸಿ ಬೆಳೆಸುವುದು ನಮ್ಮೆಲ್ಲರ ಕರ್ತವ್ಯವಾಗಲಿ.

–ಪರಿಸರ ಪ್ರೇಮಿ ನಾಗೇಶ್ ಕೆ., ಮಾನಸಗಂಗೋತ್ರಿ, ಮೈಸೂರು.

ಆನ್‌ಲೈನ್ ಲೋನ್ ಆಪ್‌ಗಳ ಹಾವಳಿ

ಮಾನ್ಯರೆ,

ಇತ್ತೀಚಿನ ದಿನಗಳಲ್ಲಿ ಆನ್‌ಲೈನ್ ಲೋನ್ ಆಪ್‌ಗಳ ಹಾವಳಿ ಹೆಚ್ಚಾಗಿದ್ದು, ಇದಕ್ಕೆ ಅನೇಕ ಅಮಾಯಕ ಯುವಕರು, ಯುವತಿಯರು ಹಾಗೂ ನೌಕರ ವರ್ಗದವರು ಬಲಿಯಾಗುತ್ತಿದ್ದಾರೆ. ಸುಮಾರು 150ಕ್ಕೂ ಹೆಚ್ಚು ಲೋನ್ ಆಪ್‌ಗಳು ಸಕ್ರಿಯವಾಗಿದ್ದು, ಅವುಗಳಲ್ಲಿ ಕುಬೇರನ್, ಕೋಕೋ, ರಾಯಲ್, ಕ್ವಾಲಿಟಿ ಕ್ಯಾಶ್, ಸೇರಿದಂತೆ ನಿಮ್ಮ ಮೊಬೈಲ್‌ಗಳಿಗೆ ಸಂದೇಶಗಳ ಮೂಲಕ ಸಾಲವನ್ನು ಪಡೆದುಕೊಳ್ಳಿ ಎಂಬುದಾಗಿ ಲಿಂಕ್‌ಗಳು ಪದೇ ಪದೆ ಬರುತ್ತಿರುತ್ತವೆ. ತುರ್ತಾಗಿ ನಿಮಗೆ ಹಣ ಬೇಕಾಗಿದ್ದಾಗ ಒಂದು ವೇಳೆ ನೀವೇನಾದರೂ ಈ ಆಪ್ ಅನ್ನು ಇನ್‌ಸ್ಟಾಲ್ ಮಾಡಿಕೊಂಡು, ಅವರು ಹೇಳಿದ ದಾಖಲೆಗಳನ್ನು ಆನ್‌ಲೈನ್‌ನಲ್ಲೇ ನೀಡಿದಾಗ ಕ್ಷಣಾರ್ಧದಲ್ಲಿ ನಿಮ್ಮ ಅಕೌಂಟ್‌ಗೆ ದುಡ್ಡು ಬರುತ್ತದೆ. ಇಲ್ಲಿಂದ ಶುರುವಾಗುತ್ತದೆ ನಿಮಗೆ ಟಾರ್ಚರ್. ನಾಲ್ಕು ಸಾವಿರ ರೂ.ಗಳನ್ನು ಪಡೆದಿದ್ದರೆ ಎಂಟು ಸಾವಿರ ರೂಗಳನ್ನು ಕಟ್ಟಬೇಕು ಎನ್ನುತ್ತಾರೆ. ಕೇವಲ ಮೂರೇ ದಿನಗಳಿಗೆ ಈ ಹಣವನ್ನು ಕಟ್ಟಬೇಕು ಎಂದು ದುಂಬಾಲು ಬೀಳುತ್ತಾರೆ. ಕಟ್ಟಲಿಲ್ಲವೆಂದರೆ ಪದೇ ಪದೆ ಮೆಸೇಜ್, ದೂರವಾಣಿ ಕರೆಗಳ ಮೂಲಕ ಪದೇ ಪದೆ ಕಿರುಕುಳ ನೀಡುತ್ತಾರೆ. ಒಂದು ವೇಳೆ ಅವರು ಕೇಳಿದಷ್ಟು ಹಣವನ್ನು ನೀವು ಕಟ್ಟಿದರೂ ಮತ್ತೆ ಮತ್ತೆ ಸಾಲದ ಹಣಕ್ಕಾಗಿ ಪೀಡಿಸುತ್ತಾರೆ. ಅನೇಕ ರೀತಿಯ ಬೆದರಿಕೆಗಳನ್ನು ಹಾಕುತ್ತಾರೆ. ಹೆಚ್ಚಿನ ಹಣ ಕೊಡಲಿಲ್ಲವೆಂದರೆ, ಕೊನೆಗೆ ಅವರ ಬಳಿ ಇರುವ ನಿಮ್ಮ ಆಧಾರ್, ಪ್ಯಾನ್ ಕಾರ್ಡ್, ಮೊಬೈಲ್ ಡೇಟಾ ಬಳಸಿಕೊಂಡು ನಿಮಗಿರುವ ಕಾಂಟಾಕ್ಟ್ ನಂಬರ್‌ಗಳ ಮುಖಾಂತರ ಫ್ರಾಡ್ ಎಂದು ನಮೂದಿಸಿ ಸಂಬಂಧಿಕರು, ಕುಟುಂಬ ವರ್ಗ, ಸ್ನೇಹಿತರಿಗೆ ನಿಮ್ಮ ಫೋಟೋವನ್ನು ಅಶ್ಲೀಲವಾಗಿ ಎಡಿಟ್ ಮಾಡಿ ಕಳುಹಿಸುತ್ತಾರೆ. ಈ ರೀತಿಯಾಗಿ ನಿಮ್ಮ ಮಾನ ಮರ್ಯಾದೆಯನ್ನು ಮೂರು ಕಾಸಿಗೆ ಹರಾಜು ಹಾಕುತ್ತಾರೆ. ಮರ್ಯಾದೆಗೆ ಅಂಜಿ ಅನೇಕ ಜನರು ಖಿನ್ನತೆಗೆ ಒಳಗಾಗಿ ಸೂಸೈಡ್ ಕೂಡ ಮಾಡಿಕೊಂಡಿದ್ದಾರೆ. ಇನ್ನೂ ಕೆಲವರು ಸೈಬರ್ ಕ್ರೈಮ್‌ಗೆ ದೂರುಗಳನ್ನು ನೀಡಿದರೂ ಏನೂ ಪ್ರಯೋಜನವಾಗಿಲ್ಲ. ಹೀಗೆ ನೀವು ಸಣ್ಣ ಮೊತ್ತದ ಹಣಕ್ಕಾಗಿ ಕೈಚಾಚಿದರೆ, ನಿಮ್ಮ ಬದುಕು ನರಕವಾಗುತ್ತದೆ. ಆದ್ದರಿಂದ ಇಂತಹ ಆಪ್‌ಗಳ ಬಗ್ಗೆ ಸಾರ್ವಜನಿಕರು ಎಚ್ಚರಿಕೆಯಿಂದಿರುವುದು ಒಳಿತು.

– ಪರಶಿವಮೂರ್ತಿ ಎನ್.ಪಿ, ನಂಜೀಪುರ, ಸರಗೂರು ತಾ.

ರಫ್ತು–ಆಮದು!

ಮಾನ್ಯರೆ,

ಇದೇ ಮೊದಲ ಬಾರಿಗೆ 192 ಮೆಟ್ರಿಕ್ ಟನ್‌ಗಳಷ್ಟು ಸಗಣಿಯನ್ನು ಭಾರತದಿಂದ ಕುವೈತ್‌ಗೆ ರಫ್ತು ಮಾಡಲಾಗುವುದೆಂದು ಸುದ್ದಿ! ಹೆಮ್ಮೆಯ ವಿಷಯವೇ ಸರಿ.

ನಮ್ಮಲ್ಲಿರುವ ಗೊಬ್ಬರ (ವಿಶೇಷವಾಗಿ ರಾಜಕೀಯದಲ್ಲಿ) ರಸ್ತೆಗಳ ಗುಂಡಿ, ಗೊಬ್ಬರದ ಗುಂಡಿಗಳನ್ನು ಕುವೈತ್‌ಗೇಕೆ, ಇಡೀ ಜಗತ್ತಿಗೇ ರಫ್ತು ಮಾಡಬಹುದು!

ಆಮದು ಇಲ್ಲವೇ? ಏಕಿಲ್ಲ? ಕೆಲವಾದರೂ ಮೌಲ್ಯಗಳನ್ನು ಆಮದು ಮಾಡಿಕೊಳ್ಳಬಹುದು!

ಅಳು : ರಾಖಿ ಸಾವಂತ್ ಎಂಬ ಬಣ್ಣದ ಚಿಟ್ಟೆ ನ್ಯಾಯಾಲಯದಲ್ಲಿ 'ಗಳಗಳನೆ' ಅತ್ತರಂತೆ; ಹೊಸ ಗೆಳೆಯನನ್ನು ಮೆಚ್ಚಿಸಲೋಸುಗ (ಅಂಥದೇ ಮತ್ತೊಂದು ಚಿಟ್ಟೆ, ಮಲ್ಲಿಕಾ ಶೆರಾವತ್!).

–ಸಿಪಿಕೆ, ದತ್ತಪೀಠ ಆಸ್ಥಾನ ವಿದ್ವಾನ್

ಮೈಸೂರಲ್ಲಿ ಪ್ರಧಾನಿ ಮೋದಿ ಕಾರ್ಯಕ್ರಮ

ಪೊಲೀಸ್ ಇಲಾಖೆಯಿಂದ ಶಿಷ್ಟಾಚಾರ ಪಾಲನೆಗೆ ಸಲಹೆ–ಸೂಚನೆ

ಮೈಸೂರು, ಜೂ.18(ಎಂಕೆ)– ಮೈಸೂರು ಅರಮನೆ ಆವರಣದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಸಮ್ಮುಖದಲ್ಲಿ ನಡೆಯುವ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಹಾಗೂ ಜೂ.20ರಂದು ಮಹಾರಾಜ ಕಾಲೇಜು ಮೈದಾನದಲ್ಲಿ ನಡೆಯುವ ಸಮಾವೇಶದಲ್ಲಿ ಭಾಗವಹಿಸುವವರಿಗೆ ನಗರ ಪೊಲೀಸ್ ಇಲಾಖೆ ವತಿಯಿಂದ ಸೂಚನೆಗಳನ್ನು ನೀಡಿದ್ದು, ಕಡ್ಡಾಯವಾಗಿ ಪಾಲಿಸುವಂತೆ ತಿಳಿಸಲಾಗಿದೆ.



ಅರಮನೆ ಆವರಣದಲ್ಲಿ ನಡೆಯುವ ಅಂತರರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿ ಭಾಗವಹಿಸುವ ಸಾರ್ವಜನಿಕರಿಗೆ ನಿಗಧಿಪಡಿಸಿದ ಪ್ರವೇಶ ದ್ವಾರದ ಮೂಲಕವೇ ಅರಮನೆಯ ಆವರಣಕ್ಕೆ ಪ್ರವೇಶದ ಅವಕಾಶವಿರುತ್ತದೆ. ಈ ವೇಳೆ ಸಾರ್ವಜನಿಕರು ಭದ್ರತಾ ಸಿಬ್ಬಂದಿಗಳ ತಪಾಸಣೆಗೆ ಸಹಕರಿಸುವುದು. ಅರಮನೆಗೆ ಆಗಮಿಸುವಾಗ ಪ್ರವೇಶದ್ವಾರದಲ್ಲಿ ಲೋಹ ಶೋಧಕ ಯಂತ್ರದ ಮೂಲಕ ತಪಾಸಣೆಗೆ ಒಳಪಟ್ಟು, ನಂತರ ನಿಗಧಿ ಪಡಿಸಿದ ಸ್ಥಳಕ್ಕೆ ತೆರಳಬೇಕಾಗಿದೆ.

ಅರಮನೆಯ ಆವರಣದಲ್ಲಿಯೇ ಆಯೋಜಕರಿಂದ ಯೋಗಾಸನ ಮಾಡಲು ಬೇಕಾದ ಮ್ಯಾಟ್, ಟಿ–ಷರ್ಟ್, ನೀರಿನ ಪೌಚ್ ಇತ್ಯಾದಿ ಕಿಟ್ ವ್ಯವಸ್ಥೆ ಕಲ್ಪಿಸಿರುವುದರಿಂದ ಖಾಸಗಿಯಾಗಿ ತಮ್ಮ ವಸ್ತುಗಳಿಗೆ ಅವಕಾಶ ಇರುವುದಿಲ್ಲ. ಸುರಕ್ಷತೆಯ ದೃಷ್ಟಿಯಿಂದ ಸಾರ್ವಜನಿಕರು ತಮ್ಮೊಂದಿಗೆ ನೀರಿನ ಬಾಟಲ್, ಬ್ಯಾಗ್, ವ್ಯಾನಿಟಿಬ್ಯಾಗ್, ಹರಿತವಾದ ವಸ್ತುಗಳು, ಯಾವುದೇ ಲೋಹದ ವಸ್ತುಗಳು ಹಾಗೂ ಇತರೆ ಯಾವುದೇ ರೀತಿಯ ವಸ್ತುಗಳನ್ನು ಹೊಂದಿರಬಾರದು. ಯಾವುದೇ ರೀತಿಯ ಕರಪತ್ರ, ಬ್ಯಾನರ್, ಕಪ್ಪು ಬಟ್ಟೆ/ಫ್ಲಾಗ್, ಪ್ಲೆಕಾರ್ಡ್‌ಗಳಿಗೆ ಅನುಮತಿ ಇರುವುದಿಲ್ಲ, ಶಬ್ಧ ಉಂಟುಮಾಡುವ ಪೀಪಿ, ತಮಟೆ, ನಗಾರಿ ಇತ್ಯಾದಿಗಳನ್ನು ನಿಷೇದಿಸಿದೆ.

ಬೀಡಿ, ಸಿಗರೇಟ್, ಗುಟ್ಕಾ ಇತ್ಯಾದಿ ತಂಬಾಕು ಪದಾರ್ಥಗಳನ್ನು ಕಡ್ಡಾಯವಾಗಿ ನಿಷೇದಿಸಿದ್ದು, ಬೆಂಕಿ ಉತ್ಪತ್ತಿ ಮಾಡುವ ಬೆಂಕಿಪೊಟ್ಟಣ, ಲೈಟರ್, ಪಟಾಕಿ ಹಾಗೂ ಇತ್ಯಾದಿ ವಸ್ತು ಗಳನ್ನು ತೆಗೆದುಕೊಂಡು ಬರುವಂತಿಲ್ಲ. ಮೊಬೈಲ್‌ಗೆ ಮಾತ್ರ ಅವಕಾಶ ವಿದ್ದು, ಉಳಿದ ಯಾವುದೇ ರೀತಿಯ ಎಲೆಕ್ಟ್ರಾನಿಕ್ ವಸ್ತುಗಳನ್ನು ಹೊಂದಲು ಅವಕಾಶ ಇರುವುದಿಲ್ಲ. (ಕ್ಯಾಮರಾ, ವೀಡಿಯೋ ಕ್ಯಾಮರಾ, ಪವರ್ ಬ್ಯಾಂಕ್, ಇಯರ್ ಫೋನ್, ಹ್ಯಾಂಡ್ಸ್ ಫ್ರೀ ಇತ್ಯಾದಿ) ಮೊಬೈಲ್ ಪೋನ್‌ಗಳನ್ನು Switch off ಮಾಡ ಬೇಕು. ಆಸೀನರಾದ ನಂತರ ಕಾರ್ಯಕ್ರಮ ಮುಗಿಯುವವರೆಗೆ ಒಂದು ಸೆಕ್ಟರ್‌ನಿಂದ ಇನ್ನೊಂದು ಸೆಕ್ಟರ್‌ಗೆ ಹೋಗಬಾರದು ಎಂದು ತಿಳಿಸಿದೆ.

ಸಾರ್ವಜನಿಕರು ಆಸೀನರಾದ ಸ್ಥಳದಲ್ಲಿ ನಿಂತುಕೊಳ್ಳುವುದು, ಅನಾವಶ್ಯಕವಾಗಿ ತಿರುಗಾಡುವುದು, ಕಿರುಚುವುದು ಇತ್ಯಾದಿ ಮಾಡದೆ ತಮ್ಮ ಅಕ್ಕ–ಪಕ್ಕ ಕುಳಿತವರಿಗೆ ತೊಂದರೆಯಾಗದಂತೆ ವರ್ತಿಸಬೇಕು. ಅರಮನೆಯ ಆವರಣದಲ್ಲಿ ಯಾವುದೇ ವಾರಸುದಾರರಿಲ್ಲದ ಬ್ಯಾಗುಗಳು, ಪೊಟ್ಟಣ, ಆಟಿಕೆ ಸಾಮಾನುಗಳು ಹಾಗೂ ಇತರೆ ವಸ್ತುಗಳು ಕಂಡು ಬಂದಲ್ಲಿ ಅದನ್ನು ಮುಟ್ಟದೇ ಕೂಡಲೇ ಪೊಲೀಸರಿಗೆ ಮಾಹಿತಿ ನೀಡುವುದು. ಕಾರ್ಯಕ್ರಮ ವೀಕ್ಷಣೆಗೆ ಬರುವವರು ತಮ್ಮ ವಾಹನಗಳನ್ನು ಸಂಚಾರಿ ಪೊಲೀಸರು ನಿಗಧಿಪಡಿಸಿರುವ ಸ್ಥಳದಲ್ಲೇ ನಿಲ್ಲಿಸುವುದು ಹಾಗೂ ಗಣ್ಯವ್ಯಕ್ತಿಗಳು ಸಾಗುವ ಮಾರ್ಗ ದಲ್ಲಿ ಗುಂಪು ಸೇರದೆ, ಅಡ್ಡಿಯುಂಟು ಮಾಡದಂತೆ ಸಾಕಷ್ಟು ಅಂತರವನ್ನು ಕಾಯ್ದುಕೊಂಡು ದೂರದಿಂದಲೇ ವೀಕ್ಷಿಸುವಂತೆ ಸೂಚಿಸಲಾಗಿದೆ.

ಮೈಸೂರು ಮಹಾರಾಜ ಕಾಲೇಜು ಮೈದಾನದಲ್ಲಿ ಪ್ರಧಾನಿ ಮೋದಿ ಸಮಾವೇಶ

ವಾಹನ ಸಂಚಾರ, ನಿಲುಗಡೆ ಸಂಬಂಧ ಪೊಲೀಸರ ಮಾರ್ಗಸೂಚಿ

ಮೈಸೂರು, ಜೂ.18(ಎಂಕೆ)– ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಜೂ.20ರಂದು ಪ್ರಧಾನಿ ನರೇಂದ್ರ ಮೋದಿಯವರ ಅಧ್ಯಕ್ಷತೆಯಲ್ಲಿ ನಡೆಯುವ ಫಲಾನುಭವಿಗಳ ಸಮಾವೇಶದ ಹಿನ್ನೆಲೆಯಲ್ಲಿ ದ್ವಿಚಕ್ರ ವಾಹನಗಳು, ನಾಲ್ಕು ಚಕ್ರ ವಾಹನಗಳು ಹಾಗೂ ಬಸ್ಸುಗಳ ನಿಲುಗಡೆಗೆ ಸ್ಥಳಗಳನ್ನು ಗುರ್ತಿಸಿ ನಗರ ಪೊಲೀಸ್ ಇಲಾಖೆಯಿಂದ ಮಾಹಿತಿ ನೀಡಲಾಗಿದೆ.





ಬಸ್ಸುಗಳ ನಿಲುಗಡೆ ಮತ್ತು ಸಂಚರಿಸುವ ಮಾರ್ಗ: ಜೆ.ಕೆ ಮೈದಾನದಲ್ಲಿ 233 ಬಸ್‌ಗಳಿಗೆ ಅವಕಾಶ ನೀಡಲಾಗಿದೆ (ಮಂಡ್ಯ ಕಡೆಯಿಂದ ಬರುವ ಬಸ್ಸುಗಳು). ಮೈಸೂರು–ಬೆಂಗಳೂರು ರಸ್ತೆ, ನಾಡಪ್ರಭು ಕೆಂಪೇಗೌಡ ವೃತ್ತ, ಲಿಂಕ್ ರಸ್ತೆ ಜಂಕ್ಷನ್, ಟಿ.ಎನ್.ನರಸಿಂಹಮೂರ್ತಿ ವೃತ್ತ, ಅಬ್ದುಲ್ ಕಲಂ ಅಜಾದ್ ವೃತ್ತ, ಸುಭಾಷ್ ಚಂದ್ರ ಬೋಸ್ ವೃತ್ತ, ಪುಟ್ಟ ಗೋಪಾಲಕೃಷ್ಣ ಶೆಟ್ಟಿ ವೃತ್ತದ ಮಾರ್ಗವಾಗಿ ಜೆ.ಕೆ ಮೈದಾನದಲ್ಲಿ ಪಾರ್ಕಿಂಗ್ ಮಾಡುವುದು.

ವಿಲೇಜ್ ಹಾಸ್ಟೆಲ್ ಮೈದಾನದಲ್ಲಿ 41 ಬಸ್‌ಗಳ ಪಾರ್ಕಿಂಗ್ ಅವಕಾಶ ಕಲ್ಪಿಸಿದ್ದು (ಹಾಸನ & ಹುಣಸೂರು ಕಡೆಯಿಂದ ಬರುವ ಬಸ್ಸುಗಳು), ಮೈಸೂರು–ಹುಣಸೂರು ರಸ್ತೆ, ಹೂಟಗಳ್ಳಿ ಜಂಕ್ಷನ್, ಹಿನಕಲ್ ಜಂಕ್ಷನ್, ವೈಎನ್.ಎಸ್ ಜಂಕ್ಷನ್ ವೆಂಕಟ ರಮಣಯ್ಯ ರಸ್ತೆಯಿಂದ ಬಲಕ್ಕೆ ತಿರುಗಿ ಬಯಲು ರಂಗ ಮಂದಿರ ರಸ್ತೆ ಮಾರ್ಗವಾಗಿ ತಿಪ್ಪೇಸ್ವಾಮಿ ವೃತ್ತದಿಂದ ವಿಲೇಜ್ ಹಾಸ್ಟೆಲ್ ಮೈದಾನ ಪಾರ್ಕಿಂಗ್ ಮಾಡುವುದು.

ಮೈಸೂರು ವಿಶ್ವವಿದ್ಯಾನಿಲಯ ಪಾರ್ಕಿಂಗ್‌ಗೆ ಪಿರಿಯಾಪಟ್ಟಣ, ಕೆ.ಆರ್ ನಗರ ಕಡೆಯಿಂದ ಬರುವ 80 ಬಸ್‌ಗಳಿಗೆ ಸ್ಥಳ ನೀಡಲಾಗಿದೆ. ಪಿರಿಯಾಪಟ್ಟಣ ಕಡೆಯಿಂದ ಬರುವ ಬಸ್ಸುಗಳು ಮೈಸೂರು–ಹುಣಸೂರು ರಸ್ತೆ, ಹೂಟಗಳ್ಳಿ ಜಂಕ್ಷನ್, ಹಿನಕಲ್ ಜಂಕ್ಷನ್, ವೈಎನ್.ಎಸ್ ಜಂಕ್ಷನ್, ಚತುರಂಗ ಜಂಕ್ಷನ್ ಹಾಗೂ ಜೆ.ಸಿ ಕಾಲೇಜು ರಸ್ತೆ ಮೂಲಕ ಪಾರ್ಕಿಂಗ್ ಸ್ಥಳ ತಲುಪಿದರೆ, ಕೆ.ಆರ್.ನಗರ ಕಡೆಯಿಂದ ಬರುವ ಬಸ್ಸುಗಳು ಮೈಸೂರು–ಹುಣಸೂರು ರಸ್ತೆ, ಹೂಟಗಳ್ಳಿ ಜಂಕ್ಷನ್, ಹಿನಕಲ್ ಜಂಕ್ಷನ್, ವೈಎನ್.ಎಸ್ ಜಂಕ್ಷನ್, ವೆಂಕಟ ರಮಣಯ್ಯ ರಸ್ತೆಯಲ್ಲಿ ಬಲಕ್ಕೆ ತಿರುಗಿ ಬಯಲು ರಂಗಮಂದಿರ ರಸ್ತೆ, ಮೈಸೂರು ವಿ.ವಿ ಸೆನೆಟ್ ಭವನ ಗೇಟ್ ಮೂಲಕ ಪಾರ್ಕಿಂಗ್ ಸ್ಥಳಕ್ಕೆ ಬರಬೇಕಾಗಿದೆ.

ಎನ್.ಎಸ್.ಎಸ್ ಕಛೇರಿ ಮೈದಾನ ಮತ್ತು ಸೋಮಾನಿ ಬಿ.ಎಡ್ ಕಾಲೇಜು ಮೈದಾನದ ಪಾರ್ಕಿಂಗ್ ಸ್ಥಳಕ್ಕೆ ನಂಜನಗೂಡು ಹಾಗೂ ಚಾಮರಾಜನಗರ ಕಡೆಯಿಂದ ಬರುವ 220 ಬಸ್ಸುಗಳ ನಿಲುಗಡೆಗೆ ಅವಕಾಶ ನೀಡಲಾಗಿದೆ. ಮೈಸೂರು–ನಂಜನಗೂಡು ರಸ್ತೆ, ಡಾ.ಎ.ಪಿ.ಜೆ ಅಬ್ದುಲ್ ಕಲಂ ವೃತ್ತದಿಂದ ಎಡಕ್ಕೆ ತಿರುಗಿ ರಿಂಗ್ ರಸ್ತೆ ಮೂಲಕ ಕೆ.ಇ.ಬಿ ಜಂಕ್ಷನ್, ಬೋಗಾದಿ ರಿಂಗ್ ರಸ್ತೆ ಜಂಕ್ಷನ್‌ನಲ್ಲಿ ಬಲಕ್ಕೆ ತಿರುಗಿ ಬೋಗಾದಿ ರಸ್ತೆ, ಶಂಕರ್‌ನಾಗ್ ವೃತ್ತದಲ್ಲಿ ಬಲಕ್ಕೆ ತಿರುಗಿ ಬಿಸಿಲು ದೇವಸ್ಥಾನ ರಸ್ತೆ, ಸಾಹುಕಾರ್ ಚೆನ್ನಯ್ಯ ರಸ್ತೆ ಮೂಲಕ ಎನ್.ಎಸ್.ಎಸ್ ಕಛೇರಿ ಮೈದಾನ ಮತ್ತು ಸೋಮಾನಿ ಬಿ.ಎಡ್ ಕಾಲೇಜು ಮೈದಾನ ಪಾರ್ಕಿಂಗ್ ಸ್ಥಳಕ್ಕೆ ತಲುಪಬಹುದಾಗಿದೆ.

ಮಹಾಬೋಧಿ ಹಾಸ್ಟೆಲ್ ಮೈದಾನದಲ್ಲಿ ಹೆಚ್.ಡಿ ಕೋಟೆ ಕಡೆಯಿಂದ ಬರುವ 39 ಬಸ್‌ಗಳ ಪಾರ್ಕಿಂಗ್ ಅವಕಾಶ ನೀಡಿದ್ದು, ಮಾನಂದವಾಡಿ ರಸ್ತೆ ಶ್ರೀರಾಂಪುರ ಜಂಕ್ಷನ್‌ನಲ್ಲಿ ಎಡಕ್ಕೆ ತಿರುಗಿ ರಿಂಗ್ ರಸ್ತೆ ಮೂಲಕ ಬೋಗಾದಿ ರಿಂಗ್ ರಸ್ತೆ ಜಂಕ್ಷನ್‌ನಲ್ಲಿ ಬಲಕ್ಕೆ ತಿರುಗಿ ವಿ.ಎಂ.ಡಿ ಜಂಕ್ಷನ್ ಮೂಲಕ ಮಹಾಬೋದಿ ಹಾಸ್ಟೆಲ್ ಮೈದಾನ ಪಾರ್ಕಿಂಗ್ ಸ್ಥಳಕ್ಕೆ ಬರಲು ಸೂಚಿಸಲಾಗಿದೆ.

ಸ್ಕೌಟ್ಸ್ ಅಂಡ್ ಗೈಡ್ಸ್ ಮೈದಾನ ಟಿ.ಎನ್.ಪುರದ ಕಡೆಯಿಂದ ಬರುವ ಮತ್ತು ಸ್ಥಳೀಯ 126 ಬಸ್‌ಗಳ ಪಾರ್ಕಿಂಗ್ ಸ್ಥಳ ನೀಡಲಾಗಿದೆ. ಟಿ.ಎನ್ ಪುರ ರಸ್ತೆ, ರಿಂಗ್ ರಸ್ತೆ ಮೂಲಕ, ನಾಡಪ್ರಭು ಕೆಂಪೇಗೌಡ ವೃತ್ತ, ಲಿಂಕ್ ರಸ್ತೆ ಜಂಕ್ಷನ್ ಟಿ.ಎನ್ ನರಸಿಂಹಮೂರ್ತಿ ವೃತ್ತ ಅಬ್ದುಲ್ ಕಲಂ ಅಜಾದ್ ವೃತ್ತ ಸುಭಾಷ್ ಚಂದ್ರ ಬೋಸ್ ವೃತ್ತ, ಪುಟ್ಟಗೋಪಾಲ ಕೃಷ್ಣ ಶೆಟ್ಟಿ ವೃತ್ತ, ದಾಸಪ್ಪ ವೃತ್ತ, ಮೆಟ್ರೋಪೋಲ್ ಜಂಕ್ಷನ್, ಹುಣಸೂರು ರಸ್ತೆ, ಡಿ.ಸಿ.ಕಛೇರಿ ಆರ್ಚ್ ಗೇಟ್ ಜಂಕ್ಷನ್‌ನಲ್ಲಿ ಎಡಕ್ಕೆ ತಿರುಗಿ ಸ್ಕೌಟ್ಸ್ ಅಂಡ್ ಗೈಡ್ಸ್ ಮೈದಾನ ಪಾರ್ಕಿಂಗ್ ಮಾಡಬೇಕು.

ದ್ವಿಚಕ್ರ & ನಾಲ್ಕು ಚಕ್ರ ವಾಹನಗಳ ನಿಲುಗಡೆ: ಯುವರಾಜ ಕಾಲೇಜು ಮೈದಾನ, ಮಹಾರಾಜ ಜೂನಿಯರ್ ಕಾಲೇಜು ಮೈದಾನ, ಮಹಾರಾಣಿ ಕಾಲೇಜು ಮೈದಾನ, ಅರಸು ಬೋರ್ಡಿಂಗ್ ಶಾಲೆ ಮೈದಾನ, ಅಗ್ನಿ ಶಾಮಕ ಠಾಣೆ ಮೈದಾನ, ಮಹಾಬೋದಿ ಹಾಸ್ಟೆಲ್ ಮೈದಾನ, ಸ್ಕೌಟ್ಸ್ ಅಂಡ್ ಗೈಡ್ಸ್ ಮೈದಾನದಲ್ಲಿ ದ್ವಿಚಕ್ರ ಮತ್ತು ನಾಲ್ಕು ಚಕ್ರ ವಾಹನಗಳ ನಿಲುಗಡೆ ಅವಕಾಶ ಮಾಡಿಕೊಡಲಾಗಿದೆ ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ದ್ವಿತೀಯ ಪಿಯು ಪರೀಕ್ಷೆಯಲ್ಲಿ ಮೈಸೂರು ವಿದ್ಯಾರ್ಥಿಗಳ ಸಾಧನೆ

ಮೈಸೂರು, ಜೂ.18– ಮೈಸೂರಿನ ವಿವಿಧ ಕಾಲೇಜಿನ ವಿದ್ಯಾರ್ಥಿಗಳು ದ್ವಿತೀಯ ಪಿಯು ಪರೀಕ್ಷೆಯಲ್ಲಿ ಉನ್ನತ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ.

ಸದ್ವಿದ್ಯಾ ಕಾಲೇಜಿನ ಮೂವರ ಸಾಧನೆ: ಮೈಸೂರಿನ ಸದ್ವಿದ್ಯಾ ಕಾಲೇಜಿನ ವಿಜ್ಞಾನ ವಿಭಾಗದಲ್ಲಿ ವಿಜಯನಗರದ ನಿವಾಸಿ ಸುರೇಶ್ ಮತ್ತು ಮಧು ದಂಪತಿ ಪುತ್ರಿ ಎಂ.ಎಸ್.ಪ್ರತೀಶಾ ಹಾಗೂ ರಾಜೀವ್‌ನಗರದ ನಿವಾಸಿ ಮೊಹಮದ್ ಸಮೀವುಲ್ಲಾ ಹಾಗೂ ನೂರ್ ಸಾರಿಹಾ ಭಾನು ದಂಪತಿ ಪುತ್ರಿಯಾಗಿರುವ ಫೈಜ಼ತ್ ರಹತ್ ಒಟ್ಟು 592 ಅಂಕ ಗಳಿಸಿ ಶೇ.98.66ರಷ್ಟು ಫಲಿತಾಂಶ ಗಳಿಸಿದ್ದಾರೆ. ಫೈಜ಼ತ್ ರಹತ್ ಎಸ್‌ಎಸ್‌ಎಲ್‌ಸಿವರೆಗೂ ದುಬೈನಲ್ಲಿ ವ್ಯಾಸಂಗ ಮಾಡಿದ್ದು, ಎರಡು ವರ್ಷದ ಹಿಂದೆ ಮೈಸೂರಿಗೆ ಬಂದು ಸದ್ವಿದ್ಯಾ ಕಾಲೇಜಲ್ಲಿ ಪದವಿ ಪೂರ್ವ ಶಿಕ್ಷಣ ಪಡೆಯುತ್ತಿದ್ದರು. ವಾಣಿಜ್ಯ ವಿಭಾಗದಲ್ಲಿ ಸಿದ್ಧಾರ್ಥನಗರದ ವಿಫುಲ್ ಮತ್ತು ಡಾಲಿ ದಂಪತಿ ಪುತ್ರಿ ವಿ.ದಿಶಾ 587 ಅಂಕ ಗಳಿಸಿದ್ದು, ಅಕೌಂಟೆನ್ಸ್, ಸ್ಟ್ಯಾಟಿಸ್ಟಿಕ್ಸ್ ಹಾಗೂ ಸಾಮಾನ್ಯ ಗಣಿತದಲ್ಲಿ 100ಕ್ಕೆ 100 ಅಂಕ ಪಡೆದಿದ್ದಾರೆ.





ಪ್ರೇಕ್ಷಾಗೆ 592 ಅಂಕ: ವಿಜಯ ವಿಠಲ ಕಾಲೇಜಿನ ಎನ್.ಆರ್.ಪ್ರೇಕ್ಷಾ ವಿಜ್ಞಾನ ವಿಷಯದಲ್ಲಿ 592 ಅಂಕ ಗಳಿಸಿದ್ದಾರೆ. ಸಂಸ್ಕೃತ ಸೇರಿದಂತೆ ವಿಜ್ಞಾನದ ಎಲ್ಲಾ ವಿಷಯಗಳಲ್ಲಿ 100ಕ್ಕೆ 100 ಅಂಕ ಗಳಿಸಿದ್ದು, ಇಂಗ್ಲಿಷ್‌ನಲ್ಲಿ ಮಾತ್ರ 92 ಅಂಕ ಸಿಕ್ಕಿವೆ. ಈಕೆ ವಕೀಲ ಎನ್.ಆರ್.ರವಿಚಂದ್ರೇಗೌಡ ಮತ್ತು ಎಸ್.ಎಸ್.ರೂಪಾ ದಂಪತಿಯ ಪುತ್ರಿ. ಪ್ರೇಕ್ಷಾ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲೂ ರಾಜ್ಯಕ್ಕೆ ಮೂರನೇ ಸ್ಥಾನ ಹಾಗೂ ಜಿಲ್ಲಾ ಮಟ್ಟದ ಟಾಪರ್‌ಗಳಲ್ಲಿ ಒಬ್ಬರಾಗಿದ್ದರು.



ಬಿ. ಸುಶ್ಮಿತಗೆ 591 ಅಂಕ: ದ್ವಿತೀಯ ಪಿಯುಸಿಯಲ್ಲಿ ಎಂಎಂಕೆ ಮತ್ತು ಎಸ್‌ಡಿಎಂ ಪಿಯು ಕಾಲೇಜಿನ ವಿದ್ಯಾರ್ಥಿನಿ ಬಿ.ಸುಶ್ಮಿತ 600ಕ್ಕೆ 591 ಅಂಕ ಪಡೆದು (ಶೇ.98.5) ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾಳೆ. ಕನ್ನಡದಲ್ಲಿ 98, ಇಂಗ್ಲಿಷ್ 94, ಭೌತಶಾಸ್ತ್ರ 99, ರಾಸಾಯನಶಾಸ್ತ್ರ 100, ಗಣಿತ 100, ಜೀವಶಾಸ್ತ್ರದಲ್ಲಿ 100 ಅಂಕ ಪಡೆದಿದ್ದಾಳೆ ಈಕೆ ಡಿ.ಸಾಲುಂಡಿ ಗ್ರಾಮದ ಬಸವರಾಜು ಹಾಗೂ ಬಸಮ್ಮ ದಂಪತಿ ಪುತ್ರಿ.



ಡಿ.ಎಸ್.ಜೀವಿತಗೆ 584: ಸದ್ವಿದ್ಯಾ ಸಂಯುಕ್ತ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿನಿ ಡಿ.ಎಸ್. ಜೀವಿತ 600ಕ್ಕೆ 584 ಅಂಕ ಪಡೆದು(ಶೇ. 97.3) ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಯಾಗಿದ್ದಾಳೆ. ಗಣಿತ 100, ಭೌತಶಾಸ್ತ್ರ 99, ಕನ್ನಡ 98, ಜೀವ ಶಾಸ್ತ್ರದಲ್ಲಿ 97, ಇಂಗ್ಲೀಷ್ ಹಾಗೂ ರಸಾಯನ ಶಾಸ್ತ್ರದಲ್ಲಿ ತಲಾ 95 ಅಂಕ ಪಡೆದಿದ್ದಾಳೆ. ಈಕೆ ದೊಡ್ಡಹುಂಡಿಯ ಗ್ರಾಪಂ ಮಾಜಿ ಅಧ್ಯಕ್ಷ ಸೋಮಣ್ಣ ಹಾಗೂ ಯಮುನಾ ದಂಪತಿ ಪುತ್ರಿ.

ಮರಿಮಲ್ಲಪ್ಪ ಕಾಲೇಜು: ಮೈಸೂರಿನ ಮರಿಮಲ್ಲಪ್ಪ ಕಾಲೇಜಿನ ಮೂವರು ವಿದ್ಯಾರ್ಥಿಗಳು ಗಮನಾರ್ಹ ಸಾಧನೆ ಮಾಡಿದ್ದಾರೆ. ವಿಜ್ಞಾನ ವಿಭಾಗದಲ್ಲಿ ಅಪರ್ಣ ಆಚಾರ್ಯ 589, ವಾಣಿಜ್ಯ ವಿಭಾಗದಲ್ಲಿ ಟಿ.ಎಸ್.ಸಿಂಚನ 589, ಕಲಾ ವಿಭಾಗದಲ್ಲಿ ಆರ್.ರೀಶಾ 579 ಅಂಕ ಪಡೆದಿದ್ದಾರೆ. ಮರಿಮಲ್ಲಪ್ಪ ಕಾಲೇಜಿನ ವಿಜ್ಞಾನ ವಿಭಾಗದಲ್ಲಿ 148, ವಾಣಿಜ್ಯ ವಿಭಾಗದಲ್ಲಿ 66, ಕಲಾ ವಿಭಾಗದಲ್ಲಿ 39 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಪರೀಕ್ಷೆಗೆ ಹಾಜರಾಗಿದ್ದ 981 ವಿದ್ಯಾರ್ಥಿಗಳಲ್ಲಿ 253 ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದು, ಕಾಲೇಜಿನ ಫಲಿತಾಂಶ ಶೇ.93ರಷ್ಟಿದೆ ಎಂದು ಕಾಲೇಜಿನ ಪ್ರಾಂಶುಪಾಲರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಸ್ಯಾಂಡಲ್‌ವುಡ್ ನಟ ಸತೀಶ್ ವಜ್ರ ಹತ್ಯೆ: ಭಾಮೈದ ಸೇರಿ ಇಬ್ಬರ ಬಂಧನ

ಬೆಂಗಳೂರು, ಜೂ.18–ಸ್ಯಾಂಡಲ್‌ವುಡ್ ನಟ ಸತೀಶ್ ವಜ್ರ ಅವರನ್ನು ಕಳೆದ ರಾತ್ರಿ ಆರ್.ಆರ್. ನಗರದ ಅವರ ಮನೆಯಲ್ಲಿ ಬರ್ಬರವಾಗಿ ಹತ್ಯೆ ಮಾಡಲಾಗಿದೆ. ಹಂತಕರು ಅವರ ಕತ್ತು ಮತ್ತು ಹೊಟ್ಟೆಯನ್ನು ಸೀಳಿ ಕೊಲೆ ಮಾಡಿದ್ದಾರೆ. ಶಾರ್ಟ್ ಮೂವೀಸ್‌ಗಳಲ್ಲಿ ಕೆಲಸ ಮಾಡುತ್ತಾ, ಲಗೋರಿ ಚಿತ್ರದ ಮೂಲಕ ಚಿತ್ರರಂಗಕ್ಕೆ ಕಾಲಿಟ್ಟಿದ್ದ ಅವರು, ಮಂಡ್ಯ ಜಿಲ್ಲೆ ಬೆಸಗರಹಳ್ಳಿಯ ಯುವತಿಯನ್ನು ಪ್ರೀತಿಸಿ ಮದುವೆಯಾಗಿದ್ದರು. ಕೆಲ ತಿಂಗಳ ಹಿಂದೆ ಸತೀಶ್ ಪತ್ನಿ ಆತ್ಮಹತ್ಯೆ ಮಾಡಿಕೊಂಡಿದ್ದರು. ತನ್ನ ಸಹೋದರಿ ಆತ್ಮಹತ್ಯೆಗೆ ಸತೀಶ್ ಕಾರಣ ಎಂದು ಭಾವಿಸಿದ್ದ ಭಾಮೈದ ಸುದರ್ಶನ್(22) ತನ್ನ ಸ್ನೇಹಿತ ನಾಗೇಂದ್ರ (19) ಜೊತೆಗೂಡಿ ಸತೀಶ್‌ನನ್ನು ಹತ್ಯೆ ಮಾಡಿದ್ದಾರೆ ಎನ್ನಲಾಗಿದ್ದು, ಅವರಿಬ್ಬರನ್ನೂ ವಶಕ್ಕೆ ಪಡೆದಿರುವ ಪೊಲೀಸರು, ವಿಚಾರಣೆ ನಡೆಸುತ್ತಿದ್ದಾರೆ.



ಅನ್ನ ಬ್ರಹ್ಮ ರೈತನಿಗೆ ಪ್ರತಿಯೊಬ್ಬರು ಗೌರವ ಕೊಡಬೇಕು

'ಟಾಕ್ ಶೋ' ನಲ್ಲಿ ಪದ್ಮಶ್ರೀ ಪುರಸ್ಕೃತ ಕೃಷಿ ವಿಜ್ಞಾನಿ ಸುಬ್ಬಣ್ಣ ಅಯ್ಯಪ್ಪನ್

ಮೈಸೂರು, ಜೂ.18(ಜಿಎ)– ಕೆಲವು ದೇಶಗಳಲ್ಲಿ ಚಿನ್ನ ಸಿಗುತ್ತದೆ ಆದರೆ ಅನ್ನ ಸಿಗುವುದಿಲ್ಲ. ನಮ್ಮ ದೇಶದಲ್ಲಿ ಅನ್ನಕ್ಕೆ ಕೊರತೆ ಇಲ್ಲ. ಇದಕ್ಕೆ ಕಾರಣ ನಮ್ಮ ರೈತ. ಆದ್ದರಿಂದ ಎಲ್ಲರಿಗಿಂತ ಅನ್ನ ಬ್ರಹ್ಮನಾದ ರೈತನಿಗೆ ಗೌರವ ನೀಡ ಬೇಕು ಎಂದು ಪದ್ಮಶ್ರೀ ಪುರಸ್ಕೃತ ಕೃಷಿ ವಿಜ್ಞಾನಿ ಸುಬ್ಬಣ್ಣ ಅಯ್ಯಪ್ಪನ್ ತಿಳಿಸಿದರು.

ಮೈಸೂರಿನ ಜೆಪಿ. ನಗರದಲ್ಲಿರುವ ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ ಸಂಭಾಗಣದಲ್ಲಿ ಎಂ ಪವರ್ ಟಾಕ್ ಸಂಸ್ಥೆ ವತಿಯಿಂದ ಏರ್ಪಡಿಸಲಾಗಿದ್ದ 'ಟಾಕ್ ಶೋ'ನಲ್ಲಿ ಅವರು ಮಾತನಾಡಿದರು.



ಇಂಟರ್ ನ್ಯಾಷನಲ್ ಪ್ಯಾರಾ ಅಥ್ಲೇಟಿಕ್ ಮಾಲತಿ ಹೊಳ್ಳ ಟಾಕ್ ಶೋನಲ್ಲಿ ಮಾತನಾಡುತ್ತಿರುವುದು.

ಕೋವಿಡ್ ಸಂದರ್ಭದಲ್ಲಿ ಅನೇಕ ಕ್ಷೇತ್ರಗಳು ತಮ್ಮ ಕಾರ್ಯಗಳನ್ನು ಸ್ಥಗಿತಗೊಳಿಸಿತು. ಆದರೆ ಆರೋಗ್ಯ ಮತ್ತು ಆಹಾರ ಉತ್ಪಾದನೆ ಕ್ಷೇತ್ರ ಮಾತ್ರ ತಮ್ಮ ಕೆಲಸಗಳನ್ನು ನಿಲ್ಲಿಸಲಿಲ್ಲ. ನಮ್ಮ ದೇಶದಲ್ಲಿ ಕೃಷಿಯನ್ನು ಅವಲಂಬಿಸಿ ಶೇ.30ರಷ್ಟು ಮಂದಿ ಜೀವನ ಸಾಗಿಸುತ್ತಿದ್ದಾರೆ. ಜಿಡಿಪಿಗೆ ಶೇ.18 ರಷ್ಟು ತಲುಪುತ್ತಿದೆ. ಆದರೆ ನಮ್ಮ ಯುವ ಸಮೂಹ ಡಾಕ್ಟರ್ ಮತ್ತು ಇಂಜಿನಿಯರ್‌ಗಳಾಗುತ್ತೇವೆ ಎಂದು ಇನ್ನೂ ಹೋಗುತ್ತಿದ್ದಾರೆ ಎಂದು ವಿಷಾಧಿಸಿದರು.

1950ರಲ್ಲಿ ನಮ್ಮ ದೇಶದಲ್ಲಿ 30ಕೋಟಿ ಜನಸಂಖ್ಯೆಗೆ 5ಕೋಟಿ ಟನ್ ಆಹಾರ ಇತ್ತು, ಇಂದು ಜನಸಂಖ್ಯೆ 100ಕೋಟಿ ಹೆಚ್ಚಾಗಿರುವ ಹಿನ್ನೆಲೆಯಲ್ಲಿ 31ಕೋಟಿ ಟನ್ ಆಹಾರದ ಅವಶ್ಯವಿದೆ. ಮೀನು 2ಕೋಟಿ ಟನ್, ಮಾಂಸ 1ಕೋಟಿ ಟನ್, ಹಾಲು 21ಕೋಟಿ ಟನ್, ಮೊಟ್ಟೆ 6 ಕೋಟಿ ಟನ್, ನೀರು 1.5 ಕೋಟಿ ಟನ್ ಅವಶ್ಯವಿದೆ ಎಂದು ಮಾಹಿತಿ ನೀಡಿದರು.

success ಎಂಬುದು ಏಳು ಅಕ್ಷರಗಳುಳ್ಳ ಒಂದು ಪದ ಅಷ್ಟೇ. ನಾವು ಅದರ ಹಿಂದೆ ಓಡಬಾರದು. ಅದೇ ನಮ್ಮ ಬಳಿ ಬರು ವವಂತೆ ಜೀವನ ನಡೆಸಬೇಕು ಎಂದು ಎಂದು ಇಂಟರ್ ನ್ಯಾಷನಲ್ ಪ್ಯಾರಾ ಅಥ್ಲೇಟಿಕ್ ಮಾಲತಿ ಹೊಳ್ಳ ಅಭಿಪ್ರಾಯಪಟ್ಟರು. ನಾನು 14 ತಿಂಗಳ ಮಗುವಾಗಿದ್ದಾಗ ನನಗೆ ಪೋಲೀಯೋ ದಿಂದ ಸಮಸ್ಯೆಯಾಗಿ ಕುತ್ತಿಗೆಯಿಂದ ಕೆಳಗಡೆ ಯಾವುದೇ ಭಾಗಗಳು ಚಲನೆಯಲ್ಲಿ ಇರಲಿಲ್ಲ ಐದು ವರ್ಷದ ಮಗುವಿನವರೆಗೂ ನಾನು ಸತ್ತ ಮಗುವಿನಂತೆ ಇದ್ದೆ. ಚಿಕಿತ್ಸೆಯ ಬಳಿಕ ದೇಹದಲ್ಲಿ ಕೆಲವು ಬದಲಾವಣೆಗಳು ಆಯಿತು, ನಾನು ಬಾಲ್ಯ ಜೀವನದ ಅನುಭವವೇ ಗೊತ್ತಿಲ್ಲದೆ ಬೆಳೆದೆ. ನಾವು ಜೀವನದಲ್ಲಿ ಏನಾದರೂ ಸಾಧನೆ ಮಾಡಬೇಕಾದರೆ ನಮ್ಮಲ್ಲಿ ಸಕಾರಾತ್ಮಕ ಭಾವನೆ ಇರಬೇಕು. ನಾನು ಅಂಗವಿಕಲೇ, ನನ್ನಿಂದ ಏನು ಆಗುವುದಿಲ್ಲ ಎಂದು ಅಂದುಕೊಂಡಿದ್ದರೆ ನಾನು ಯಾವ ರೀತಿಯ ಸಾಧನೆಯನ್ನು ಮಾಡಲು ಸಾಧ್ಯವಾಗುತ್ತಿರಲಿಲ್ಲ ಎಂದು ತಿಳಿಸಿದರು.

ಪ್ರತಿಯೊಂದು ಸಮಸ್ಯೆಗೂ ಪರಿಹಾರ ಇದೆ. ಅದನ್ನು ಸರಿದೂಗಿಸಿ ಸಾಗಬೇಕು. ನಾವು ಯಶಸ್ಸಿನ ಹಿಂದ ಹೋಗಬಾರದು ಯಶಸ್ಸು ನಮ್ಮ ಹಿಂದೆ ಬರಬೇಕು. ಮನುಷ್ಯ ಸಮಾಜದಲ್ಲಿ ಒಳ್ಳೆಯ ಹಾದಿಯನ್ನು ಅನುಸರಣೆ ಮಾಡಬೇಕು. ಹಾಗೆಯೇ ಯಾರಿಗೂ ಯಾರನ್ನು ಹೋಲಿಕೆ ಮಾಡಿಕೊಳ್ಳಬಾರದು. ಹಣ, ಆಸ್ತಿ ಶಾಶ್ವತವಲ್ಲ. ನಮಗೆಲ್ಲ ಮನುಷ್ಯತ್ವ ಮುಖ್ಯ. ನಮ್ಮಲ್ಲಿ ಕೊರತೆ ಇಟ್ಟು ಕೊಂಡು ಬೇರೆಯವರನ್ನು ದೂಷಣೆ ಮಾಡೋದು ತಪ್ಪು. ಸಮಾಜ ಒಂದು ಕನ್ನಡಿ ಇದ್ದಂಗೆ ನಾವು ಹೇಗೆ ನೋಡುತ್ತೇವೋ ಹಾಗೆ ಅದು ನಮ್ಮ ಜೀವನವನ್ನು ತೋರಿ ಸುತ್ತದೆ ಎಂದು ತಮ್ಮ ಜೀವನದ ಅನುಭವದ ಮೂಲಕ ಯುವ ಸಮೂಹಕ್ಕೆ ಪ್ರೇರಣೆಯ ಮಾತುಗಳನ್ನು ಹೇಳಿದರು..

ಇದೇ ಸಂದರ್ಭದಲ್ಲಿ ಪ್ರಜ್ಞಾ ಕುಟೀರ ಆಯುರ್ವೇದ ಕೇಂದ್ರದ ನಿರ್ದೇಶಕಿ ಡಾ. ಪೂರ್ಣಿಮಾ ಕೆ ಮೂರ್ತಿ ಮತ್ತು ಪೈರೋ ಗ್ರೂಪ್‌ನ ಸಂಸ್ಥಾಪಕ ಅಧ್ಯಕ್ಷ ಬಿ.ಎನ್. ಚಂದ್ರಕಾಂತ್ ಅವರ ಯುವ ಸಮೂಹಕ್ಕೆ ಉತ್ತೇಜನ ನೀಡುವ ವಿಚಾರಗಳನ್ನು ಪ್ರಸ್ತುತ ಪಡಿಸಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com


ಮರಿಮಲ್ಲಪ್ಪನವರ ಪದವಿಪೂರ್ವ ಕಾಲೇಜು
ಸೀತಾವಿಲಾಸ ರಸ್ತೆ, ಮೈಸೂರು-570 004. ☎ : 0821-2422537
ಸಂಸ್ಥಾಪಕರು
ಗುರಿಕಾರ್ ಶ್ರೀ ಮರಿಮಲ್ಲಪ್ಪನವರು
ಭಾಗ್ಯಶಿಲ್ಪಿ
ಶ್ರೀ ಕೆ.ಎಸ್. ಶಿವಲಿಂಗಯ್ಯನವರು
ವಿಜ್ಞಾನ
ಅರ್ಪಣ ಆಚಾರ್ಯ-589
ವಾಣಿಜ್ಯ
ಸಿಂಚನ ಬಿ.ಎಸ್-589
ಕಲಾ
ರಿಶಾ ಆರ್.-579
ನಮ್ಮದೆ ದಾರಿ ನಮ್ಮದೆ ನಡಿಗೆ.......
ಯಶಸ್ಸಿನ ದಾರಿಯಲ್ಲಿ ನಿರಂತರ ಪಯಣ
ವಿಜ್ಞಾನ
ವಾಣಿಜ್ಯ
ಕಲಾ
ಪ್ರೊ. ಕೆ.ಎಸ್. ಪಂಚಾಕ್ಷರಸ್ವಾಮಿ
ಗೌರವ ಕಾರ್ಯದರ್ಶಿಗಳು
ಶ್ರೀ ಬಿ.ಆರ್. ನೀಲಕಂಠ
ಪ್ರಾಂಶುಪಾಲರು
ಶ್ರೀಮತಿ ಎಂ.ಎಸ್. ವಿಜಯ
ಉಪ ಪ್ರಾಂಶುಪಾಲರು
ಸಾಧಕ ವಿದ್ಯಾರ್ಥಿಗಳಿಗೆ
ಬೋಧಕ, ಬೋಧಕೇತರ
ವೃಂದಕ್ಕೆ ಹಾಗೂ ಪೋಷಕರಿಗೆ
ಅಭಿನಂದನೆಗಳು –
ಆಡಳಿತ ಮಂಡಳಿ

ದ್ವಿತೀಯ ಪಿಯುಸಿ ಫಲಿತಾಂಶ ಪ್ರಕಟ

ಮಂಡ್ಯ ಜಿಲ್ಲೆಗೆ ಶೇ.53.77ರಷ್ಟು ಫಲಿತಾಂಶ

● 16,050 ವಿದ್ಯಾರ್ಥಿಗಳ ಪೈಕಿ 8,630 ವಿದ್ಯಾರ್ಥಿಗಳು ತೇರ್ಗಡೆ ● 29ನೇ ಸ್ಥಾನಕ್ಕೆ ತೃಪ್ತಿ, ಗ್ರಾಮೀಣರೇ ಮೇಲುಗೈ

ಮಂಡ್ಯ, ಜೂ.18(ಮೋಹನ್‌ರಾಜ್)– ಪ್ರಸಕ್ತ ಸಾಲಿನ ದ್ವಿತೀಯ ಪಿಯುಸಿ ಫಲಿತಾಂಶ ಪ್ರಕಟಗೊಂಡಿದ್ದು, ಮಂಡ್ಯ ಜಿಲ್ಲೆಗೆ ಶೇ.53.77ರಷ್ಟು ಫಲಿತಾಂಶ ಬಂದಿದ್ದು, 29ನೇ ಸ್ಥಾನಕ್ಕೆ ತೃಪ್ತಿಪಟ್ಟಿಕೊಂಡಿದೆ.

ಕಳೆದ ಏಪ್ರಿಲ್ ಹಾಗೂ ಮೇ ನಲ್ಲಿ ನಡೆದ ಪಿಯುಸಿ ಪರೀಕ್ಷೆಗೆ ಜಿಲ್ಲೆಯಲ್ಲಿ 16,050 ಮಂದಿ ವಿದ್ಯಾರ್ಥಿಗಳು ಹಾಜರಾಗಿದ್ದು, ಈ ಪೈಕಿ 8,630 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ. ಪರೀಕ್ಷೆಗೆ ಹಾಜರಾಗಿದ್ದ 13,964 ಹೊಸ ವಿದ್ಯಾರ್ಥಿಗಳ ಪೈಕಿ 8,206 ಮಂದಿ (ಶೇ.58.77) ಹಾಗೂ 2,086 ಮಂದಿ ಪುನರ್‌ವರ್ತಿತ ವಿದ್ಯಾರ್ಥಿಗಳ ಪೈಕಿ ಕೇವಲ 424 ಮಂದಿ ಉತ್ತೀರ್ಣರಾಗಿದ್ದಾರೆ. ಕಲಾ ವಿಭಾಗದಲ್ಲಿ ಪರೀಕ್ಷೆ ಬರೆದಿದ್ದ 3,900 ಮಂದಿ ಪೈಕಿ 1,523 ಮಂದಿ ಉತ್ತೀರ್ಣರಾಗಿ ಶೇ.39.5ರಷ್ಟು, ವಾಣಿಜ್ಯ ವಿಭಾಗದಲ್ಲಿ ಪರೀಕ್ಷೆ ಬರೆದಿದ್ದ 5,362 ಮಂದಿ ಪೈಕಿ 3,346 ಮಂದಿ ಉತ್ತೀರ್ಣರಾಗಿದ್ದು, ಶೇ.62.4ರಷ್ಟು ಹಾಗೂ ವಿಜ್ಞಾನ ವಿಭಾಗದ 4,702 ಮಂದಿ ಪೈಕಿ 3,337 ಮಂದಿ ಉತ್ತೀರ್ಣರಾಗಿ ಶೇ. 70.97ರಷ್ಟು ಫಲಿತಾಂಶ ಪಡೆದಿದ್ದಾರೆ.



ಪಟ್ಟಣ ಪ್ರದೇಶ ವ್ಯಾಪ್ತಿ ಪೈಕಿ 7,616 ಮಂದಿ ಪರೀಕ್ಷೆ ಬರೆದಿದ್ದು, 4,450 ಮಂದಿ ಉತ್ತೀರ್ಣರಾಗಿ ಶೇ. 58.43ರಷ್ಟು ಫಲಿತಾಂಶ ಪಡೆದರೆ, ಗ್ರಾಮೀಣ ಪ್ರದೇಶದ 6,348 ಮಂದಿ ಪೈಕಿ 3,756 ಮಂದಿ ಉತ್ತೀರ್ಣರಾಗಿ ಶೇ. 59.17 ರಷ್ಟು ಫಲಿತಾಂಶ ಪಡೆದಿದ್ದಾರೆ. ಕಲಾ ವಿಭಾಗದಲ್ಲಿ ಮಳವಳ್ಳಿ ತಾಲೂಕಿನ ಜೆಎಸ್‌ಎಸ್ ಪದವಿ ಪೂರ್ವ ಕಾಲೇಜಿನ ಕೆ.ಎನ್.ವಿಜಯಲಕ್ಷ್ಮಿ 587 ಅಂಕ ಪಡೆದು ಪ್ರಥಮ ಸ್ಥಾನ, ಎಂ.ವರಲಕ್ಷ್ಮಿ 575 ಅಂಕ ಪಡೆದು ದ್ವಿತೀಯ ಸ್ಥಾನ ಹಾಗೂ ಕೆ.ಆರ್.ಪೇಟೆಯ ಕೆವಿಆರ್ ಸಂಯುಕ್ತ ಪದವಿ ಪೂರ್ವ ಕಾಲೇಜಿನ ಎಸ್.ಎಂ.ಮನು 570 ಅಂಕ ಪಡೆದು ಮೂರನೇ ಸ್ಥಾನ ಪಡೆದಿದ್ದಾರೆ.

ವಾಣಿಜ್ಯ ವಿಭಾಗದಲ್ಲಿ ಮಂಡ್ಯದ ಸದ್ವಿದ್ಯಾ ಪದವಿ ಪೂರ್ವ ಕಾಲೇಜಿನ ಆದ್ಯಾ ಎಂ.ಜೈನ್ 589 ಅಂಕ ಪಡೆದು ಮೊದಲ ಸ್ಥಾನ ಪಡೆದರೆ, ಮಂಡ್ಯದ ಅನಿಕೇತನ ಪದವಿ ಪೂರ್ವ ಕಾಲೇಜಿನ ಎಸ್.ನಾರಾಯಣಸ್ವಾಮಿ 588 ಅಂಕ ಪಡೆದು ಎರಡನೇ ಸ್ಥಾನ ಹಾಗೂ ಮಂಡ್ಯದ ಸದ್ವಿದ್ಯಾ ಪದವಿ ಪೂರ್ವ ಕಾಲೇಜಿನ ಜೆ.ಮೊನಾಲಿಸಾ 583 ಅಂಕ ಪಡೆದು ಮೂರನೇ ಸ್ಥಾನ ಪಡೆದಿದ್ದಾರೆ.

ವಿಜ್ಞಾನ ವಿಭಾಗದಲ್ಲಿ ಶ್ರೀರಂಗಪಟ್ಟಣ ತಾಲೂಕಿನ ಪಿ.ಹೊಸಹಳ್ಳಿಯ ಆರಾಧನ ಪದವಿ ಪೂರ್ವ ಕಾಲೇಜಿನ ಎನ್.ಎನ್.ಕಾತ್ಯಾಯಿನಿ 593 ಅಂಕ ಪಡೆದು ಮೊದಲ ಸ್ಥಾನ, ಮಂಡ್ಯದ ಮಾಂಡವ್ಯ ಎಕ್ಸಲೆನ್ಸ್ ಪದವಿಪೂರ್ವ ಕಾಲೇಜಿನ ಕೆ.ಪ್ರಿಯಾಂಕ 592 ಅಂಕ ಪಡೆದು ದ್ವಿತೀಯ ಸ್ಥಾನ ಹಾಗೂ ಪಾಂಡವಪುರ ತಾಲೂಕಿನ ಚಿನಕುರಳಿಯ ಎಸ್‌ಟಿಜಿ ಪದವಿ ಪೂರ್ವ ಕಾಲೇಜಿನ ಯು.ಪುನೀತ್ 590 ಅಂಕ ಪಡೆದು ಮೂರನೇ ಸ್ಥಾನ ಪಡೆದುಕೊಂಡಿದ್ದಾರೆ ಎಂದು ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಚಿನಕುರಳಿ ಪಿಎಸಿಎಸ್‌ಗೆ ಮೊಗಣ್ಣೇಗೌಡ ಅಧ್ಯಕ್ಷ



ಚಿನಕುರಳಿ, ಜೂ.18(ಸಿ.ಎ.ಲೋಕೇಶ್)– ಚಿನಕುರಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಜೆಡಿಎಸ್ ಬೆಂಬಲಿತ ನಿರ್ದೇಶಕ ಮೊಗಣ್ಣೇಗೌಡ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಅಧಿಕಾರ ಹಂಚಿಕೆ ಒಡಂಬಡಿಕೆ ಸೂತ್ರದನ್ವಯ ಈ ಹಿಂದಿನ ಅಧ್ಯಕ್ಷ ಸಿ.ಬಿ.ವಾಸುದೇವಯ್ಯ ಅವರ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ಶನಿವಾರ ಚುನಾವಣೆ ನಡೆಯಿತು. ಒಟ್ಟು 11 ನಿರ್ದೇಶಕರ ಬಲದ ಸಂಘದಲ್ಲಿ ಅಧ್ಯಕ್ಷ ಸ್ಥಾನಕ್ಕೆ ಮೊಗಣ್ಣೇಗೌಡರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಚುನಾವಣಾಧಿಕಾರಿ ಜಿಲ್ಲಾ ಸಹಕಾರ ಸಂಘದ ಎಸ್.ಎಸ್.ಮುಕ್ತ ಅವರು ಅವಿರೋಧ ಆಯ್ಕೆಯನ್ನು ಘೋಷಿಸಿದರು. ನೂತನ ಅಧ್ಯಕ್ಷರ ಆಯ್ಕೆಯಾಗುತ್ತಿದ್ದಂತೆ ಜೆಡಿಎಸ್ ಕಾರ್ಯಕರ್ತರು, ಬೆಂಬಲಿಗರು ಮತ್ತು ಅಭಿಮಾನಿಗಳು ಪಟಾಕಿ ಸಿಡಿಸಿ, ಸಿಹಿ ವಿತರಿಸಿ ಸಂಭ್ರಮಿಸಿದರು.

ನೂತನ ಅಧ್ಯಕ್ಷ ಮೊಗಣ್ಣೇಗೌಡ ಮಾತನಾಡಿ, ಶಾಸಕ ಸಿ.ಎಸ್.ಪುಟ್ಟರಾಜು ಮಾರ್ಗದರ್ಶನ ಮತ್ತು ಸಹ ನಿರ್ದೇಶಕರ ಸಹಕಾರದೊಂದಿಗೆ ಸಂಘದ ಅಭಿವೃದ್ಧಿಗೆ ಪೂರಕವಾದ ಕೆಲಸಗಳನ್ನು ನಿರ್ವಹಿಸುವ ಜೊತೆಗೆ ರೈತರಿಗೆ ಅನುಕೂಲವಾಗುವ ಹೊಸ ಯೋಜನೆಗಳ ಜಾರಿಗೆ ಶ್ರಮಿಸಲಾಗುವುದು ಎಂದರು.

ಈ ವೇಳೆ ಜಿಪಂ ಮಾಜಿ ಸದಸ್ಯ ಸಿ.ಅಶೋಕ್, ಲಾರಿ ಮಾಲೀಕರ ಸಂಘದ ಅಧ್ಯಕ್ಷ ಸಿ.ಶಿವಕುಮಾರ್, ತಾಪಂ ಮಾಜಿ ಸದಸ್ಯ ಗೋಪಾಲೇಗೌಡ, ಪಿಎಲ್‌ಡಿ ಬ್ಯಾಂಕ್ ನಿರ್ದೇಶಕ ಸಿ.ಪ್ರಕಾಶ್, ಮುಖಂಡರಾದ ಎಸ್.ಟಿ.ನಾಗಣ್ಣ, ಜಯರಾಮೇಗೌಡ, ಸಿ.ಕೆ.ಅಂಕೇಗೌಡ, ಸಂಘದ ಉಪಾಧ್ಯಕ್ಷೆ ಪಾರ್ವತಮ್ಮ, ನಿರ್ದೇಶಕರಾದ ರಾಮಕೃಷ್ಣ, ಮಂಜುನಾಥ್, ರಾಮೇಗೌಡ, ಶಿವಣ್ಣ, ಕುಮಾರ, ಮಹದೇವಪ್ಪ, ಭವ್ಯಶ್ರೀ, ಗಿರೀಶ್, ಚಂದ್ರು, ಕಾರ್ಯದರ್ಶಿ ಕಾಂತರಾಜು, ಪುಟ್ಟೇಗೌಡ, ಮಹದೇವಣ್ಣ, ಗ್ರಾಪಂ ಸದಸ್ಯರಾದ ಸಿ.ಎ.ಲೋಕೇಶ್, ಪರಮೇಶ್, ಕೃಷ್ಣೇಗೌಡ, ಮುಖಂಡರಾದ ಎಂ.ಎಲ್.ರಮೇಶ್, ಸಿ.ಡಿ.ಮಹದೇವ್, ಮಹದೇವ್, ಯಜಮಾನ್ ಸುಬ್ಬೇಗೌಡ ಸೇರಿದಂತೆ ಇತರರಿದ್ದರು.

ಸುಶೀಲಮ್ಮ ನಿಧನ



ಕೆ.ಆರ್.ಪೇಟೆ, ಜೂ.18– ತಾಲೂಕಿನ ಅಗ್ರಹಾರಬಾಚಹಳ್ಳಿ ಗ್ರಾಮದ ಅನಂತಶೆಟ್ಟಿ ಪತ್ನಿ ಸುಶೀಲಮ್ಮ(65) ಶನಿವಾರ ನಿಧನರಾದರು. ಮೃತರು ಇಬ್ಬರು ಪುತ್ರರು, ಓರ್ವ ಪುತ್ರಿ, ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮದಲ್ಲಿ ನಡೆಯಿತು. ಮೃತರು ಗ್ರಾಪಂ ಸದಸ್ಯ ಆರ್. ಶ್ರೀನಿವಾಸ್ ಅವರ ಚಿಕ್ಕಮ್ಮ.

ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆ ಗೆಲುವು ಸಂತಸ ತಂದಿದೆ

ತಂದೆ ನೆನೆದು ಭಾವುಕರಾದ ಎಂಎಲ್‌ಸಿ ಮಧು ಜಿ.ಮಾದೇಗೌಡ

ಭಾರತೀನಗರ, ಜೂ.18(ಅ.ಸತೀಶ್)– ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆ ಗೆಲುವು ನಮ್ಮ ಕುಟುಂಬಕ್ಕೆ ಸಂತಸ ತಂದಿದೆ ಎಂದು ತಂದೆ ದಿ.ಜಿ.ಮಾದೇಗೌಡರನ್ನು ನೆನೆದು ವಿಧಾನಪರಿಷತ್ ಸದಸ್ಯ ಮಧು ಜಿ.ಮಾದೇಗೌಡ ಭಾವುಕರಾದರು.

ಇಲ್ಲಿನ ಭಾರತೀ ಕಾಲೇಜಿನ ಕುವೆಂಪು ಸಭಾಂಗಣದಲ್ಲಿ ಅಧ್ಯಾಪಕ–ಅಧ್ಯಾಪಕೇತರರು ಏರ್ಪಡಿಸಿದ್ದ ಅಭಿನಂದನಾ ಕಾರ್ಯಕ್ರಮದಲ್ಲಿ ಅಭಿನಂದನೆ ಸ್ವೀಕರಿಸಿ ಮಾತನಾಡಿದ ಅವರು, ನನ್ನ ಗೆಲುವು ನಿಮ್ಮ ಶ್ರಮದಿಂದ ಸಾಧ್ಯವಾಗಿದೆ. ನನಗೆ ನಿಮ್ಮ ಸೇವೆ ಮಾಡಲು ಅವಕಾಶ ಕಲ್ಪಿಸಿ ಕೊಟ್ಟದ್ದಕ್ಕೆ ಚಿರಋಣಿಯಾಗಿರುತ್ತೇನೆ. ನಮ್ಮ ಕಾಲೇಜಿನ ಅಧ್ಯಾಪಕ–ಅಧ್ಯಾಪಕೇತರರು ಕಳೆದ ಒಂದೂವರೆ ವರ್ಷದಿಂದ ನಿರಂತರವಾಗಿ ನನ್ನ ಗೆಲುವಿಗೆ ಪದವೀಧರರನ್ನು ಸಂಪರ್ಕಿಸಿ ನೋಂದಣಿ ಮಾಡಿಸಿದ್ದರಿಂದ ಇಂದು ಫಲಸಿಕ್ಕಿದೆ. ಕೆಲವು ಅಧ್ಯಾಪಕರು ತಮ್ಮ ಕುಟುಂಬ ಬಿಟ್ಟು ಚುನಾವಣೆ ಪ್ರಚಾರದಲ್ಲಿ ತೊಡಗಿ ಮತದಾರರ ವಿಶ್ವಾಸಗಳಿಸಿ ನನಗೆ ಮತ ಹಾಕಿಸಿದ್ದಾರೆ. ಹಾಗಾಗಿ 12 ಸಾವಿರಕ್ಕೂ ಅಧಿಕ ಮತಗಳಿಂದ ಗೆಲುವು ಸಾಧಿಸಲು ಸಾಧ್ಯವಾಯಿತು ಎಂದರು.

ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ನನ್ನ ಮೇಲೆ ವಿಶ್ವಾಸವಿಟ್ಟು ಟಿಕೆಟ್ ನೀಡಿದ್ದರು. ಅವರ ವಿಶ್ವಾಸಕ್ಕೆ ಧಕ್ಕೆ ತರದಂತೆ ನನ್ನ ಗೆಲುವಿಗೆ ಶ್ರಮಿಸಿದ ಎಲ್ಲರಿಗೂ ಕೃತಜ್ಞತೆ ಸಲ್ಲಿಸುತ್ತೇನೆ ಎಂದರು.

ಮಾಜಿ ಸಚಿವ ಎ.ಎಸ್.ಆತ್ಮಾನಂದ ಮಾತನಾಡಿ, ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ, ಮಾಜಿ ಸಚಿವರಾದ ಕೆ.ವಿ.ಶಂಕರೇಗೌಡ, ಎಚ್.ಡಿ.ಚೌಡಯ್ಯ, ಜಿ.ಮಾದೇಗೌಡರು ಜಿಲ್ಲೆಯ ಅಭಿವೃದ್ಧಿ ವಿಚಾರದಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಜನಮಾನಸದಲ್ಲಿ ಕರ್ತವ್ಯ ಪ್ರಜ್ಞೆ ಮೂಡಿಸಿರುವ ಈ ದಿಗ್ಗಜರನ್ನು ನಾವು ಎಂದಿಗೂ ಮರೆಯುವಂತಿಲ್ಲ. ಇವರು ಹಾಕಿಕೊಟ್ಟ ದಾರಿಯಲ್ಲಿ ನಡೆದು ಜಿಲ್ಲೆಯ ಅಭಿವೃದ್ಧಿಗೆ ಶ್ರಮಿಸಬೇಕೆಂದು ಮಧು



ಜಿ.ಮಾದೇಗೌಡರಿಗೆ ಕಿವಿಮಾತು ಹೇಳಿದರು. ಇದೇ ವೇಳೆ ಭಾರತೀ ಎಜುಕೇಷನ್ ಟ್ರಸ್ಟ್ ಹಾಗೂ ಅಧ್ಯಾಪಕ–ಅಧ್ಯಾಪಕೇತರರು ಮಧು ಜಿ.ಮಾದೇಗೌಡರನ್ನು ಅಭಿನಂದಿಸಿದರು. ಮಾಜಿ ಶಾಸಕ ಹಾಗೂ ಜಿಪಂ ಮಾಜಿ ಅಧ್ಯಕ್ಷ ಬಿ.ಬಸವರಾಜು, ಭಾರತೀ ಎಜುಕೇಷನ್ ಟ್ರಸ್ಟ್ ಕಾರ್ಯದರ್ಶಿ ಬಿ.ಎಂ.ನಂಜೇಗೌಡ, ಸಿದ್ದೇಗೌಡ, ಆಶಯ್ ಮಧು,ಮಾದೇಗೌಡ, ಪಾಪಣ್ಣ, ಮುದ್ದಯ್ಯ, ಜಯರಾಮು, ಬಸವೇಗೌಡ, ಎನ್.ರಾಜು ಹಲವರಿದ್ದರು.

ದ್ವಿತೀಯ ಪಿಯುಸಿ: ಶೇ.63.03 ರಷ್ಟು ಫಲಿತಾಂಶ

ರಾಜ್ಯದಲ್ಲಿ ಚಾಮರಾಜನಗರ ಜಿಲ್ಲೆಗೆ 18ನೇ ಸ್ಥಾನ

ಚಾಮರಾಜನಗರ, ಜೂ.18– ಕಳೆದ ಏಪ್ರಿಲ್/ಮೇ ತಿಂಗಳಲ್ಲಿ ನಡೆದಿದ್ದ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಜಿಲ್ಲೆ ಶೇ. 63.03 ರಷ್ಟು ಫಲಿತಾಂಶ ಪಡೆದಿದ್ದು, ರಾಜ್ಯದಲ್ಲಿ 18ನೇ ಸ್ಥಾನದಲ್ಲಿದೆ.

ವಾಣಿಜ್ಯ ವಿಭಾಗದಲ್ಲಿ ಹೆಚ್ಚು ಅಂದರೆ, ಶೇ. 72.04ರಷ್ಟು, ವಿಜ್ಞಾನ ವಿಭಾಗದಲ್ಲಿ ಶೇ. 66.23ರಷ್ಟು ಹಾಗೂ ಕಲಾ ವಿಭಾಗದಲ್ಲಿ ಶೇ. 51.93ರಷ್ಟು ಫಲಿತಾಂಶ ಬಂದಿದೆ. ಜಿಲ್ಲೆಯಲ್ಲಿ 6,985 ವಿದ್ಯಾರ್ಥಿಗಳು ದ್ವಿತೀಯ ಪಿಯುಸಿ ಪರೀಕ್ಷೆ ತೆಗೆದುಕೊಂಡಿದ್ದರು, ಇವರಲ್ಲಿ 4,402 ಮಂದಿ ಉತ್ತೀರ್ಣರಾಗಿದ್ದಾರೆ. ಮೂರೂ ವಿಭಾಗಗಳಲ್ಲಿ ಕಲಾ ವಿಭಾಗದಲ್ಲಿ ಕಡಿಮೆ (ಶೇ.51.93) ಫಲಿತಾಂಶ ಬಂದಿದೆ. ಕಲಾ ವಿಭಾಗದಿಂದ 2,667 ಮಂದಿ ವಿದ್ಯಾರ್ಥಿಗಳು ಪರೀಕ್ಷೆ ತೆಗೆದುಕೊಂಡಿದ್ದರು, ಇವರಲ್ಲಿ 1,385 ಮಂದಿ ತೇರ್ಗಡೆಯಾಗಿದ್ದಾರೆ.

ವಾಣಿಜ್ಯ ವಿಭಾಗದಲ್ಲಿ ಹೆಚ್ಚಿನ (ಶೇ.72.04) ರಷ್ಟು ಫಲಿತಾಂಶ ಬಂದಿದೆ. ಈ ವಿಭಾಗದಲ್ಲಿ 2,707 ಮಂದಿ ವಿದ್ಯಾರ್ಥಿಗಳು ಪರೀಕ್ಷೆ ತೆಗೆದುಕೊಂಡಿದ್ದರು, ಇವರಲ್ಲಿ 1,950 ಮಂದಿ ತೇರ್ಗಡೆಯಾಗಿದ್ದಾರೆ.

ವಿಜ್ಞಾನ ವಿಭಾಗದಲ್ಲಿ 1,611 ಮಂದಿ ಪರೀಕ್ಷೆ ತೆಗೆದುಕೊಂಡಿದ್ದರು. ಇವರಲ್ಲಿ 1,067 ಮಂದಿ ಉತ್ತೀರ್ಣರಾಗಿದ್ದಾರೆ. ಶೇ. 66.23ರಷ್ಟು ಫಲಿತಾಂಶ ದೊರೆತಿದೆ.

ಪಟ್ಟಣ ಪ್ರದೇಶದಲ್ಲಿ ಶೇ.63.47ರಷ್ಟು ಫಲಿತಾಂಶ ದೊರೆತಿದೆ. 4,793 ಮಂದಿ ಪರೀಕ್ಷೆ ತೆಗೆದುಕೊಂಡಿದ್ದರು, ಇವರಲ್ಲಿ 3,042 ಮಂದಿ ಪಾಸಾಗಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿ ಶೇ. 62.04ರಷ್ಟು ಫಲಿತಾಂಶ ಬಂದಿದೆ. 2,192 ಮಂದಿ ವಿದ್ಯಾರ್ಥಿಗಳು ಪರೀಕ್ಷೆ ತೆಗೆದುಕೊಂಡಿದ್ದರು. ಇವರಲ್ಲಿ 1360 ಮಂದಿ ತೇರ್ಗಡೆ ಹೊಂದಿದ್ದಾರೆ. ಈ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಜಿಲ್ಲೆ ರಾಜ್ಯದಲ್ಲಿ 18 ನೇ ಸ್ಥಾನ ಪಡೆದಿದೆ. 2019–20ನೇ ಸಾಲಿನಲ್ಲಿ 12ನೇ ಸ್ಥಾನ ಪಡೆದಿತ್ತು. (2020–21ನೇ ಸಾಲಿನಲ್ಲಿ ಕೋವಿಡ್ ಕಾರಣ ವಿಶೇಷ ಪರೀಕ್ಷೆ ನಡೆಸಲಾಗಿತ್ತು).

6 ಈ ಬಾರಿ ಜಿಲ್ಲೆಯ ದ್ವಿತೀಯ ಪಿಯುಸಿ ಫಲಿತಾಂಶ ತೃಪ್ತಿ ಕೊಟ್ಟಿದೆ. ಆದರೂ ಕಲಾ ವಿಭಾಗದಲ್ಲಿ ಕಡಿಮೆ ಫಲಿತಾಂಶ ಬಂದಿದೆ. ಹೀಗೇಕಾಗಿದೆ ಎಂದು ಗೊತ್ತಿಲ್ಲ. ಒಟ್ಟಾರೆ ಫಲಿತಾಂಶ ಚೆನ್ನಾಗಿ ಬಂದಿದೆ. ಉತ್ತಮ ಫಲಿತಾಂಶ ನೀಡಲು ಸಾಕಷ್ಟು ಪ್ರಯತ್ನ ನಡೆಸಲಾಗಿತ್ತು. ಇದಕ್ಕೆ ಕಾರಣರಾದ ವಿದ್ಯಾರ್ಥಿಗಳು, ಉಪನ್ಯಾಸಕರು, ಸಿಬ್ಬಂದಿಯನ್ನು ಅಭಿನಂದಿಸುತ್ತೇನೆ. –ನಾಗಮಲ್ಲೇಶ್, ಪಿ.ಯು, ಡಿಡಿ.

ಜಿಲ್ಲೆಯ ಟಾಪರ್ಸ್

ಜಿಲ್ಲೆಯಲ್ಲಿ ಮೂರು ವಿಭಾಗಗಳಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳ ವಿವರ ಇಂತಿದೆ:


ಎಸ್.ಸುಮಾ


ಹರ್ಷಿತಾ


ಪ್ರಿಯಾಂಕ ಪಾನಿ ಡಿ

ಕಲಾ ವಿಭಾಗ: ಎಸ್.ಸುಮಾ 569 ಶೇ. 94.83. ಬಾಲಕಿಯರ ಸರ್ಕಾರಿ ಪಪೂ ಕಾಲೇಜು, ಗುಂಡ್ಲುಪೇಟೆ. **ವಾಣಿಜ್ಯ ವಿಭಾಗ:** ಡಿ. ಪ್ರಿಯಾಂಕಾ ಪಾಣಿ, 589, ಶೇ.98.16. ಬ್ರೈಟ್ ಪಪೂ ಕಾಲೇಜು, ಚಾಮರಾಜನಗರ. **ವಿಜ್ಞಾನ ವಿಭಾಗ:** ಎಸ್.ಹರ್ಷಿತಾ, 591, ಶೇ.98.05, ನಿಸರ್ಗ ಪಪೂ ಕಾಲೇಜು, ಕೊಳ್ಳೇಗಾಲ. ಜಿಲ್ಲೆಯಲ್ಲಿ ಅತಿ ಹೆಚ್ಚು ಫಲಿತಾಂಶ ಪಡೆದ ಪದವಿಪೂರ್ವ ಕಾಲೇಜು, ಸರ್ಕಾರಿ ಪದವಿ ಪೂರ್ವ ಕಾಲೇಜು, ತೆರಕಣಾಂಬಿ ಶೇ.87.17. ಜಿಲ್ಲೆಯಲ್ಲಿ ಅತಿ ಹೆಚ್ಚು ಫಲಿತಾಂಶ ಪಡೆದ ಅನುದಾನಿತ ಪದವಿ ಪೂರ್ವ ಕಾಲೇಜು, ಜೆಎಸ್‌ಎಸ್ ಮಹಿಳಾ ಪಪೂ ಕಾಲೇಜು, ಗುಂಡ್ಲುಪೇಟೆ. ಶೇ.93.75. ಜಿಲ್ಲೆಯಲ್ಲಿ ಅತಿ ಹೆಚ್ಚು ಫಲಿತಾಂಶ ಪಡೆದ ಅನುದಾನ ರಹಿತ ಕಾಲೇಜು, ಬ್ರೈಟ್ ಪದವಿ ಪೂರ್ವ ಕಾಲೇಜು, ಚಾಮರಾಜನಗರ. ಶೇ.100.

ದರ್ಶನ್‌ಗೆ ಉನ್ನತ ಶ್ರೇಣಿ



ಗುಂಡ್ಲುಪೇಟೆ, ಜೂ.18(ಸೋಮ್.ಜಿ)– ಪಟ್ಟಣದ ಅಶ್ವಿನಿ ಬಡಾವಣೆ (ದ.ರಾ. ಬೇಂದ್ರೆ ನಗರ) ನಿವಾಸಿ ಜಿ.ಎಸ್. ದರ್ಶನ್ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾರೆ. ನಂಜನಗೂಡಿನ ಯೂನಿಟಿ ಪಿಯು ಕಾಲೇಜಿನ ವಿದ್ಯಾರ್ಥಿಯಾದ ಜಿ.ಎಸ್.ದರ್ಶನ್ 600 ಅಂಕಗಳಿಗೆ 549(ಶೇ.91.5) ಅಂಕಗಳನ್ನು ಗಳಿಸಿ, ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ಕನ್ನಡದಲ್ಲಿ 100ಕ್ಕೆ 98, ಇಂಗ್ಲಿಷ್‌ನಲ್ಲಿ 100ಕ್ಕೆ 90, ಅರ್ಥಶಾಸ್ತ್ರದಲ್ಲಿ 100ಕ್ಕೆ 80, ವ್ಯವಹಾರ ಅಧ್ಯಯನ ವಿಷಯದಲ್ಲಿ 100ಕ್ಕೆ 95, ಲೆಕ್ಕಶಾಸ್ತ್ರದಲ್ಲಿ 100ಕ್ಕೆ 92 ಮತ್ತು ಗಣಕ ವಿಜ್ಞಾನ ವಿಷಯದಲ್ಲಿ 100ಕ್ಕೆ 94 ಅಂಕಗಳನ್ನು ಪಡೆದಿದ್ದಾರೆ.

ಈತ 'ಮೈಸೂರು ಮಿತ್ರ' ತಾಲೂಕು ವರದಿಗಾರ ಗುಂಡ್ಲುಪೇಟೆ ಸೋಮಶೇಖರ್ ಮತ್ತು ಶ್ರೀಮತಿ ಶಾಂತಾ ದಂಪತಿ ಕಿರಿಯ ಪುತ್ರ.

ಜಾಗೃತಿ ಕಾರ್ಯಕ್ರಮ

ಚಾಮರಾಜನಗರ: ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ನ್ಯಾಷನಲ್ ಎಲ್ಡರ್ ಲೈನ್ 14567 ಹಾಗೂ ನೈಟಿಂಗೇಲ್ ಮೆಡಿಕಲ್ ಟ್ರಸ್ಟ್ ಇವರ ಸಹಯೋಗದಲ್ಲಿ ವಿಶ್ವ ಹಿರಿಯರ ನಿಂದನೆ ಜಾಗೃತಿ ದಿನ ಕಾರ್ಯಕ್ರಮವನ್ನು ಜೂ.22 ರಂದು ಬೆಳಗ್ಗೆ 11 ಗಂಟೆಗೆ ನಗರದ ಜಿಲ್ಲಾಡಳಿತ ಭವನದ ಹಳೆ ಕೆ.ಡಿ.ಪಿ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಸಾರ್ವಜನಿಕ ಸ್ಥಳದಲ್ಲಿ ಧೂಮಪಾನ: ದಂಡ ವಸೂಲಿ

ಚಾಮರಾಜನಗರ, ಜೂ.18– ಪೊಲೀಸ್ ಇಲಾಖೆ ವತಿಯಿಂದ ಕೋಟ್ಪಾ ಕಾಯ್ದೆಯಡಿ ಚಾಮರಾಜನಗರ ಜಿಲ್ಲೆಯ ವಿವಿಧ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಮೇ ಮಾಹೆಯಲ್ಲಿ ಸಾರ್ವಜನಿಕರ ಸ್ಥಳಗಳಲ್ಲಿ ಧೂಮಪಾನ ಮಾಡುತ್ತಿದ್ದವರ ವಿರುದ್ಧ 1146 ಪ್ರಕರಣಗಳನ್ನು ದಾಖಲಿಸಿ, 82,750 ರೂ.ಗಳ ದಂಡ ವಿಧಿಸಲಾಗಿದೆ ಎಂದು ಪೊಲೀಸ್ ಅಧೀಕ್ಷಕರ ಕಚೇರಿಯ ಸಾರ್ವಜನಿಕ ಸಂಪರ್ಕ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಿಳಿಗಿರಿರಂಗನಾಥಸ್ವಾಮಿಗೆ ರಾಜ್ಯ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಭೇಟಿ, ವಿಶೇಷ ಪೂಜೆ

ಯಳಂದೂರು, ಜೂ.18(ವಿ.ನಾಗರಾಜು)– ತಾಲೂಕಿನ ಪ್ರೇಕ್ಷಣೀಯ ಹಾಗೂ ಧಾರ್ಮಿಕ ಸ್ಥಳವಾದ ಶ್ರೀ ಬಿಳಿಗಿರಿರಂಗನಾಥ ಸ್ವಾಮಿ ಬೆಟ್ಟಕ್ಕೆ ರಾಜ್ಯ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಾದ ರಿತುರಾಜ್ ಅವಸ್ಥಿ ಶನಿವಾರ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿದರು.

ಹೈಕೋರ್ಟ್ ನ್ಯಾಯಮೂರ್ತಿ ಭೇಟಿ ಹಿನ್ನೆಲೆ ದೇವಾಲಯದ ಸುತ್ತಲೂ ಸೂಕ್ತ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿತ್ತು ನ್ಯಾಯಮೂರ್ತಿ ಬೇಟಿ ನೀಡುತ್ತಿದ್ದರಿಂದ ದೇವಾಲಯ ಅಭಿವೃದ್ಧಿ ಮಂಡಳಿ ಅಧಿಕಾರಿಗಳು ಮತ್ತು ಅರ್ಚಕರು ಸ್ವಾಗತಿಸಿದರು.



ನಂತರ ಬಿಳಿಗಿರಿರಂಗನಾಥಸ್ವಾಮಿ ಅಲುಮೇಲು ರಂಗನಾಯಕಿ ಅಮ್ಮನವರಿಗೆ ನ್ಯಾಯಮೂರ್ತಿ ರಿತು ರಾಜ್ ಅವಸ್ಥಿ ದಂಪತಿ ವಿಶೇಷ ಪೂಜೆ ಸಲ್ಲಿಸಿದರು.

ಚಲಿಸುತ್ತಿದ್ದ ಲಾರಿ ಮೇಲೆ ಬಿದ್ದ ವಿದ್ಯುತ್ ಕಂಬ: ತಪ್ಪಿದ ಅನಾಹುತ

ಯಳಂದೂರು, ಜೂ.18(ವಿ.ನಾಗರಾಜು)– ಚಲಿಸುತ್ತಿದ್ದ ಲಾರಿ ಮೇಲೆ ಶಿಥಿಲಗೊಂಡ ವಿದ್ಯುತ್ ಕಂಬ ಬಿದ್ದು, ಲಾರಿ ಜಖಂಗೊಂಡಿದ್ದು, ಪ್ರಾಣಾಪಾಯದಿಂದ ಚಾಲಕ ಪಾರಾಗಿರುವ ಘಟನೆ ಯಳಂದೂರು ಪಟ್ಟಣದ ಹೃದಯ ಭಾಗದಲ್ಲಿರುವ ವಾಲ್ಮೀಕಿ ಸರ್ಕಲ್ ಬಳಿ ಶುಕ್ರವಾರ ಮಧ್ಯಾಹ್ನ ಘಟನೆ ನಡೆದಿದೆ.



ಕುಂತೂರು ಸಕ್ಕರೆಗೆ ಕಬ್ಬು ಸಾಗಿಸುತ್ತಿದ್ದ ವೇಳೆ ಈ ಅವಘಡ ಸಂಭವಿಸಿದೆ. ಇದರಿಂದ ಸ್ಥಳೀಯ ರಸ್ತೆ ಬದಿ ವ್ಯಾಪಾರಿಗಳು, ನಿವಾಸಿಗಳು ಆತಂಕಕ್ಕೆ ಒಳಗಾದರು. ಚೆಸ್ಕಾಂ ಅಧಿಕಾರಿಗಳ ನಿರ್ಲಕ್ಷ್ಯದಿಂದ ಲಾರಿ ಮೇಲೆ ವಿದ್ಯುತ್ ಕಂಬ ಬಿದ್ದಿದೆ. ವಿದ್ಯುತ್ ಕಂಬ ಶಿಥಿಲಗೊಂಡಿರುವ ಬಗ್ಗೆ ಹಲವಾರು ದೂರು ನೀಡಿದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದರು. ರಸ್ತೆ ಮಧ್ಯ ಸಂಚರಿಸಬೇಕಾದ ಲಾರಿ ರಸ್ತೆ ಬದಿ ಇರುವ ಕಂಬದ ತಂತಿಗೆ ಡಿಕ್ಕಿ ಹೊಡೆದ ಪರಿಣಾಮ ಕಂಬ ಬಿದ್ದಿದೆ ಎಂದು ಚೆಸ್ಕಾಂ ಇಂಜಿನಿಯರ್ ಲಾರಿ ಚಾಲಕನಿಗೆ ಬೆದರಿಸಿದರು ಎನ್ನಲಾಗಿದೆ. ಸ್ಥಳದಲ್ಲಿದ್ದ ಪ್ರತ್ಯಕ್ಷದರ್ಶಿಗಳು ಇಂಜಿನಿಯರ್‌ರನ್ನು ತರಾಟೆಗೆ ತೆಗೆದುಕೊಂಡು ಈ ಘಟನೆಗೆ ನೀವು ಮತ್ತು ನಿಮ್ಮ ಇಲಾಖೆ ಕಾರಣ ಎಂದು ಆಕ್ರೋಶ ವ್ಯಕ್ತಪಡಿಸಿದರು. ಲಾರಿ ರಸ್ತೆ ಮಧ್ಯ ನಿಂತಿದ್ದರಿಂದ ಕೆಲಕಾಲ ಟ್ರಾಫಿಕ್ ಜಾಮ್ ಆಗಿ ಜನರು ಪರದಾಡುವಂತಾಯಿತು.

ನಾಳೆ ಅಂಗನವಾಡಿ ಕೇಂದ್ರಗಳಿಗೆ ಪೂರಕ ಪೌಷ್ಟಿಕ ಆಹಾರ ಪದಾರ್ಥಗಳ ವಿತರಣೆ

ಚಾಮರಾಜನಗರ, ಜೂ.18– ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಚಾಮರಾಜನಗರ ತಾಲೂಕು ಶಿಶು ಅಭಿವೃದ್ಧಿ ಯೋಜನಾ ವ್ಯಾಪ್ತಿಯಲ್ಲಿ ಬರುವ 281 ಅಂಗನವಾಡಿ ಕೇಂದ್ರಗಳಿಗೆ ಮೇ–2022ರ ಮಾಹೆಯ ಪೂರಕ ಪೌಷ್ಟಿಕ ಆಹಾರ ಪದಾರ್ಥಗಳನ್ನು ಅಂಗನವಾಡಿ ಕೇಂದ್ರಗಳಿಗೆ ವಿತರಿಸಲಾಗುತ್ತದೆ.

ಜೂ.20ರಂದು ಅಮಚವಾಡಿಯ 28, 21ರಂದು ಬಿಸಲವಾಡಿಯಲ್ಲಿ 30, 22ರಂದು ಹರವೆಯ 31,23ರಂದು ಅರಳೀಕಟ್ಟೆಯ 28, 24ರಂದು ಉಡಿಗಾಲದ 24, 25ರಂದು ಕೊತ್ತಲವಾಡಿಯಲ್ಲಿ 29,27ರಂದು ರಾಮಸಮುದ್ರದಲ್ಲಿ 25, 28ರಂದು ಸೋ.ಪೇಟೆ ಸೇರಿದಂತೆ 25 ಕೇಂದ್ರಗಳಲ್ಲಿ ಈ ಪೌಷ್ಟಿಕ ಆಹಾರ ವಿತರಿಸಲಾಗುವುದು.

ದ್ವಿತೀಯ ಪಿಯುಸಿ ಫಲಿತಾಂಶ

ಕೊಡಗು ಜಿಲ್ಲೆಗೆ 6ನೇ ಸ್ಥಾನ

ಕಳೆದ ಬಾರಿಗಿಂತ ಶೇ.8.31 ರಷ್ಟು ಫಲಿತಾಂಶ ಕುಸಿತ

ಮಡಿಕೇರಿ, ಜೂ.18– ಕಳೆದ ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ನಡೆದ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯ ಫಲಿತಾಂಶ ಪ್ರಕಟವಾಗಿದ್ದು, ಕೊಡಗು ಜಿಲ್ಲೆಯು ಶೇ.73.22 ರಷ್ಟು ಫಲಿತಾಂಶ ಪಡೆದು ರಾಜ್ಯಕ್ಕೆ 6ನೇ ಸ್ಥಾನ ಪಡೆದಿದೆ 2020 ರ ಫಲಿತಾಂಶಕ್ಕೆ ಹೋಲಿಸಿದರೆ ಈ ಬಾರಿ ಜಿಲ್ಲೆಯ ಒಟ್ಟಾರೆ ಫಲಿತಾಂಶದಲ್ಲಿ ಶೇ.8.31 ರಷ್ಟು ಕಡಿಮೆಯಾಗಿದೆ.

ಜಿಲ್ಲೆಯಲ್ಲಿ 5,421 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು, ಇದರಲ್ಲಿ 3,969 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ. ಕಲಾ ವಿಭಾಗದಲ್ಲಿ 1,245 ವಿದ್ಯಾರ್ಥಿಗಳ ಪೈಕಿ 700 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು, ಶೇ.56.22 ರಷ್ಟು ಫಲಿತಾಂಶ ಬಂದಿದೆ.

ವಾಣಿಜ್ಯ ವಿಭಾಗದಲ್ಲಿ 2,912 ವಿದ್ಯಾರ್ಥಿಗಳು ಪರೀಕ್ಷೆಬರೆದಿದ್ದು, 2,186 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಶೇ.75.07ರಷ್ಟು ಫಲಿತಾಂಶ ಬಂದಿದೆ. ವಿಜ್ಞಾನ ವಿಭಾಗದಲ್ಲಿ 1,264 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು, 1,083 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಶೇ.85.68 ರಷ್ಟು ಫಲಿತಾಂಶ ಬಂದಿದೆ. ಕಲಾ ವಿಭಾಗದಲ್ಲಿ ಮಡಿಕೇರಿ ತಾಲೂಕಿನ ಮದೆ ಗ್ರಾಮದ ಪದವಿ ಪೂರ್ವ ಕಾಲೇಜಿನ ಕುಷನ್ ಕೆ.(569) ಜಿಲ್ಲೆಗೆ ಪ್ರಥಮ ಸ್ಥಾನ, ನೆಲ್ಲಿಹುದಿಕೇರಿ ಸರ್ಕಾರಿ ಪದವಿ ಪೂರ್ವ ಕಾಲೇಜಿನ ತೇಜ ಎಂ.ಎಸ್.(565) ದ್ವಿತೀಯ, ಕೂಡಿಗೆ ಸರ್ಕಾರಿ ಪದವಿ ಪೂರ್ವ ಕಾಲೇಜಿನ ರಕ್ಷಿತ ಕೆ.ಎಸ್.(555) ತೃತೀಯ ಸ್ಥಾನ ಪಡೆದುಕೊಂಡಿದ್ದಾರೆ.

ವಾಣಿಜ್ಯ ವಿಭಾಗದಲ್ಲಿ ಸುಂಟಿಕೊಪ್ಪದ ಸಂತ ಮೇರಿ ಸಂಯುಕ್ತ ಪದವಿ ಪೂರ್ವ ಕಾಲೇಜಿನ ಆಯಿಷ ಸುನೇಹ(591) ಪ್ರಥಮ, ಮೂರ್ನಾಡು ಪದವಿ ಪೂರ್ವ ಕಾಲೇಜಿನ ಹರ್ಷಿತ್ ಎಂ.ಸಿ.(589) ದ್ವಿತೀಯ, ಕೊಡ್ಲಿಪೇಟೆಯ ಎಸ್.ಸದಾಶಿವ ಸ್ವಾಮೀಜಿ ಪದವಿ ಪೂರ್ವ ಕಾಲೇಜಿನ ಸುಕನ್ಯ ವಿ.ಆರ್.(589) ದ್ವಿತೀಯ, ಗೋಣಿಕೊಪ್ಪ ಕೂರ್ಗ್ ಪಿಯು ಕಾಲೇಜಿನ ನಿಖಿತ ಪಿ.ಮೇದಪ್ಪ(589) ದ್ವಿತೀಯ, ಕುಶಾಲನಗರ ಐಶ್ವರ್ಯ ಪಿಯು ಕಾಲೇಜಿನ ತೇಜಸ್ವಿನಿ ಪ್ರಭು ಬಿ.(588) ತೃತೀಯ ಸ್ಥಾನ ಪಡೆದಿದ್ದಾರೆ.

ವಿಜ್ಞಾನ ವಿಭಾಗದಲ್ಲಿ ಗೋಣಿಕೊಪ್ಪ ವಿದ್ಯಾನಿಕೇತನ ಪಿಯು ಕಾಲೇಜಿನ ಕವಿನ ಎ.ಸಿ(592) ಪ್ರಥಮ, ಪೊನ್ನಂಪೇಟೆ ಹಳ್ಳಿಗಟ್ಟು ಕೂರ್ಗ್ ಇನ್ಸ್‌ಟ್ಯೂಟ್ ಆಫ್ ಪಿಯು ಕಾಲೇಜಿನ ತೀರ್ಥ ಕಾವೇರಪ್ಪ ಎಂ.ಜಿ. (586) ದ್ವಿತೀಯ, ಕೂಡಿಗೆ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಆಸ್ಟನ್ ಗೊನ್ಸಾಲ್ವಸ್ (586) ದ್ವಿತೀಯ, ಪೊನ್ನಂಪೇಟೆ ಹಳ್ಳಿಗಟ್ಟು ಕೂರ್ಗ್ ಇನ್ಸ್‌ಟ್ಯೂಟ್ ಆಫ್ ಪಿಯು ಕಾಲೇಜಿನ ಭುವನ್ ಎಂ.ಎಂ. (585) ತೃತೀಯ, ಕುಶಾಲನಗರದ ವಿವೇಕಾನಂದ ಪಿಯು ಕಾಲೇಜಿನ ಹಿತೇಶ್ ಎಸ್.ಟಿ.(585) ತೃತೀಯ ಸ್ಥಾನ ಪಡೆದಿದ್ದಾರೆ ಎಂದು ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರಾದ ಸಿ.ಪುಟ್ಟರಾಜು ಅವರು ತಿಳಿಸಿದ್ದಾರೆ.

ಬೈಕ್‌ಗಳ ನಡುವೆ ಡಿಕ್ಕಿ:

ಓರ್ವ ಸಾವು, ಇಬ್ಬರಿಗೆ ಗಾಯ

ಮಡಿಕೇರಿ,ಜೂ.18–ಎರಡು ಬೈಕ್‌ಗಳ ನಡುವೆ ಡಿಕ್ಕಿ ಸಂಭವಿಸಿ ಓರ್ವ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಸುಂಟಿಕೊಪ್ಪ ಸಮೀಪದ ಬಾಳೆಕಾಡು ಎಂಬಲ್ಲಿ ನಡೆದಿದೆ. ಚೆಟ್ಟಳ್ಳಿ ಸಮೀಪದ ಪೊನ್ನತ್‌ಮೊಟ್ಟೆ ನಿವಾಸಿ ಅಶ್ರಫ್(40) ಮೃತ ದುರ್ದೈವಿಯಾಗಿದ್ದಾರೆ. ಮತ್ತಿಬ್ಬರ ಸ್ಥಿತಿ ಗಂಭೀರವಾಗಿದ್ದು, ಹೆಚ್ಚಿನ ಚಿಕಿತ್ಸೆಗಾಗಿ ಮಂಗಳೂರು ಆಸ್ಪತ್ರೆಗೆ ದಾಖಲಿಸಲಾಗಿದೆ. ಸುಂಟಿಕೊಪ್ಪ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಜನ ಸಂಪರ್ಕ ಸಭೆ

ಮಡಿಕೇರಿ, ಜೂ.18– ಮಡಿಕೇರಿ ಉಪ ವಿಭಾಗ ವ್ಯಾಪ್ತಿಯ ವಿದ್ಯುತ್ ಗ್ರಾಹಕರ ಕುಂದು ಕೊರತೆಗಳನ್ನುನಿವಾರಿಸುವ ಸಭೆಯು ಜೂ.21 ರಂದು ಬೆಳಗ್ಗೆ 11 ಗಂಟೆಯಿಂದ ಮಧ್ಯಾಹ್ನ 12 ಗಂಟೆವರೆಗೆ ಮಡಿಕೇರಿ ಉಪವಿಭಾಗ ಕಚೇರಿ ಆವರಣದಲ್ಲಿ ನಡೆಯಲಿದೆ.

ಸ್ಕೂಟಿಗೆ ಬೊಲೆರೋ ಡಿಕ್ಕಿ: ಶಿಕ್ಷಕಿ ಸಾವು

ಹೆಬ್ಬಾಲೆ ಬಳಿ ದುರಂತ, ಚಾಲಕನ ಬಂಧನ

ಕುಶಾಲನಗರ, ಜೂ.18– ಸಮೀಪದ ಹೆಬ್ಬಾಲೆ– ಹುಲುಸೆ ತಿರುವಿನಲ್ಲಿ ಶನಿವಾರ ಮಧ್ಯಾಹ್ನ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಸರ್ಕಾರಿ ಶಾಲಾ ಶಿಕ್ಷಕಿಯೊಬ್ಬರು ಸ್ಥಳದಲ್ಲಿಯೇ ಮೃತಪಟ್ಟಿರುವ ಘಟನೆ ಸಂಭವಿಸಿದೆ. ಸೋಮವಾರಪೇಟೆ ತಾಲೂಕಿನ ನೇರುಗಳಲೆ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕಿ ಮರೂರು ಗ್ರಾಮದ ನಿವಾಸಿ ಅಶ್ವಿನಿ ಚೇತನ್ (45) ಮೃತಪಟ್ಟ ಶಿಕ್ಷಕಿ.

ನೇರುಗಳಲೆ ಶಾಲೆಯಲ್ಲಿ ಕರ್ತವ್ಯ ಮುಗಿಸಿ ಹೊರಟ ಅವರು ಕೂಡಿಗೆ ಕಾನ್ವೆಂಟ್‌ನಲ್ಲಿ ಓದುತ್ತಿರುವ ತಮ್ಮ ಮಕ್ಕಳನ್ನು ಬಸ್ಸಿಗೆ ಹತ್ತಿಸಿದರು. ನಂತರ ಇವರು ತಮ್ಮ ಸ್ಕೂಟಿಯಲ್ಲಿ ಮರೂರಿನತ್ತ ತೆರಳುತ್ತಿದ್ದ ಸಂದರ್ಭ ಹುಲುಸೆ ತಿರುವಿನಲ್ಲಿ ಎದುರಿನಿಂದ ಬಂದ ಬೊಲೆರೊ ಪಿಕ್ ಅಪ್ ವಾಹನ ಡಿಕ್ಕಿ ಹೊಡೆದಿದೆ. ಇದರಿಂದ ಗಂಭೀರವಾಗಿ ಗಾಯಗೊಂಡ ಅಶ್ವಿನಿ ಸ್ಥಳದಲ್ಲಿಯೇ ಮೃತಪಟ್ಟರು.



ಬೊಲೆರೊ ವಾಹನ ಚಾಲಕ ಅರಸೀಕೆರೆ ವೆಂಕಟಸ್ವಾಮಿ ಕೆಲಸಕ್ಕೆ ಜನರನ್ನು ಕರೆದು ತಂದು ಬಂದು ಬಿಟ್ಟು, ಹೆಬ್ಬಾಲೆಗೆ ಹೋಗಿ ಊಟ ಮುಗಿಸಿ ವೇಗವಾಗಿ ಹೋಗುತ್ತಿದ್ದ ಸಂದರ್ಭ ಈ ದುರ್ಘಟನೆ ಸಂಭವಿಸಿದೆ ಎಂದು ಪೊಲೀಸ್ ಮೂಲಗಳಿಂದ ತಿಳಿದು ಬಂದಿದೆ. ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ರಾಜ್ಯ ಸಹ ಕಾರ್ಯದರ್ಶಿ ಎಚ್.ಎಸ್. ಚೇತನ್ ಅವರ ಪತ್ನಿಯಾದ ಅಶ್ವಿನಿ ಇಬ್ಬರು ಮಕ್ಕಳನ್ನು ಅಗಲಿದ್ದಾರೆ.

ಬೊಲೆರೊ ವಾಹನ ಹಾಗೂ ಚಾಲಕ ವೆಂಕಟಸ್ವಾಮಿ ಎಂಬಾತನನ್ನು ವಶಕ್ಕೆ ಪಡೆದಿರುವ ಸಂಚಾರಿ ಠಾಣಾ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ. ಕುಶಾಲನಗರ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಶವ ಪರೀಕ್ಷೆ ನಡೆಸಿ ವರಸುದಾರರಿಗೆ ಹಸ್ತಾಂತರಿಸಲಾಯಿತು.

ಜನಸ್ತೋಮ: ರಸ್ತೆ ಅಪಘಾತದಲ್ಲಿ ಚೇತನ್ ಮಾಸ್ಟರ್ ಅವರ ಪತ್ನಿ ಅಶ್ವಿನಿ ಮೃತ ಪಟ್ಟಿದ್ದಾರೆ ಎಂದು ಸುದ್ದಿ ತಿಳಿಯುತ್ತಿದ್ದಂತೆ ಅಕ್ಕಪಕ್ಕದ ಗ್ರಾಮಗಳ ಜನರು ಅಪಘಾತ ಸ್ಥಳದಲ್ಲಿ ಜಮಾಯಿಸಿದರು. ಇದರಿಂದ ಜನಜಂಗುಳಿ ಉಂಟಾಗಿ ವಾಹನ ಸಂಚಾರ ಕೆಲಕಾಲ ಸ್ಥಗಿತಗೊಂಡಿತು.

ಸ್ಥಳಕ್ಕೆ ಪೊಲೀಸರು ಆಗಮಿಸಿ ಆಂಬುಲೆನ್ಸ್ ಮೂಲಕ ಮೃತದೇಹವನ್ನು ಕುಶಾಲನಗರ ಶವಾಗಾರಕ್ಕೆ ಸಾಗಿಸಿ ಹೆದ್ದಾರಿಯನ್ನು ತೆರವು ಗೊಳಿಸಿದರು.

ಕಂಬನಿ ಮಿಡಿದ ಶಿಕ್ಷಕ ವರ್ಗ: ಮೃತ ಶಿಕ್ಷಕಿಯ ಅಂತಿಮ ದರ್ಶನಕ್ಕೆ ಆಗಮಿಸಿದ ಕ್ಷೇತ್ರ ಶಿಕ್ಷಣಾಧಿಕಾರಿ ಕೆ.ಜಿ.ಸುರೇಶ್,ದೈಹಿಕ ಶಿಕ್ಷಣ ಅಧೀಕ್ಷ ಸದಾಶಿವ ಎಸ್.ಪಲ್ಲೇದ್ ಸೇರಿದಂತೆ ಅಪಾರ ಶಿಕ್ಷ ಮಿತ್ರರು, ಶಿಕ್ಷಣ ಇಲಾಖೆ ಸಿಬ್ಬಂದಿ ಶಿಕ್ಷಕಿ ಅಶ್ವಿನಿ ಸಾವಿಗೆ ಕಂಬನಿ ಮಿಡಿದರು. ದುಃಖದ ಮಡುವಿನಲ್ಲಿದ್ದ ಪತಿ ಶಿಕ್ಷಕ ಎಚ್.ಎಸ್.ಚೇತನ್ ಅವರನ್ನು ಶಿಕ್ಷ ಮಿತ್ರರು ಸಮಾಧಾನಪಡಿಸಲು ಯತ್ನಿಸಿದ ದೃಶ್ಯ ಎಲ್ಲರ ಹೃದಯ ಕಲಕುವಂತಿತ್ತು.

ನೃತ್ಯ ಕಲಾವಿದನಿಗೆ ಶ್ರೀ ಗಂಧ ಸಾಂಸ್ಕೃತಿಕ ತಿಲಕ ಪ್ರಶಸ್ತಿ

ವಿರಾಜಪೇಟೆ, ಜೂ.18– ಬೆಂಗಳೂರು ಶ್ರೀಗಂಧ ಸೌರಭ ಪ್ರತಿಭಾನ್ವೇಷಣಾ ಕೇಂದ್ರದ ವತಿಯಿಂದ ಬೆಂಗಳೂರಿನ ಟೌನ್ ಹಾಲ್ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಸಾರ್ವಜನಿಕ ನೃತ್ಯ ವಿಭಾಗ'ದ'ಲ್ಲಿ ವಿರಾಜಪೇಟೆ ಸಮೀಪದ ಅರಮೇರಿ ಗ್ರಾಮದ ನೃತ್ಯ ಕಲಾವಿದ ಮಳುವಂಡ ರಜನಿ ಬಿಂದು ಅವರಿಗೆ 2022 ರ ಸಾಲಿನ ಶ್ರೀ ಗಂಧ ಸಾಂಸ್ಕೃತಿಕ ತಿಲಕ ರಾಜ್ಯ ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ವಿರಾಜಪೇಟೆ ತಾಲೂಕಿನ ಅರಮೇರಿ ಗ್ರಾಮದ ನಿವಾಸಿ ಮಳವಂಡ ರಜನಿ ಬಿಂದು[59] ಅವರು ರಾಜ್ಯದ 264 ಕಡೆಗಳಲ್ಲಿ ನೃತ್ಯ ಪ್ರದರ್ಶನ ನೀಡಿದ್ದು ಕೊಡಗಿನ ಓರ್ವ ನೃತ್ಯ ಕಲಾವಿದರಾಗಿ ಗುರುತಿಸಿಕೊಂಡಿದ್ದಾರೆ. ಇವರಿಗೆ ಬೆಂಗಳೂರಿನ ಶ್ರೀ ಗಂಧ ಸೌರಭ ಸಂಸ್ಥೆಯ ಅಧ್ಯಕ್ಷ ನೀಲಕಂಠ ಅಡಿಗ, ಮತ್ತು ಜಂಟಿ ಕಾರ್ಯದರ್ಶಿ ಮೋಹನ್ ಅವರು "ಶ್ರೀಗಂಧ ಸಾಂಸ್ಕೃತಿಕ ತಿಲಕ 2022ರ ಪ್ರಶಸ್ತಿ" ನೀಡಿ ಗೌರವಿಸಿದ್ದಾರೆ.



ನೆಲ್ಯಹುದಿಕೇರಿಯಲ್ಲಿ ಕಾಂಗ್ರೆಸ್ ಪ್ರತಿಭಟನೆ

ಸಿದ್ದಾಪುರ, ಜೂ.18–ಬಿಜೆಪಿಯ ದುರಾಡಳಿತ ಖಂಡಿಸಿ ನೆಲ್ಯಹುದಿಕೇರಿಯಲ್ಲಿ ವಲಯ ಕಾಂಗ್ರೆಸ್ ಸಮಿತಿ ವತಿಯಿಂದ ಪ್ರತಿಭಟನೆ ನಡೆಸಿ ಕೇಂದ್ರ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಮುಖ್ಯ ಬೀದಿಯಲ್ಲಿ ಮೆರವಣಿಗೆ ಸಾಗಿದ ಪ್ರತಿಭಟನಾಕಾರರು ಬಿಜೆಪಿಯ ದುರಾಡಳಿತವನ್ನು ಖಂಡಿಸಿದರು .

ವಲಯ ಕಾಂಗ್ರೆಸ್ ಅಧ್ಯಕ್ಷ ಸಾಬು ವರ್ಗಿಸ್ ಮಾತನಾಡಿ, ಅಭಿವೃದ್ಧಿ ಬಗ್ಗೆ ಚಿಂತನೆ ನಡೆಸದ ಬಿಜೆಪಿ ಸರ್ಕಾರ ಕಾಂಗ್ರೆಸ್ ನಾಯಕರುಗಳ ಮೇಲೆ ಇಡಿ ಯನ್ನು ಬಿಟ್ಟು ಕುಗ್ಗಿಸುವ ಪ್ರಯತ್ನಕ್ಕೆ ಮುಂದಾಗಿರುವುದು ಖಂಡನೀಯ. 8 ವರ್ಷಗಳ ಹಿಂದೆ ಅಧಿಕಾರಕ್ಕೆ ಬಂದ ಬಿಜೆಪಿ ತನ್ನ ಅವಧಿಯಲ್ಲಿ ಜನಸಾಮಾನ್ಯರಿಗೆ ಬೇಕಾದ ಯಾವುದೇ ಕೆಲಸವೂ ಮಾಡದೆ ಅಸಹಾಯಕತೆ ತೋರುವ ಮೂಲಕರಾಜಕೀಯ ಕಾಲಹರಣ ಮಾಡುವುದರಲ್ಲೇ ಕಾಲ ಕಳೆದಿದೆ. ನಿರಂತರ ಅಗತ್ಯ ವಸ್ತುಗಳ ಬೆಲೆ ಏರಿಕೆ.ನಿರುದ್ಯೋಗ ಸೇರಿದಂತೆ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿರುವ ಜನರು ಇಂದಿಗೂ ಸಂಕಷ್ಟದಲ್ಲಿ ಜೀವನ ನಡೆಸುತ್ತಿದ್ದಾರೆ.

ಕಾಂಗ್ರೆಸ್ ಮುಖಂಡ ಎ. ಕೆ ಹಕೀಂ ಮಾತನಾಡಿ, ಅರವತ್ತುಕ್ಕೂ ಹೆಚ್ಚು ವರ್ಷಗಳ ಇತಿಹಾಸವಿರುವ ಕಾಂಗ್ರೆಸ್ ಪಕ್ಷ ಇಂದಿಗೂ ಸ್ವಚ್ಛವಾಗಿ ಮುನ್ನಡೆಯುತ್ತಿದೆ. ಇತ್ತೀಚೆಗೆ ಬಂದ ಬಿಜೆಪಿ ಸರ್ಕಾರ ಹಲವಾರು ಭ್ರಷ್ಟ ಹಗರಣಗಳಲ್ಲಿ ಸಿಲುಕಿಕೊಂಡು ಮುನ್ನಡೆಯುತ್ತಿದೆ. ಜನರನ್ನ ದಾರಿತಪ್ಪಿಸಲು ಕೋಮುವಾದದೊಂದಿಗೆ ರಾಜಕೀಯ ಲಾಭಕ್ಕಾಗಿ ಸಂಘರ್ಷಕ್ಕೆ ಮುಂದಾಗಿರುವುದು ನಾಚಿಕೆಗೇಡಿನ ವಿಷಯ ಅಭಿವೃದ್ಧಿ ಬಗ್ಗೆ ಮಾತನಾಡದ ಬಿಜೆಪಿ ದುರಾಡಳಿತದ ಕಾಲಹರಣ ಮಾಡುತ್ತಿದೆ ಎಂದು ಆರೋಪಿಸಿದರು.



ಈ ಸಂದರ್ಭ ಕಾಂಗ್ರೆಸ್ ಮುಖಂಡ ಜೋಸೆಫ್ ಶ್ಯಾಮ್, ಯುವ ಕಾಂಗ್ರೆಸ್ ಅಧ್ಯಕ್ಷ ಶಿಹಾಬ್,ಪಕ್ಷದ ಪ್ರಮುಖರಾದ ಸಫಿಯಾ ಮೊಹಮ್ಮದ್, ಸುಹಾದ ಅಶ್ರಫ್, ಹನೀಫ್, ಅಫ್ಸಲ್, ಮುಸ್ತಫಾ, ಸಿಂಧು, ಪ್ರಮೀಳಾ ಸೇರಿದಂತೆ ಮತ್ತಿತರರು ಹಾಜರಿದ್ದರು.

ಮೂರನೇ ಪುಟದಿಂದ

ಗ್ರಾಮೀಣರೇ ಮೇಲು

ಕೋವಿಡ್ ಭೀತಿಯ ನಡುವೆಯು ಅಗತ್ಯ ಸುರಕ್ಷತಾ ಕ್ರಮಗಳನ್ನು ಕೈಗೊಂಡು ಪರೀಕ್ಷೆ ನಡೆಸಲಾಯಿತು. ಹೊಸ ವಿದ್ಯಾರ್ಥಿಗಳು, ಪುನರಾವರ್ತಿತ ಹಾಗೂ ಖಾಸಗಿ ವಿದ್ಯಾರ್ಥಿಗಳು ಸೇರಿದಂತೆ ಪರೀಕ್ಷೆಗೆ ಹಾಜರಾಗಿದ್ದ ಒಟ್ಟು 6,83,563 ವಿದ್ಯಾರ್ಥಿಗಳ ಪೈಕಿ 4,22,966 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಕಲಾ ವಿಭಾಗದಲ್ಲಿ ಶೇ. 48.71ರಷ್ಟು, ವಾಣಿಜ್ಯ ಶೇ.64.97ರಷ್ಟು ಹಾಗೂ ವಿಜ್ಞಾನ ವಿಭಾಗದಲ್ಲಿ ಶೇ.72.53ರಷ್ಟು ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ ಎಂದರು. 91,106 ವಿದ್ಯಾರ್ಥಿಗಳು ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ಪ್ರಥಮ ದರ್ಜೆಯಲ್ಲಿ 2,14,115, ದ್ವಿತೀಯ ದರ್ಜೆ 68,444 ಹಾಗೂ 49,301 ವಿದ್ಯಾರ್ಥಿಗಳು ತೃತೀಯ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ ಎಂದರು.

ಶೇ.85ಕ್ಕಿಂತ ಹೆಚ್ಚಿನ ಅಂಕಗಳನ್ನು 91,106 ವಿದ್ಯಾರ್ಥಿಗಳು, ಶೇ.85ಕ್ಕಿಂತ ಕಡಿಮೆ, ಶೇ.60ಕ್ಕಿಂತ ಹೆಚ್ಚು ಅಂಕವನ್ನು 2,14,115 ವಿದ್ಯಾರ್ಥಿಗಳು, ಶೇ.60ಕ್ಕಿಂತ ಕಡಿಮೆ ಹಾಗೂ ಶೇ.50ಕ್ಕಿಂತ ಹೆಚ್ಚು 68,444 ವಿದ್ಯಾರ್ಥಿಗಳು ಹಾಗೂ ಶೇ.50ಕ್ಕಿಂತ ಕಡಿಮೆ ಅಂಕವನ್ನು 49,301 ವಿದ್ಯಾರ್ಥಿಗಳು ಪಡೆದಿದ್ದಾರೆ. 5,99,794 ಹೊಸ ವಿದ್ಯಾರ್ಥಿಗಳ ಪೈಕಿ 4,02,697 (ಶೇ.67.14ರಷ್ಟು) ಮಂದಿ ತೇರ್ಗಡೆಯಾಗಿದ್ದಾರೆ. ಪುನರಾವರ್ತಿತ 61,838 ವಿದ್ಯಾರ್ಥಿಗಳ ಪೈಕಿ 14,403 ವಿದ್ಯಾರ್ಥಿಗಳು (ಶೇ.23.29) ಹಾಗೂ 21,931 ಖಾಸಗಿ ಅಭ್ಯರ್ಥಿಗಳ ಪೈಕಿ 5,866 ಮಂದಿ(ಶೇ.26.75) ಉತ್ತೀರ್ಣರಾಗಿದ್ದಾರೆ.

ವಿದ್ಯಾರ್ಥಿನಿಯರ ಸಾಧನೆ: ಪರೀಕ್ಷೆಗೆ ಒಟ್ಟು 6,83,563 ವಿದ್ಯಾರ್ಥಿಗಳು ಹಾಜರಾಗಿದ್ದು, 4,22,966 ಮಂದಿ ಉತ್ತೀರ್ಣರಾಗಿದ್ದಾರೆ. 3,46,577 ಬಾಲಕರಲ್ಲಿ 1,91,380(ಶೇ.55.22) ಮಂದಿ ತೇರ್ಗಡೆಯಾಗಿದ್ದಾರೆ ಹಾಗೂ 3,37, 006 ಬಾಲಕಿಯರಲ್ಲಿ 2,31,586(ಶೇ.68.72) ಮಂದಿ ಉತ್ತೀರ್ಣರಾಗಿದ್ದಾರೆ.

ಗ್ರಾಮೀಣರೇ ಮೇಲುಗೈ: ನಗರ ಪ್ರದೇಶಗಳಿಗೆ ಹೋಲಿಸಿದರೆ ಎಂದಿನಂತೆ ಈ ಬಾರಿಯು ಗ್ರಾಮೀಣ ಭಾಗದ ವಿದ್ಯಾರ್ಥಿಗಳೇ ಮೇಲುಗೈ ಸಾಧಿಸಿದ್ದಾರೆ. ನಗರ ಪ್ರದೇಶದಿಂದ 5,20,520 ವಿದ್ಯಾರ್ಥಿಗಳ ಪೈಕಿ 3,21,590(ಶೇ.61.78) ಮಂದಿ, ಗ್ರಾಮಾಂತರ ಪ್ರದೇಶದಿಂದ 1,63,043 ವಿದ್ಯಾರ್ಥಿಗಳ ಪೈಕಿ 1,01,376(ಶೇ.62.18) ಮಂದಿ ಪಾಸಾಗಿದ್ದಾರೆ. ಹಿಂದಿನ ವರ್ಷಗಳಂತೆ ಕರಾವಳಿ ಜಿಲ್ಲೆಗಳಲ್ಲಿ ಈ ಬಾರಿಯು ಉತ್ತೀರ್ಣ ಪ್ರಮಾಣ ಉತ್ತಮವಾಗಿದೆ. ಫಲಿತಾಂಶದಲ್ಲಿ ದಕ್ಷಿಣ ಕನ್ನಡ ಜಿಲ್ಲೆ ಮೊದಲ ಸ್ಥಾನದಲ್ಲಿದ್ದರೆ, ಉಡುಪಿ ದ್ವಿತೀಯ ಸ್ಥಾನ ಹಾಗೂ ವಿಜಯಪುರ ಜಿಲ್ಲೆ 3ನೇ ಸ್ಥಾನದಲ್ಲಿದೆ. ರಾಯಚೂರು, ಬಳ್ಳಾರಿ ಮತ್ತು ಚಿತ್ರದುರ್ಗ ಜಿಲ್ಲೆಗಳು ಕ್ರಮವಾಗಿ ಕೊನೆಯ 3 ಸ್ಥಾನದಲ್ಲಿವೆ. ಉತ್ತೀರ್ಣ ಪ್ರಮಾಣ ಕಡಿಮೆ ಇರುವ ಜಿಲ್ಲೆಗಳ ಫಲಿತಾಂಶ ಸುಧಾರಣೆ ಕುರಿತು ಶಿಕ್ಷಣ ಇಲಾಖೆ ಅಧಿಕಾರಿಗಳ ಜೊತೆ ಚರ್ಚಿಸಿ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ಸಚಿವರು ಹೇಳಿದರು.

ಸ್ಕ್ಯಾನಿಂಗ್ ಪ್ರತಿಗೆ ಅವಕಾಶ: ಉತ್ತರ ಪತ್ರಿಕೆ ಸ್ಕ್ಯಾನಿಂಗ್ ಪ್ರತಿಯನ್ನು ಪಡೆಯಲು ಇಂದಿನಿಂದಲೇ ಅವಕಾಶ ಕಲ್ಪಿಸಲಾಗಿದೆ. ಅನುತ್ತೀರ್ಣ ವಿದ್ಯಾರ್ಥಿಗಳು ಮರುಮೌಲ್ಯ ಮಾಪನ ಫಲಿತಾಂಶಕ್ಕೆ ಕಾಯದೇ, ಪೂರಕ ಪರೀಕ್ಷೆ ಬರೆಯಲು ಅರ್ಜಿ ಸಲ್ಲಿಸುವುದು ಉತ್ತಮ ಎಂದು ಸಲಹೆ ನೀಡಿದರು. ಜೂನ್ ತಿಂಗಳಾಂತ್ಯಕ್ಕೆ ಪೂರಕ ಪರೀಕ್ಷೆ ದಿನಾಂಕ ಪ್ರಕಟಿಸಲಾಗುತ್ತದೆ. ಆಗಸ್ಟ್ ತಿಂಗಳಲ್ಲಿ ಪರೀಕ್ಷೆ ನಡೆಯಲಿವೆ. ಫಲಿತಾಂಶದಲ್ಲಿ ಹಿನ್ನಡೆಯಾದವರು ನಿರಾಶರಾಗಬಾರದು. ಈ ಪರೀಕ್ಷೆಯೇ ಅಂತಿಮವಲ್ಲ. ಎಲ್ಲವನ್ನು ಧೈರ್ಯವಾಗಿ ಎದುರಿಸುವ ಮಾನಸಿಕತೆಯನ್ನು ಹೊಂದಬೇಕು. ಪರೀಕ್ಷೆ ಹಾಗೂ ಫಲಿತಾಂಶ ನಮ್ಮ ಶೈಕ್ಷಣಿಕ ಜೀವನದ ಒಂದು ಭಾಗವಷ್ಟೇ. ಪೂರಕ ಪರೀಕ್ಷೆ ಬರೆಯುವ ಮೂಲಕ ಯಶಸ್ಸು ಸಾಧಿಸಿ ಶೈಕ್ಷಣಿಕ ಜೀವನ ಮುಂದುವರೆಸಬೇಕು ಎಂದು ಸಚಿವರು ಕಿವಿಮಾತು ಹೇಳಿದರು.

ಮೈಸೂರು ಜಿಲ್ಲೆಗೆ 17ನೇ ಸ್ಥಾನ

17ನೇ ಸ್ಥಾನಕ್ಕೆ ಕುಸಿದಿದೆ. ಕಳೆದ ವರ್ಷ ಶೇ.67.98ರಷ್ಟು ಫಲಿತಾಂಶ ಪಡೆದು ರಾಜ್ಯದಲ್ಲಿ 14 ಸ್ಥಾನ ಪಡೆದಿದ್ದನ್ನು ಸ್ಮರಿಸಬಹುದಾಗಿದೆ.

ಬಾಲಕಿಯರೇ ಮೇಲುಗೈ: ಪಿಯುಸಿ ಪರೀಕ್ಷೆಯಲ್ಲಿ ಈ ಬಾರಿಯೂ ಬಾಲಕಿಯರೇ ಮೇಲುಗೈ ಸಾಧಿಸಿದ್ದಾರೆ. ಪರೀಕ್ಷೆ ಬರೆದಿದ್ದ 17,448 ವಿದ್ಯಾರ್ಥಿನಿಯರಲ್ಲಿ 12,130 ಮಂದಿ ಉತ್ತೀರ್ಣರಾಗಿದ್ದಾರೆ. ಇವರ ಫಲಿತಾಂಶ ಶೇ.69.52ರಷ್ಟು ದಾಖಲಾಗಿದೆ. ಪರೀಕ್ಷೆಗೆ ಹಾಜರಾಗಿದ್ದ 17739 ಬಾಲಕರಲ್ಲಿ 8933 ಬಾಲಕರು ತೇರ್ಗಡೆಯಾಗಿದ್ದಾರೆ. ಬಾಲಕರ ಫಲಿತಾಂಶ ಶೇ.50.36ರಷ್ಟಾಗಿದೆ.

ಹಿಂದುಳಿದ ಕಲಾ ವಿಭಾಗ: ಈ ಬಾರಿ ಕಲಾ ವಿಭಾಗದ ಫಲಿತಾಂಶ ಕ್ಷೀಣಿಸಿದೆ. ಈ ವಿಭಾಗದಲ್ಲಿ ಶೇ.45.76ರಷ್ಟು ವಿದ್ಯಾರ್ಥಿಗಳು ಪಾಸಾಗಿದ್ದಾರೆ. ಅಧಿಕ ಅಂದರೆ ವಿಜ್ಞಾನ ವಿಭಾಗದ ಫಲಿತಾಂಶ ಶೇ.74.75ರಷ್ಟು ಬಂದಿದೆ. ವಾಣಿಜ್ಯ ವಿಭಾಗದ ಫಲಿತಾಂಶವು ಶೇ.69.61ರಷ್ಟಾಗಿದೆ. ಕಲಾ ವಿಭಾಗದ ಫಲಿತಾಂಶ ಇಳಿಕೆಯೂ ಜಿಲ್ಲೆಯ ಸಮಗ್ರ ಫಲಿತಾಂಶ ಕುಸಿಯಲು ಮತ್ತೊಂದು ಕಾರಣವಾಗಿದೆ. **ಗ್ರಾಮೀಣ ವಿದ್ಯಾರ್ಥಿಗಳ ಹಿನ್ನಡೆ:** ಗ್ರಾಮಾಂತರ ಪ್ರದೇಶದ ವಿದ್ಯಾರ್ಥಿಗಳ ಫಲಿ ತಾಂಶವೂ ಕುಗ್ಗಿದೆ. ಶೇ.55.64ರಷ್ಟು ಹಳ್ಳಿ ಮಕ್ಕಳು ಪಾಸಾಗಿದ್ದಾರೆ. ಆದರೆ, ಶೇ.66.16ರಷ್ಟು ನಗರ ಪ್ರದೇಶದ ವಿದ್ಯಾರ್ಥಿಗಳ ಪಾಸಾಗಿ ಗಮನ ಸೆಳೆದಿದ್ದಾರೆ. ಇಂಗ್ಲಿಷ್ ಮಾಧ್ಯಮ ವಿದ್ಯಾರ್ಥಿಗಳು ಮುಂದಿದ್ದು, ಇವರ ಫಲಿತಾಂಶ ಶೇ.69.94ರಷ್ಟಾಗಿದೆ. ಕನ್ನಡ ಮಾಧ್ಯಮದ ವಿದ್ಯಾರ್ಥಿಗಳ ಫಲಿತಾಂಶ ಶೇ.47.26 ರಷ್ಟಾಗಿದೆ. ಪರಿಶಿಷ್ಟ ಜಾತಿಗೆ ಸೇರಿದ ವಿದ್ಯಾರ್ಥಿಗಳ ಫಲಿತಾಂಶದ ಶೇ.48 ರಷ್ಟು, ಶೇ.54ರಷ್ಟು ಎಸ್‌ಟಿ, 58.13ರಷ್ಟು ಹಿಂದುಳಿದ ಪ್ರವರ್ಗ 1ಎ, ಶೇ.60.87ರಷ್ಟು 2ಎ, 59.94ರಷ್ಟು 2ಬಿ, ಶೇ.66.75ರಷ್ಟು 3ಎ, ಶೇ.67. 08ರಷ್ಟು 3ಬಿ, ಶೇ.68.01ರಷ್ಟು ಸಾಮಾನ್ಯ ವರ್ಗದ ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ ಎಂದು ಇಲಾಖೆ ಪ್ರಕಟಣೆಯಲ್ಲಿ ಸ್ಪಷ್ಟಪಡಿಸಿದೆ.

ಮೈಸೂರು ಜಿಲ್ಲೆಯ ಟಾಪರ್ಸ್

ಈತ ಎ.ಚಂದ್ರಶೇಖರ್ ಹಾಗೂ ಎಸ್.ಎ.ದಿವ್ಯಾಶ್ರೀ ದಂಪತಿ ಪುತ್ರ.

ವಾಣಿಜ್ಯ ವಿಭಾಗದ ಟಾಪರ್ಸ್: ಜಿಲ್ಲೆಯ ಟಾಪರ್‌ಗಳಲ್ಲಿ ಒಬ್ಬರಾದ ನವ್‌ಕಿಸ್ ಕಾಲೇಜಿನ ಎಸ್.ವರ್ಷಿಣಿ ವಾಣಿಜ್ಯ ವಿಭಾಗದಲ್ಲಿ ಉತ್ತಮ ಸಾಧನೆ ಮಾಡಿದ್ದಾಳೆ. ಈಕೆ ಎಸ್.ಕೆ.ಶ್ರೀನಿವಾಸ್ ಹಾಗೂ ಮಹಾದೇವಿ ದಂಪತಿ ಪುತ್ರಿ. ಜಯಲಕ್ಷ್ಮಿಪುರಂನ ಸೆಂಟ್ ಜೋಸೆಫ್ ಕಾಲೇಜಿನ ವಿದ್ಯಾರ್ಥಿನಿ ಎಸ್.ಪಿ.ಇಂಚರ 593 ಅಂಕದೊಂದಿಗೆ ವಾಣಿಜ್ಯ ವಿಭಾಗದಲ್ಲಿ 2ನೇ ಸ್ಥಾನ ಪಡೆದಿದ್ದು, ಈಕೆ ಪಿ.ಪರಮೇಶ್, ಹೆಚ್.ಶೀಲಾ ದಂಪತಿ ಪುತ್ರಿ. ಎಂಎಂಕೆ ಹಾಗೂ ಎಸ್‌ಡಿಎಂ ಕಾಲೇಜಿನ ಕೆ.ಎನ್.ಭೂಮಿಕಾ 590 ಅಂಕ ಪಡೆದು 3ನೇ ಸ್ಥಾನದಲ್ಲಿದ್ದಾರೆ. ಈಕೆ ಕೆ.ಬಿ.ನಂಜಪ್ಪ ಹಾಗೂ ಕೆ.ಎನ್.ಮಾಯಮ್ಮ ದಂಪತಿ ಪುತ್ರಿ.

ಕಲಾ ವಿಭಾಗದ ಸಾಧಕರು: ಕಲಾ ವಿಭಾಗದಲ್ಲಿ ಲಷ್ಕರ್ ಮೊಹಲ್ಲಾ ಗುಡ್ ಶೆಫರ್ಡ್ ಪಿಯು ಕಾಲೇಜು ವಿದ್ಯಾರ್ಥಿನಿ ನಿದಾ ತರ್ನ್ನುಮ್ 581 ಅಂಕ ಪಡೆದು ಜಿಲ್ಲೆಗೆ ಪ್ರಥಮ ಸ್ಥಾನ ಪಡೆದಿದ್ದಾರೆ. ಈಕೆ ಮುಸ್ತಫಾ ಖಾನ್, ವಾಜಿಹಾ ಬಾನು ದಂಪತಿ ಪುತ್ರಿ. ಮರಿಮಲ್ಲಪ್ಪ ಕಾಲೇಜಿನ ಆರ್.ರೀಶಾ 579 ಅಂಕ ಪಡೆದು 2ನೇ ಸ್ಥಾನ ಪಡೆದಿದ್ದು, ಈಕೆ ಎಸ್.ಎನ್. ರವೀಂದ್ರ ರಾಜನ್, ಜಿ.ಡಿ.ಲತಾ ದಂಪತಿ ಪುತ್ರಿ. ಅದೇ ಕಾಲೇಜಿನ ಎಸ್.ಕೆ.ಕೀರ್ತನಾ 578 ಅಂಕಗಳೊಂದಿಗೆ 3ನೇ ಸ್ಥಾನ ಪಡೆದಿದ್ದು ಈಕೆ ಎಂ.ಕೃಷ್ಣಮೂರ್ತಿ ಹಾಗೂ ಆರ್.ಸಾವಿತ್ರಿ ದಂಪತಿಯ ಪುತ್ರಿ.

ಆರು ವಿದ್ಯಾರ್ಥಿಗಳ ಆತ್ಮಹತ್ಯೆ

ಜಗದೀಶ್ ಎಂಬವರ ಪುತ್ರಿ ಎಂ.ಜೆ.ಸ್ಪಂದನಾ (17) ಮೂರು ವಿಷಯಗಳಲ್ಲಿ ಅನುತ್ತೀರ್ಣಗೊಂಡಿದ್ದರಿಂದ ಮನೆಯಲ್ಲೇ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿದ್ದು, ಈ ಸಂಬಂಧ ಅರಕೆರೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಗದಗದ ಅತ್ರಿ ಗ್ರಾಮದ ಪವಿತ್ರ ಲಿಂಗದಾಳ (18) ದ್ವಿತೀಯ ಪಿಯುಸಿಯಲ್ಲಿ ಅನು ತ್ತೀರ್ಣಗೊಂಡಿದ್ದರಿಂದ ಮನ ನೊಂದು ನೇಣಿಗೆ ಶರಣಾಗಿದ್ದಾಳೆ. ಉತ್ತರ ಕನ್ನಡ ಜಿಲ್ಲೆ ಕುಮಟಾದ ಎ.ವಿ.ಬಾಳಿಗ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿ ಕಡ್ಲೆ ಗ್ರಾಮದ ನಿವಾಸಿ ಪ್ರಣಬ್ ಈಶ್ವರ ನಾಯ್ಕ್ (18) ದ್ವಿತೀಯ ಪಿಯುಸಿಯಲ್ಲಿ 4 ವಿಷಯಗಳಲ್ಲಿ ಅನುತ್ತೀರ್ಣಗೊಂಡಿದ್ದರಿಂದ ಮನ ನೊಂದು ನೇಣಿಗೆ ಶರಣಾಗಿ ದ್ದಾನೆ. ಬಾಗಲಕೋಟೆ ಜಿಲ್ಲೆ ಬೀಳಗಿ ತಾಲೂಕು ಯಡಹಳ್ಳಿ ಗ್ರಾಮದ ಪೂಜಾ ರಾಚಪ್ಪ ಚಳಗೇರಿ–ಬಳಿಗಾರ್(19) ಎಂಬ ವಿದ್ಯಾರ್ಥಿನಿ ದ್ವಿತೀಯ ಪಿಯುಸಿಯಲ್ಲಿ ಅನುತ್ತೀರ್ಣಗೊಂಡಿದ್ದರಿಂದ ಮನನೊಂದು ಬಾವಿಗೆ ಹಾರಿ ಆತ್ಮಹತ್ಯೆಗೆ ಶರಣಾಗಿದ್ದಾಳೆ. ಬೀದರ್ ಜಿಲ್ಲೆ ಹುಮನಾ ಬಾದ್ ತಾಲೂಕಿನ ಚಟಗುಪ್ಪ ಪಟ್ಟಣದ ಶಾಹೀನ್ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿನಿ, ಮದರಗಿ ಗ್ರಾಮದ ನಿವಾಸಿ ಸುಹಾಸಿನಿ ದಿಲೀಪ್ ಮಳಚಾಪುರ್(18) ದ್ವಿತೀಯ ಪಿಯುಸಿಯಲ್ಲಿ ಅನುತ್ತೀರ್ಣಗೊಂಡಿದ್ದರಿಂದ ಮನನೊಂದು ನೇಣಿಗೆ ಶರಣಾಗಿದ್ದಾಳೆ.

ಮರು ನಿರ್ಮಾಣ

ಸಂಚಾರಕ್ಕೆ ಅನುಕೂಲವಾಗುತ್ತದೆ ಎಂದು ಸಂಸದ ಪ್ರತಾಪ್ ಸಿಂಹ ಹೇಳಿದರು. ನಾಗನಹಳ್ಳಿ ಹೊಸ ಕೋಚಿಂಗ್ ಕಾಂಪ್ಲೆಕ್ಸ್ ನಿಂದಾಗಿ ಮೆಮು ಸೇರಿದಂತೆ ದೂರದ ಸ್ಥಳಗಳಿಗೆ ಸಂಚರಿಸುವ ಇತರ ರೈಲು ಪ್ರಯಾಣಿಕರಿಗೆ ಅನುಕೂಲವಾಗಲಿದ್ದು, ಅದರಿಂದ ಮೈಸೂರು ಪ್ರವಾಸೋದ್ಯಮ ಕೈಗಾರಿಕೋದ್ಯಮದ ಅಭಿವೃದ್ಧಿಗೆ ಸಹಾಯವಾಗಲಿದೆ ಎಂದರು.

ಅಶೋಕಪುರಂನಲ್ಲಿ 2 ಟ್ರ್ಯಾಕ್: ಮೈಸೂರಿನ ಅಶೋಕ ಪುರಂ ರೈಲು ನಿಲ್ದಾಣದಲ್ಲಿ ಎರಡು ಹೆಚ್ಚುವರಿ ರೈಲ್ವೆ ಟ್ರ್ಯಾಕ್ ನಿರ್ಮಿಸಿ ಪ್ರಯಾಣಿಕರು ಟ್ರ್ಯಾಕ್ ದಾಟಲು ಮೇಲು ಸೇತುವೆ ಸೌಲಭ್ಯ ಕಲ್ಪಿ ಸಲು ಯೋಜನೆ ಸಿದ್ಧಪಡಿಸಲಾಗಿದೆ. ರೈಲುಗಳ ಸಂಖ್ಯೆ ಹೆಚ್ಚುತ್ತಿರುವುದರಿಂದ ಅಲ್ಲಿ ಟ್ರ್ಯಾಕ್ ವಿಸ್ತರಣೆ ಅತ್ಯವಶ್ಯವಾಗಿದೆ ಎಂದರು. ವಿಭಾಗೀಯ ರೈಲ್ವೆ ವ್ಯವಸ್ಥಾಪಕ ರಾಹುಲ್ ಅಗರವಾಲ್, ಸೀನಿಯರ್ ಅಸಿಸ್ಟೆಂಟ್ ಇಂಜಿನಿಯರ್ (ಕೋ–ಆರ್ಡಿ ನೇಷನ್) ರವಿಚಂದ್ರನ್, ಸೀನಿಯರ್ ಡಿವಿಷನಲ್ ಕಮರ್ಷಿಯಲ್ ಮ್ಯಾನೇಜರ್ ಮಂಜುನಾಥ್ ರೈಲ್ವೆ ಅಧಿಕಾರಿಗಳೊಂದಿಗೆ ಸಂಸದ ಪ್ರತಾಪ್‌ಸಿಂಹ ರೈಲ್ವೆ ನಿಲ್ದಾಣಗಳ ಅಭಿವೃದ್ಧಿ ಕುರಿತಂತೆ ಚರ್ಚಿಸಿದರು.

ಹೀರಾಬೆನ್ ಅವರಿಗೆ ನೂರರ ಸಂಭ್ರಮ

ಅಮ್ಮನ ಪಾದ ತೊಳೆದು ಪೂಜಿಸಿ ಆಶೀರ್ವಾದ ಪಡೆದ ಪ್ರಧಾನಿ ಮೋದಿ



ಗುಜರಾತ್: ಪ್ರಧಾನಮಂತ್ರಿ ನರೇಂದ್ರ ಮೋದಿಯವರ ತಾಯಿ ಹೀರಾಬೆನ್ ಅವರು ಶನಿವಾರ 100ನೇ ವಸಂತಕ್ಕೆ ಕಾಲಿಟ್ಟಿದ್ದು, ಈ ಹಿನ್ನೆಲೆಯಲ್ಲಿ ಗುಜರಾತ್ ಪ್ರವಾಸದಲ್ಲಿರುವ ಮೋದಿಯವರು ತಮ್ಮ ನಿವಾಸಕ್ಕೆ ಭೇಟಿ ನೀಡಿ, ತಾಯಿಯ ಪಾದ ತೊಳೆದು, ಪೂಜಿಸಿ, ಆಶೀರ್ವಾದ ಪಡೆದುಕೊಂಡಿದ್ದಾರೆ.

ತಾಯಿಯ ಹುಟ್ಟುಹಬ್ಬದಂದು ಆಶೀರ್ವಾದ ಪಡೆಯುವ ಸಲುವಾಗಿ ಹಾಗೂ ಅನೇಕ ಕಾರ್ಯಕ್ರಮಗಳನ್ನು ಉದ್ಘಾಟಿಸುವ ಹಿನ್ನೆಲೆಯಲ್ಲಿ ಪ್ರಧಾನಿ ಮೋದಿಯವರು ಇಂದು ಗುಜರಾತ್ ರಾಜ್ಯಕ್ಕೆ ಭೇಟಿ ನೀಡಿದ್ದಾರೆ.

ಅಷ್ಟೇ ಅಲ್ಲದೆ, ಅಮ್ಮನ ಜನ್ಮದಿನಕ್ಕೆ ಮೋದಿ ಉಡುಗೊರೆ ಕೂಡ ನೀಡಿದ್ದಾರೆಂದು ತಿಳಿದು ಬಂದಿದೆ. ಜೊತೆಗೆ ವಡನಗರದಲ್ಲಿ ಧಾರ್ಮಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದಾರೆಂದು ವರದಿಗಳು ತಿಳಿಸಿವೆ.

ಲಂಚ ಪಡೆಯಬೇಡ ಎಂದು ಹೇಳಿದ್ದರು ನನ್ನ ತಾಯಿ: ಬಡವರ ಕಲ್ಯಾಣ (ಗರೀಬ್ ಕಲ್ಯಾಣ್) ಕುರಿತಂತೆ ತಮ್ಮ ಸರ್ಕಾರದ ಜಾರಿಗೆ ತಂದಿರುವ ಹಲವಾರು ಕಲ್ಯಾಣ ಯೋಜನೆಗಳಿಗೆ ಸಂಬಂಧಿಸಿದ ಬಲವಾದ ಸಂಕಲ್ಪ ಮತ್ತು ಗಮನವನ್ನು ನೀಡಲು ತಮ್ಮ ತಾಯಿಯೇ ಸ್ಫೂರ್ತಿ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ಮೋದಿ ಅವರ ತಾಯಿ ಶನಿವಾರ 100ನೇ ವರ್ಷಕ್ಕೆ ಕಾಲಿರಿಸಿದರು. ಈ ಹಿನ್ನೆಲೆಯಲ್ಲಿ ಬ್ಲಾಗ್ ಮೂಲಕ ತಮ್ಮ ತಾಯಿಯ ತ್ಯಾಗ, ವ್ಯಕ್ತಿತ್ವ ವಿವಿಧ ದೃಷ್ಟಿಕೋನದ ಬಗ್ಗೆ ತಿಳಿಸಿದ್ದು, ಇವೆಲ್ಲವೂ ಹೇಗೆ ತಮ್ಮ ಜೀವನವನ್ನು ರೂಪಿಸಿದವು ಎಂದು ಎಂದು ಹೇಳಿದ್ದಾರೆ.

ನಾನು 2001ರಲ್ಲಿ ಗುಜರಾತ್‌ನ ಮುಖ್ಯಮಂತ್ರಿಯಾಗಿ ಆಯ್ಕೆಯಾದಾಗ ನಮ್ಮ ತಾಯಿ ಆನಂದಪರವಶರಾಗಿ, ಸರ್ಕಾರದ ಕೆಲಸದಲ್ಲಿ ನಿನ್ನ ಪಾತ್ರ ಏನು ಎಂಬುದು ನನಗೆ ಗೊತ್ತಿಲ್ಲ. ಆದರೆ ನೀನು ಲಂಚ ಮಾತ್ರ ತೆಗೆದುಕೊಳ್ಳಬೇಡ ಎಂದಿದ್ದರು. ಅವರು ವಿಶಾಲ ಹೃದಯದವರು. ಬೇರೆಯವರ ಖುಷಿಯಲ್ಲಿ ತಮ್ಮ ಸಂತೋಷವನ್ನು ಕಂಡುಕೊಂಡವರು ಎಂದು ಬರೆದಿದ್ದಾರೆ.

ಮೂರನೇ ಪುಟದಿಂದ

ಇಬ್ಬರು ಯುವತಿಯರು ಸಾವು

ಕೆ.ಪಿ. ಅಗ್ರಹಾರದ ಪ್ರಸನ್ನ ಎಂಬವರ ಪುತ್ರಿ ಪ್ರತೀಕ್ಷಾ (24) ಎಂದು ಗುರುತಿಸಿರುವುದಾಗಿ ತಿಳಿಸಿರುವ ಪೊಲೀಸರು, ಆದರೆ ಮೃತರ ಸಂಬಂಧಿಕರನ್ನು ಸಂಪರ್ಕಿಸಲು ಸಾಧ್ಯವಾಗಿಲ್ಲ ಎಂದಿದ್ದಾರೆ. ವಾರಾಂತ್ಯದ ಹಿನ್ನೆಲೆಯಲ್ಲಿ ಇಬ್ಬರೂ ಯುವತಿಯರು ಕಾರಿನಲ್ಲಿ ಮೈಸೂರಿನಿಂದ ಹುಣಸೂರು ಕಡೆಗೆ ಬರುತ್ತಿದ್ದ ವೇಳೆ ಮುಂದಿನ ಟಯರ್ ಪಂಕ್ಚರ್ ಆಗಿ ನಿಯಂತ್ರಣ ತಪ್ಪಿದ ಕಾರು ಎದುರುಗಡೆ ಬರುತ್ತಿದ್ದ ಹಾಲಿನ ಟ್ಯಾಂಕರ್‌ಗೆ ಡಿಕ್ಕಿ ಹೊಡೆದಿದೆ. ಡಿಕ್ಕಿ ಹೊಡೆದ ರಭಸಕ್ಕೆ ಕಾರಿನ ಮುಂಭಾಗ ಸಂಪೂರ್ಣವಾಗಿ ನಜ್ಜುಗುಜ್ಜಾಗಿದ್ದು, ಯುವತಿಯರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಮಾಹಿತಿ ಅರಿತ ಬಿಳಿಕೆರೆ ಠಾಣೆ ಪೊಲೀಸರು ಸ್ಥಳಕ್ಕೆ ಧಾವಿಸಿ ಕಾರಿನಿಂದ ಮೃತ ದೇಹಗಳನ್ನು ಹೊರ ತೆಗೆದು ಮೈಸೂರಿನ ಕೆ.ಆರ್.ಆಸ್ಪತ್ರೆ ಶವಾಗಾರಕ್ಕೆ ರವಾನಿಸಿದ್ದಾರೆ. ಈ ಸಂಬಂಧ ಬಿಳಿಕೆರೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಾರದಮಿತ್ರ
ಸಾಪ್ತಾಹಿಕ ಪುರವಣಿ
ಮೈಸೂರು ಮಿತ್ರ
ಭಾನುವಾರ
19-6-2022

ಬಂದ ಬಂದ... ಮಳೆರಾಯ

ಆರ್.ಪವನ್‌ಕುಮಾರ್, ಮೊ:9945842882.

ಎಲ್ಲೆಲ್ಲೂ ಮೋಡ ಕವಿದ ವಾತಾವರಣ. ಈ ವರ್ಷದ ಮಳೆಗಾಲಕ್ಕೆ ಕಾಲ ಸಜ್ಜುಗೊಂಡಿದೆ. ಮಳೆ ಎಂದರೆ ಅದೊಂದು ಸೃಷ್ಟಿ ಕ್ರಿಯೆ. ನೆಲಕ್ಕೆ ಅದರ ಸ್ಪರ್ಶವಾಗುತ್ತಲೇ ಹದಗೊಂಡ ಮಣ್ಣು ತನ್ನೊಳಗಿನ ಬೀಜಕ್ಕೆ ಜೀವ ತುಂಬುತ್ತದೆ. ಆ ಜೀವ ಹಚ್ಚನೆ ಹಸಿರಾಗಿ ಪ್ರಕೃತಿ ಮೈ ತುಂಬುವ ಅಪೂರ್ವ ಸಮಯ. ತಲೆ ಮೇಲೆ ಹರಿದಾಡುವ ದಟ್ಟಕಪ್ಪು ಮೋಡಗಳು ಸೂರ್ಯನ ಕಿರಣಗಳಿಗೆ ಅವಕಾಶ ಕೊಡದಂತೆ ತಮ್ಮ ಪಾರುಪತ್ಯ ಮೆರೆದಿರುತ್ತವೆ. ಅವುಗಳಿಂದ ಉದುರುವ ಮಳೆ ಹನಿಗಳಿಗೆ ಇಂಥಾ ಸಮಯವೆಂಬುದಿಲ್ಲ. ಅವಕಾಶ ಸಿಕ್ಕಂತೆಲ್ಲಾ ಧೋ ಎಂದು ಅಬ್ಬರಿಸುತ್ತಲೇ ಇರುತ್ತದೆ.

ಈ ಮಳೆಗೆ ಕಾಲ, ಸ್ಥಳವೆಂಬ ಗಡಿಗಳಿಲ್ಲ. ಎಲ್ಲವನ್ನು ಆವರಿಸಿಕೊಳ್ಳುವಂತೆ ಸುರಿದು ತಣಿಸುತ್ತದೆ. ಮಳೆಯನ್ನು ನಿರೀಕ್ಷಿಸುವ, ಅದರ ಅಳತೆ, ಪ್ರಮಾಣಗಳನ್ನು ಅಂದಾಜಿಸುವ ಹವಾಮಾನ ಇಲಾಖೆಯು ಮುಂಗಾರು ಪ್ರಾರಂಭವಾಗುವ ವಾರವನ್ನು ನಿರ್ದಿಷ್ಟವಾಗಿಲ್ಲದೆ ಹೋದರು ಒಂದು ಹಂತಕ್ಕೆ ಪ್ರಕಟಿಸಿರುತ್ತದೆ. ಮಳೆಗೆಂದು ಕಾದವರಲ್ಲಿ ರೈತ ಪ್ರಮುಖನಾಗುತ್ತಾನೆ. ಅವನ ಕೃಷಿ ಚಟುವಟಿಕೆಗಳು ಅವಲಂಬಿಸಿರುವುದೇ ಈ ಮಳೆಯನ್ನು. ಮಳೆಯ ನಿರೀಕ್ಷೆಯಲ್ಲಿನ ಅವನ ಆಸೆ, ತವಕಗಳ್ಯಾವುವು ಕಡಿಮೆಯಾಗುವುದಿಲ್ಲ. ಅವನ ನಂಬಿಕೆ ಪೂರ ಮಳೆಯನ್ನು ಆಧರಿಸಿರುವುದರಿಂದ ಮಳೆಯೇ ಅವನ ಪರಮಾಪ್ತ.

ಪ್ರತಿ ಜೀವಿಗಳ ಪಾಲಿಗೂ ನೀರೆಂಬ ಜೀವಧಾರಕ್ಕೆ ಮಳೆಯೇ ಮೂಲಧಾರ. ಗುಡುಗು, ಮಿಂಚು, ಸಿಡಿಲು, ಗಾಳಿಯೊಂದಿಗೆ ಮಳೆ ಆರ್ಭಟಿಸಿತೆಂದರೆ ಬತ್ತಿದ ಹಳ್ಳ, ಕೊಳ್ಳ, ಕೆರೆಗಳೆಲ್ಲವು ತುಂಬಿ ಹರಿಯುವವು. ಹಾಗೇ ಈ ಮಳೆ ಮಿತಿ ಮೀರಿದರೆ ನಡೆಯುವ ಅನಾಹುತಗಳು ಕಮ್ಮಿಯಿರಲಿಲ್ಲ. ಆದ್ದರಿಂದ ವಾಡಿಕೆಯಂತೆ ಬರುವ ಮಳೆ ಎಂದೂ ಈ ಮನುಷ್ಯನ ಅಂದಾಜಿಗೆ ಸಿಕ್ಕಿದ್ದೆ ಇಲ್ಲ. ಈ ಮಳೆಯ ಸಂಭ್ರಮವೇ ಒಂದು ಖುಷಿ. ಚಿಟಪಟನೆ ಸುರಿಯುತ್ತ ಜೋರಾಗದೆ, ಕಡಿಮೆಯಾಗದೆ ನಿಂತಲ್ಲೆ ನಿಲ್ಲಿಸಿ ನೂರು ನೆನಪುಗಳಿಗೆ ಸಾಕ್ಷಿಯಾಗುವ ಮಳೆಯನ್ನು ಶಪಿಸುವುದಾದರು ಹೇಗೆ? ಅದರೊಂದಿಗಿನ ಒಡನಾಟ ತೊರೆದವರಂತೆ ಎಷ್ಟು ಗಂಭೀರವಾಗಲು ಯತ್ನಿಸಿದರು ಅಷ್ಟೇ ಈ ಮಳೆಯನ್ನೂ ಕ್ರಿಯೆ ನಮ್ಮನ್ನು ಮುದಗೊಳಿಸುತ್ತಲೆ ಆಲಂಗಿಸಿಕೊಳ್ಳುತ್ತದೆ. ಅದೆಷ್ಟೋ ನೆನಪುಗಳು ಇದರ ದೆಸೆಯಿಂದ ಮನದ ಮೂಲೆಯಿಂದ ಒಂದೊಂದೇ ಕೈ ಹಿಡಿದು ಹೊರ ಬರುತ್ತವೆ. ಇಂಥಾ ಕ್ಷಣಗಳಿಗೆ ನೆರವಾಗುವ ಮಳೆಯನ್ನು ಯಾರಿಂದಲೂ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲವೇನೋ.?

ಮಳೆಗಾಲವೇನೋ ತನ್ನ ಕಾರ್ಯಾರಂಭ ಮಾಡಿದಂತೆ ಇದರಿಂದ ರಕ್ಷಣೆ ಪಡೆಯಲು ಕೆಲ ಸಿದ್ಧತೆಗಳಾದೋ. ಅದರಲ್ಲಿ ಮೊದಲಿಗೆ ಕೊಡೆಗಳು ಮಳೆಗಾಲವನ್ನು ತನ್ನಷ್ಟು ಇನ್ಯಾರು ಅನುಭವಿಸಲಾರರೆಂಬಂತೆ ತಮ್ಮ ಮುಖಗಳ ಅರಳಿಸಿಕೊಂಡೋ, ಮಳೆಗಾಲದಲ್ಲಿ



ಈ ಕೊಡೆಯನ್ನು ಮರೆಯುವಂತಿಲ್ಲ. ಇಷ್ಟು ದಿನ ಮನೆಯೊಳಗೆ ಬೆಚ್ಚಗೆ ಮುದುರಿ ಮಲಗಿದ್ದ ಕೊಡೆಗಳೆಲ್ಲವು ಗುಡುಗು, ಸಿಡಿಲಿನಬ್ಬರ ಕೇಳುತ್ತಲೆ ತಮ್ಮ ಕಾರ್ಯಕ್ಕೆ ಬರುತ್ತವೆ. ಈ ಕೈಗೆ ಬಂದ ಕೊಡೆಗಳ ಹಿಡಿದು ಸಣ್ಣಗೆ ಒಂದು ಲಯದಲ್ಲಿ ಸುರಿಯುವ ಮಳೆಯ ನಡುವೆ ಹೆಜ್ಜೆಗಳ ಹಾಕುವುದೆಂದರೆ ಅದೊಂದು ವಿಶೇಷ ಅನುಭವ. ರಕ್ಷಣೆಗೆ ತೊಟ್ಟ ಜರ್ಕಿನ್, ರೈನ್‌ಕೋಟ್‌ಗಳು ಕೂಡ ಮಳೆಗಾಲದ ನೆಪದಿಂದ ಹೊರಗೆ ಬಂದಿರುತ್ತವೆ.

ಒಂದೆಡೆ ಸುಮ್ಮನೆ ನಿಂತು ಶುರುವಾದ ಮಳೆಯನ್ನು ನೋಡುತ್ತ ನಿಂತರೆ ಸಾಕು ಅದು ನಮ್ಮೊಳಗೆ ಭಾವ ನದಿಯನ್ನು ಉಕ್ಕಿಸಲು ಕಾರಣವಾಗುತ್ತದೆ. ಮಳೆ ನಕ್ಷತ್ರಗಳಲ್ಲೂ ಹಲವು ವಿಧಗಳಿದ್ದು, ಪ್ರತಿ ಮಳೆಗೆ ಚಿತ್ತ, ಸ್ವಾತಿ, ಆದ್ರ, ಆಶ್ಲೇಷ, ಪುನರ್ವಸು, ಚಿಟ್ಟೆ ಇತರೆ ಹೆಸರುಗಳಿಂದ ಮಳೆಗಾಲವು ತುಂಬಿಕೊಂಡಿರುತ್ತದೆ. ಎಲ್ಲಾ ಮಳೆಗೂ ಅದರದೇ ಆದ ಗುಣ, ಲಕ್ಷಣ, ವಿಶೇಷಗಳಿದ್ದು, ಸೂಕ್ಷ್ಮವಾಗಿ ಗಮನಿಸುತ್ತ ತಿಳಿಯ ಬಯಸುವವರಿಗೆ ಮಳೆಗಾಲ ಮತ್ತಷ್ಟು ಆಪ್ತವಾಗುತ್ತದೆ.

ಮಳೆಗಾಲವೆಂದರೆ ಪ್ರಕೃತಿಯಲ್ಲಿ ಒಂದು ರೀತಿಯ ಹಬ್ಬವಾಗಿದ್ದು, ಪ್ರತಿಯೊಂದು ಈ ಮಳೆಯಲ್ಲಿ ಮಿಂದೇಳುತ್ತವೆ. ಅತಿವೃಷ್ಟಿ, ಅನಾವೃಷ್ಟಿ ಏನೇ ಇದ್ದರು ಮಳೆಗಾಲವನ್ನು ಆರೋಪಿಸುವಂತಿಲ್ಲ. ಅದು ಪ್ರಕೃತಿ ಸಹಜವಾಗಿದ್ದು, ಅದಕ್ಕೆ ಹೊಂದಿಕೊಂಡು ಬದುಕುವುದೇ ಮನುಷ್ಯ ಲಕ್ಷಣವಾಗಿದೆ. ತುಂತುರು ಮಳೆಯನ್ನು ಆನಂದಿಸಿದಂತೆ, ಜೋರು ಬಿರುಗಾಳಿ ಮಳೆಯನ್ನು ಸಹಿಸಿಕೊಳ್ಳಬೇಕಾಗಿದೆ. ಮಳೆಗಾಲವೆಂದರೆ ಅದು ಬಂದು ಸುಮ್ಮನೆ ಹೋಗುವುದಲ್ಲ ಎಲ್ಲಾ ಬರುಡು, ಕೊರಡುಗಳೊಳಗು ಜೀವ ಸಂಚರಿಸುವಂತೆ ಮಾಡಿ ಹೋಗುತ್ತದೆ. ಈ ಮೂಲಕವೇ ಹೊಸತನದ, ಹೊಸ ಯುಗದ ಹಾದಿಗಳು ತೆರೆದುಕೊಳ್ಳುತ್ತವೆ. ಇಂಥಾ ಮಳೆಗಾಲವನ್ನು ಮತ್ತೊಮ್ಮೆ ಎದುರುಗೊಳ್ಳುವಾಗ ಬೇಕಾದ ತಯಾರಿಗಳೆಲ್ಲವೂ ನಮ್ಮೊಡನಿದ್ದು, ಸಾಗುವ ಮೋಡಗಳನ್ನು ಮಳೆ ಸುರಿಸಿರೆಂದು ಧನ್ಯವಾಗೆ ಕೇಳಿಕೊಳ್ಳುತ್ತಿರುತ್ತದೆ.





ಅಪ್ಪ ನೀ ಸಾಮಾನ್ಯನಲ್ಲ

ಪ್ರತಿವರ್ಷ ಜೂನ್ ಮೂರನೇ ಭಾನುವಾರ 'ವಿಶ್ವ ಅಪ್ಪಂದಿರ ದಿನ' ಆಚರಿಸಲಾಗುತ್ತಿದ್ದು, ಈ ಬಾರಿ ಜೂ.19ರಂದು ಅಪ್ಪಂದಿರ ದಿನದ ತನ್ನಿಮಿತ್ತ ಈ ಲೇಖನ.

ಮಂಜುನಾಥ್ ಬಿ.ಆರ್, ಮೊ: 8884684726

ಅಪ್ಪನಾಗಲು ಬಂದವನೂ ಸಹ ಅವನ ಅಪ್ಪನಿಗೆ ಬದುಕಿನ ಘಟ್ಟಗಳಲ್ಲಿ ಗೆಲ್ಲಲು ತಾನೇ ಅಧ್ಯಾಯಗಳ ರೂಪದಲ್ಲಿ ಅವಕಾಶ ಕೊಟ್ಟು ಬಂದಿರುತ್ತಾನೆ. ಆದರೆ, ಅವನ ಅಪ್ಪ ಹೇಗೆ ಪರಿಪೂರ್ಣನಾದನೋ ಎಂಬುವುದು; ಈತನು ಅಪ್ಪನಾಗಲು ಬಂದಾಗ ತಿಳಿಯುತ್ತದೆ.


ಕೇವಲ ಒಬ್ಬರ ಜನ್ಮಕ್ಕೆ, ದೈಹಿಕ ರೂಪಕ್ಕೆ ಕಾರಣನಾದವನು ಅಪ್ಪನೆನಿಸಲಾರ. ಆತನು ಪಿಂಡ ಕತೃಕಾರಕನಾಗಿ ನಾಮಮಾತ್ರ ಗುರುತನ್ನು ಪಡೆಯುತ್ತಾನಷ್ಟೇ. ಈವರೆಗಿನ ಆತನ ವ್ಯಕ್ತಿತ್ವಗಳೆಲ್ಲವೂ ಬದಲಾಗುವ ಹಂತಕ್ಕೆ ತಲುಪಿ ಅಪ್ಪ ಎನ್ನುವ ಪದವಿಯನ್ನು ಪೂರ್ಣಗೊಳಿಸುವುದಕ್ಕಾಗಿ ಕಲಿಯುವ ನಿರಂತರ ಬದುಕಿನ ಅಧ್ಯಾಯಗಳೇ ಆಗಿದೆ. ಮಕ್ಕಳೇ ಆತನಿಗೆ ಮಾಗುವುದಕ್ಕೆ ಅನುವು ಮಾಡಿಕೊಡಲು ಇರುವ ಬದುಕಿನ ವಿವಿಧ ಘಟ್ಟಗಳು ಮತ್ತು ಅಧ್ಯಾಯಗಳು. ಅಪ್ಪನಾಗಲು ಬಂದವನೂ ಸಹ ಅವನ ಅಪ್ಪನಿಗೆ ಬದುಕಿನ ಘಟ್ಟಗಳಲ್ಲಿ ಗೆಲ್ಲಲು ತಾನೇ ಅಧ್ಯಾಯಗಳ ರೂಪದಲ್ಲಿ ಅವಕಾಶ ಕೊಟ್ಟು ಬಂದಿರುತ್ತಾನೆ. ಆದರೆ ಅವನ ಅಪ್ಪ ಹೇಗೆ ಪರಿಪೂರ್ಣನಾದನೋ ಎಂಬುವುದು; ಈತನು ಅಪ್ಪನಾಗಲು ಬಂದಾಗ ತಿಳಿಯುತ್ತದೆ.

ಎಲ್ಲಾ ಮಕ್ಕಳು ಒಂದೇ ತೆರನಾದ ಅಧ್ಯಾಯಗಳನ್ನು ಪಡೆದಿರುವುದಿಲ್ಲ. ಕೆಲವು ಮಕ್ಕಳು ಕಠಿಣ ನಡಾವಳಿಗಳ ಸ್ವರೂಪದ ಅಧ್ಯಾಯಗಳಲ್ಲಿ ದೊರೆತಿರುತ್ತಾರೆ. ಹಾಗೆಯೇ ಕೆಲವು ಮಕ್ಕಳು ಸುಲಭ ನಡಾವಳಿಗಳ ಲಕ್ಷಣಗಳ ಅಧ್ಯಾಯಗಳಾಗಿ ದೊರೆತಿರುತ್ತಾರೆ. ಏನೇ ಆಗಿ ದೊರೆತರು ಆದರ್ಶ ತಂದೆ ಎನಿಸಲು ಇವುಗಳು ಮುಖ್ಯವೇ! ಮಕ್ಕಳಾದವರು ಬಾಲ್ಯಾವಸ್ಥೆ, ಹದಿಹರೆಯದ ಘಟ್ಟ, ಯೌವ್ವನಾವಸ್ಥೆ, ಮಧ್ಯವಯಸ್ಕ. ಹೀಗೆ ಈ ಪ್ರಮುಖ ನಾಲ್ಕು ಹಂತಗಳಲ್ಲಿ ತಂದೆಗೆ ಅಧ್ಯಾಯಗಳಾಗಿ ಕಲಿಸಲು ಸಿಗುತ್ತಾರೆ. ತಂದೆ ಎನಿಸಿಕೊಳ್ಳುವವನು ಈ ನಾಲ್ಕು ಘಟ್ಟಗಳಲ್ಲಿನ ಮಕ್ಕಳನ್ನು ಹೇಗೆ ಕಲಿತು ಉನ್ನತಿಗೊಳ್ಳುತ್ತಾನೋ ಎನ್ನುವುದರಲ್ಲೇ ಆದರ್ಶ ತಂದೆಯ ಪಾತ್ರ ಅಡಗಿರುತ್ತದೆ. ತಂದೆಯಾಗುವವನು ಮೊದಲು ತಾನು ಕೂಡ ಮಕ್ಕಳಿಗೆ ಅನುಗುಣವಾಗಿ ಬಾಲ್ಯಾವಸ್ಥೆಗೆ ಜಿಗಿಯಬೇಕು. ಜೊತೆ ಜೊತೆಗೆ ತನ್ನ ವಯಸ್ಸಿನ ಅನುಭವವನ್ನು ಮತ್ತು ಕರ್ತವ್ಯವನ್ನೂ ಸಹ ನಿಭಾಯಿಸಬೇಕು. ಪ್ರೀತಿ ಮಮತೆಗಳ ಸಾಗರವಾಗಿ ಆ ಮಕ್ಕಳಿಗೆ ಆದರ್ಶ ಅಪ್ಪನಾಗಲು ಬಂದವನು ಕಾಣಬೇಕು. ಆ ಪ್ರೀತಿ ಮಮತೆಗಳ ಸಾಗರದಲ್ಲಿ ಆ ಮಕ್ಕಳು ಮುಳುಗದೇ, ತೇಲದೇ ಮತ್ತು ಆಚೆ ಜಿಗಿಯದೆ ಸದಾ ಈಜು ಸಾಹಸಿಗರಾಗಿ ಇರುವಂತೆ ಹಾಗೂ ಬದುಕಿನ ಗುರಿಯನ್ನು ಮುಟ್ಟುವಂತೆ ಉತ್ತಮ ವಾತಾವರಣವನ್ನು ಸೃಷ್ಟಿಸಿಕೊಡಬೇಕು. ಸಮಾಜದ ಆಗು–ಹೋಗುಗಳನ್ನು ವಾಸ್ತವವಾದಿಯಾಗಿ ಅರಿಯಬೇಕು. ಮುಗ್ಧತೆಯೊಂದಿಗೆಯೇ ಬದುಕಿನ ಜಟಿಲತೆಗಳನ್ನು ಜೀರ್ಣಿಸಿಕೊಳ್ಳುವ ಅನುಭವಿಯಾಗಬೇಕು. ಆ ಅನುಭವಗಳಿಂದ ತಿಳಿದ ಪ್ರಕಾರ ಮಕ್ಕಳಿಗೆ ಬದುಕಿನ ದಾರಿ ತೋರಬೇಕು.

ಪ್ರೌಢಾವಸ್ಥೆಯ ಚಿಗುರಿನಲ್ಲಿರುವ ಮಕ್ಕಳಿಗೆ ವಸಂತಮಾಸದ ಬಣ್ಣ ಬಣ್ಣದ ಲೋಕವಿರುತ್ತದೆ. ಆ ಲೋಕಕ್ಕೆ ಕಪ್ಪು ಮಸಿಯನ್ನು ಬಳೆಯುವಷ್ಟು ಅಪ್ಪನೇ ಅಂಧಕಾರನಾಗಿರಬಾರದು. ಆ ಕಾಮನಬಿಲ್ಲಿನ ಜಗತ್ತಿನಲ್ಲಿ ಮಾಯತೆಯನ್ನು ಸೃಷ್ಟಿಸುವ ಬಣ್ಣಗಳ ಬಗ್ಗೆ ಪರಿಚಿತನಾಗಿರಬೇಕು. ಆ ಬಣ್ಣಗಳ ಮಾಯತೆಯನ್ನು ಬದಲಿಸಿ ಅದರಲ್ಲಿರುವ ಸುಂದರತೆಯನ್ನು ಮಾತ್ರ ಮಕ್ಕಳ ಬದುಕಲ್ಲಿ ಸದಾ ಮಾಸದಂತೆ ಇರಲು ಇರುವ ಯೋಜನೆಗಳ ಕಡೆ, ಬದುಕಿನ ಆಯ್ಕೆಗಳ ಕಡೆ ಮಕ್ಕಳನ್ನು ಕೊಂಡೊಯ್ಯಬೇಕು. ಬಣ್ಣಗಳ ಮರ್ಮಗಳನ್ನು ತಿಳಿಯಪಡಿಸುವ ಜಾಣ್ಮೆ ತಂದೆಗೆ ಇರಬೇಕು. ಅದರ ವಿನಃ ಆತಂಕಗಳಲ್ಲಿ ತಿರಸ್ಕಾರಗಳನ್ನು ಮಕ್ಕಳಿಗೆ ತೋರಿದರೆ, ಹದಿಹರೆಯದ ಮಕ್ಕಳೆಂಬ ಅಧ್ಯಾಯದಲ್ಲಿ ತಂದೆ ಎನಿಸುವವನು ಅನುತ್ತೀರ್ಣನಾದಂತೆಯೇ ಆಗುತ್ತದೆ. ಈ ಘಟ್ಟವನ್ನು ಉತ್ತೀರ್ಣನಾಗದೆ ಜಿಗಿದರೆ ಮುಂದಿನ ಹಂತವೂ ಬದುಕಿಗೆ ಮುಳುವಾಗುತ್ತದೆ.

ವಿರುದ್ಧ ಲಿಂಗಿಗಳ ಆಕರ್ಷಣೆಯೊಂದಿಗೆ ಬದುಕನ್ನು ಸಮಾಜದೊಂದಿಗೆ ಬೆಸೆದುಕೊಳ್ಳಲು ಸಿದ್ಧವಿರುವ ಯೌವ್ವನಾವಸ್ಥೆಯ ಮಕ್ಕಳಿಗೆ ತಂದೆ ಎನಿಸಿಕೊಳ್ಳುವವನು ಮಕ್ಕಳನ್ನು ಸ್ನೇಹಿತರನ್ನಾಗಿ ಪಡೆಯಬೇಕು. ಸ್ನೇಹದ ಸಲುಗೆಯಲ್ಲಿ ಹೊರ ಜಗತ್ತಿನ ವಿಚಾರಗಳಿಗೆ ಸಮಚಿಂತನೆಗಳ ಮೂಲಕ ಉತ್ತರ ಕಂಡುಕೊಳ್ಳುವ ದಿನಚರಿಗಳಲ್ಲಿ ಬೆರೆಯಬೇಕು. ಎಲ್ಲ ಸನ್ನಿವೇಶಗಳಲ್ಲೂ ಮಕ್ಕಳ ಜೊತೆ ನಿಂತು ಕೈ ಹಿಡಿದು ನಡೆಸುವ ವಿಶಿಷ್ಟ ಸಂಬಂಧವಾಗಿ ಗುರುತಾಗಬೇಕು. ಮಕ್ಕಳು ಮೋಸ ಮಾಡುವಾಗ, ಮೋಸ ಹೋಗುವಾಗ ಅಪ್ಪನ ಮೇಲಿನ ಪ್ರೀತಿ ಮತ್ತು ಸ್ವಾತಂತ್ರ್ಯದ ಸ್ಥಿರತೆ ಮಕ್ಕಳ ಮನಸ್ಸಿನಲ್ಲಿ ಮೂಡುವ ಹಾಗೆ ತಂದೆ ಆದವನು ಮಕ್ಕಳಿಗೆ ಸ್ವತಂತ್ರ ಪ್ರಭುವಾಗಿ ಕಾಣಿಸುವನಾಗಿ ಯೌವ್ವನ ಘಟ್ಟದ ವಿಚಾರಗಳಲ್ಲಿ ಮಾಗಿರಬೇಕು ಮತ್ತು ತನ್ನ ಯೌವ್ವನಾಸ್ಥಿತಿಯನ್ನು ಮೆಲುಕು ಹಾಕಬೇಕು. ತನ್ನ ಯೌವ್ವನಾವಸ್ಥೆಯ ಬದುಕಿನಲ್ಲಿ ತಾನೇ ಮಾಡಿದ ತಪ್ಪುಗಳಿಗೆ ಮಕ್ಕಳ ಯೌವ್ವನಾವಸ್ಥೆಯ ಮೂಲಕ ಕ್ಷಮೆ ಕೇಳಬೇಕು. ಕೆಲವುಗಳನ್ನು ಸರಿಪಡಿಸಬೇಕು. ವಿವಾಹದ ಆಯ್ಕೆಗಳು, ಉದ್ಯೋಗದ ಆಯ್ಕೆಗಳು, ಕೌಟುಂಬಿಕ ಜವಾಬ್ದಾರಿಗಳು, ಸಮಾಜದ ಭಾಗವಹಿಸುವಿಕೆ, ರಾಷ್ಟ್ರೀಯತೆ ಹೀಗೆ ಮನುಷ್ಯತ್ವ ಸಂಬಂಧಿ ವಿಷಯಗಳೆಲ್ಲವನ್ನೂ ಮಕ್ಕಳ ಯೌವ್ವನಾವಸ್ಥೆಯಲ್ಲಿ ಸರಿಪಡಿಸಬೇಕು. ಈ ಹಂತದ ಪಾಠ ತಂದೆಯಾಗುವವನಿಗೆ ಚೆನ್ನಾಗಿ ಕರಗತವಾದರೆ ಮುಂದಿನ ದಿನಗಳಲ್ಲಿ ತನ್ನ ಮಕ್ಕಳನ್ನು ಉತ್ತಮ ತಂದೆಯಾಗಿ ತಾಯಿಯಾಗಿ ಕಾಣಲು ಸುಲಭ ಸಾಧ್ಯವಾಗುತ್ತದೆ.

ಮಧ್ಯ ವಯಸ್ಕರ ಮಕ್ಕಳಿಗೆ ವೃದ್ಧನಾದ ತಂದೆ ತನ್ನ ಮಗುತ್ವವನ್ನು ಪರಿಚಯಿಸಬೇಕು; ತನ್ನ ತನುವಿನ ಅಸಹಾಯಕತೆಯಲ್ಲಿನ ತಿರುಳನ್ನು ತಿಳಿಯಪಡಿಸುವ ಕಲಿಕೆಯಲ್ಲಿ ಮತ್ತೊಮ್ಮೆ ಉತ್ತೀರ್ಣನಾಗಬೇಕು. ಆಲದಮರದಂತೆ ಜಾಲ ಬಿಟ್ಟು ಆಕಾಶದೆತ್ತರಕ್ಕೆ ಅಪ್ಪನಾಗುವ ಗುಣಧರ್ಮಗಳನ್ನು ಹೊಂದಬೇಕು. ಕೊನೆಯ ಫಲಿತಾಂಶ ಹೊರಬರುವುದು ತನ್ನ ಮಕ್ಕಳು ಆದರ್ಶ ತಂದೆಯಾಗಿ ಹೊರಬಂದಾಗ ಈತನ ಬದುಕಿನ ಕಥೆ ಯಶೋಗಾಥೆ ಆಗಿರುತ್ತದೆ. ಇಲ್ಲಿ ಮೇಲೆ ಹೇಳಿದ ರೀತಿಯಲ್ಲಿ ಮಕ್ಕಳಿಗೆ ಬದುಕಿನ ಎಲ್ಲಾ ಘಟ್ಟಗಳಲ್ಲಿ ಅಪ್ಪ ಎನ್ನುವ ಪ್ರಜ್ಞೆ ಕೆಲಸ ಮಾಡಬೇಕು. ಮಕ್ಕಳ ಬದುಕಿನ ಕಷ್ಟ, ಸುಖ, ಸೋಲು, ಗೆಲುವು ಎಲ್ಲದರಲ್ಲೂ ಅಪ್ಪ ಎನ್ನುವ ಪ್ರಜ್ಞೆ ಇರಬೇಕು. ಈ ಪ್ರಜ್ಞೆಯ ಜೊತೆಗೆ ಬದುಕಿನ ಯಾವುದೇ ಜ್ಞಾನ ಮಕ್ಕಳಿಗೆ ದೊರೆತಾಗ ಆ ಮಕ್ಕಳು



ಪ್ರಜ್ಞಾಪೂರ್ವಕವಾಗಿ ತಮ್ಮ ಬದುಕಿನ ಘಟ್ಟಗಳನ್ನು ನಿರ್ಧರಿಸಿಕೊಳ್ಳುತ್ತಾರೆ. ತಂದೆಯಾಗಬೇಕಾದರೆ ಆಸ್ತಿ–ಅಂತಸ್ತು ಐಷಾರಾಮಿ ಬದುಕನ್ನು ಮಕ್ಕಳಿಗೆ ನೀಡಬೇಕು ಎನ್ನುವುದಲ್ಲ. ಮಕ್ಕಳನ್ನು ಸ್ವಲ್ಪವೂ ಕಷ್ಟದಲ್ಲಿ ನೋಯಿಸದೆ ಸಾಕುವುದೂ ಅಲ್ಲ. ತಂದೆಯಾಗುವುದೆಂದರೆ ಪ್ರಜ್ಞೆಯಂತಾಗುವುದು, ಜ್ಞಾನವಂತನಾಗುವುದು, ಸರಳ ಬದುಕಾಗುವುದು, ಆತ್ಮಾನಂದದ ಹರಿಕಾರನಾಗುವುದು. ಬದುಕಿನ ಎಲ್ಲಾ ಘಟ್ಟಗಳ ಅನುಭವಕ್ಕೆ ಕುಗ್ಗದೆ ನಿಲ್ಲುವುದನ್ನು ಕಲಿಯುವುದು. ಆಧ್ಯಾತ್ಮಿಯಾಗುವುದು, ಲೌಕಿಕ ಅಲೌಕಿಗಳ ಪಾತ್ರಗಳಿಗೆ ಹೊಂದಾಣಿಕೆಯಾಗುವುದು. ಇಷ್ಟೆಲ್ಲಾ ಆಗಲು ಮಕ್ಕಳಿಂದ ಕಲಿಯುವುದು ಮತ್ತು ಈ ಕಲಿಕೆಯೇ ಆದರ್ಶ ತಂದೆಯ ಸೂತ್ರಗಳು. ಯಾರು ಆದರ್ಶ ತಂದೆಯಾಗಿ ಪರಿಪೂರ್ಣನಾಗುತ್ತಾರೋ ಆ ಪರಿಪೂರ್ಣತೆಯಲ್ಲೇ ಅವರ ಮಕ್ಕಳ ಯಶಸ್ಸು ಅಡಗಿರುತ್ತದೆ. ಸಂತೋಷ ಅಡಗಿರುತ್ತದೆ. ಸಮಾಜಕ್ಕೆ ದೇಶಕ್ಕೆ ಉತ್ತಮ ಪ್ರಜೆಯಾಗುವ ಮಕ್ಕಳ ಗುಣಧರ್ಮ ಅಡಗಿರುತ್ತದೆ. ಮಕ್ಕಳ ಬದುಕಿನ ಎಲ್ಲಾ ವ್ಯವಸ್ಥೆಗಳು ಸುವ್ಯವಸ್ಥಿತಗೊಂಡಿರುತ್ತದೆ. ಆದರ್ಶ ತಂದೆಯಾದ ಸಂದರ್ಭದಲ್ಲಿ ಆಶ್ರಮದ ಪರಿಚಯವಾಗುವುದಿಲ್ಲ. ಮಕ್ಕಳಿಂದ ತಿರಸ್ಕಾರವಾಗುವುದಿಲ್ಲ. ಬದುಕಿನ ಕೊನೆಯ ಘಟ್ಟವು ನೋವಿನಿಂದ ಕೂಡಿರುವುದಿಲ್ಲ. ಎಲ್ಲವೂ ಒಳಿತಾಗಿಯೇ ಸಿಗುತ್ತದೆ. ತಾನು ಕಲಿತ ಮಕ್ಕಳೆಂಬ ಅಧ್ಯಾಯಗಳಲ್ಲಿ ಆದರ್ಶ ತಂದೆ ಎನಿಸಿದವನು ಮಹಾಗ್ರಂಥವಾಗಿ ಮಕ್ಕಳಿಗೆ ಸಿಗುತ್ತಾನೆ. ಆ ಮಕ್ಕಳು ಆ ಮಹಾಗ್ರಂಥದಿಂದ ತನ್ನ ಮಕ್ಕಳನ್ನು ಸುಲಭವಾಗಿ ಅಧ್ಯಯನ ಮಾಡಲು ತೊಡಗುತ್ತಾರೆ. ಅವರುಗಳೂ ಸಹ ಆದರ್ಶ ತಂದೆ ಎನಿಸಿ ಮಹಾಗ್ರಂಥವಾಗುತ್ತಾರೆ.



ವಾರಭವಿಷ್ಯ

19.6.2022 ರಿಂದ 25.06.2022

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ
ರವಿ–ಮಿಥುನ, ಚಂದ್ರ–ಕುಂಭ, ಮೀನ, ಮೇಷ, ವೃಷಭ, ಕುಜ–ಮೀನ, ಬುಧ–ವೃಷಭ, ಗುರು–ಮೀನ, ಶುಕ್ರ–ವೃಷಭ, ಶನಿ–ಕುಂಭ, ರಾಹು–ಮೇಷ ಮತ್ತು ಕೇತು–ತುಲಾ



ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ' 'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು', ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ,
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ, 2ನೇ ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು
ಮೊ: 9740973224, 9739548720

ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)

ಸಪ್ತಾಹದ ಆದಿಗೆ ಐಹಿಕ ಸುಖ ಭೋಗಗಳನ್ನು ಅನುಭವಿಸುವಿರಿ. ಎಲೆಕ್ಟ್ರಿಕಲ್ ವಸ್ತು ವ್ಯಾಪಾರಿಗಳಿಗೆ ಉತ್ತಮ ಧನಲಾಭವಾಗುವುದು. ಮನೆಯಲ್ಲಿ ಪ್ರೀತಿ ವಾತ್ಸಲ್ಯದ ವಾತಾವರಣ. ಸ್ವಪ್ರಯತ್ನದಿಂದ ಸಾಮಾಜಿಕ ಕಾರ್ಯಕಲಾಪಗಳು ದಡ ಸೇರುವುದು. ಮಹಿಳೆಯರೊಬ್ಬರ ಸಹಾಯ ಹಸ್ತ ದೊರಕುತ್ತದೆ. ಜನ್ಮ ರಾಹುವಿನ ಕಾರಣ ನುಬಲರ್ಹರಲ್ಲದವರೊಡನೆ ವ್ಯವಹರಿಸಬೇಡಿ. ವಾಯುವಿಹಾರದ ಸಮಯ ಚಿನ್ನಾಭರಣ ತೆಗೆದಿಟ್ಟು ತೆರಳಿ. – ಶ್ರೀ ನೃಸಿಂಹಸ್ವಾಮಿ ಆರಾಧನೆ, ಶುಭಸಂಖ್ಯೆ–3.

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)

ಮುಖ್ಯ ಕೆಲಸಗಳನ್ನು ಆದ್ಯತೆಯ ಮೇಲೆ ಪೂರೈಸಿಕೊಳ್ಳಿ. ಫ್ಯಾನ್ಸಿ ಅಂಗಡಿಯವರಿಗೆ ಹೆಚ್ಚಿನ ವ್ಯಾಪಾರವಾಗುವುದು. ಗುರು–ಶನಿದೇವರು ಅಶುಭರಿದ್ದಾರೆ. ಹಿರಿಯರ ಮಾತನ್ನು ನಿರ್ಲಕ್ಷಿಸಬೇಡಿ. ಅವರ ಮಾರ್ಗದರ್ಶನ ತೀರಾ ಅಗತ್ಯವಿದೆ. ಯತ್ನ ಕಾರ್ಯಗಳು ಕುಂಟುತ್ತಾ ಸಾಗುತ್ತದೆ. ಲೆಕ್ಕ ಪರಿಶೋಧಕರಿಗೆ ಉತ್ತಮ ವರಮಾನವಾಗುವುದು. ವಾರಾಂತ್ಯಕ್ಕೆ ಸಾಂಸಾರಿಕವಾಗಿ ತೃಪ್ತಿಕರ ಜೀವನ ಸಾಗುವುದು.
– ಶ್ರೀ ಲಕ್ಷ್ಮೀ ಅಷ್ಟೋತ್ತರ ಪಠಿಸಿ, ಶುಭಸಂಖ್ಯೆ–2.

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)

ಈ ವಾರದಲ್ಲಿ ಗ್ರಹಗತಿಗಳು ಚೆನ್ನಾಗಿದ್ದರೂ 'ಮಂಥನ ಮಾಡದೆ ಅಮೃತ ಸಿಗದು,' ಎಂಬಂತೆ ನಿಮ್ಮ ಕರ್ತವ್ಯಗಳನ್ನು ನಿರ್ವಹಿಸುತ್ತಾ ಸಾಗಿರಿ. ಭೂ ನ್ಯಾಯಾಲಯ ವಿವಾದಗಳಲ್ಲಿ ಆಶಾಭಾವನೆಯನ್ನು ತಳೆಯಬಹುದು. ಅರಸಿ ಬಂದದ್ದನ್ನು ತಿರಸ್ಕರಿಸಿದರೆ ಪಶ್ಚಾತ್ತಾಪ ಪಡಬೇಕಾದೀತು. ಆಸ್ತಿ ಖರೀದಿ ಯೋಗವಿದೆ. ಖರೀದಿಗೆ ಮುನ್ನ ದಾಖಲೆಗಳನ್ನು ಪರಿಶೀಲಿಸಿ ಮುಂದುವರೆಯಿರಿ. ಅಧಮ ಜನರ ಸಹವಾಸದಿಂದ ದೂರವಿರಿ.
– ಶ್ರೀ ಲಕ್ಷ್ಮಿಸ್ತುತಿ, ಶುಭಸಂಖ್ಯೆ–4.

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯು.ಯಿ.ಯ)

ಗುರುಬಲವಿದೆ. 'ಕಬ್ಬಿಣ ಕಾದಾಗ ತಟ್ಟಿಕೋ' ಎಂಬ ನಾಣ್ನುಡಿಯಂತೆ ಬಹು ನಿರೀಕ್ಷಿತ ಕೆಲಸಗಳನ್ನು ಸಂಪನ್ನಗೊಳಿಸಿಕೊಳ್ಳಿ. ಕೆಲವರಿಗೆ ಉದ್ಯೋಗದಲ್ಲಿ, ಸ್ಥಾನಮಾನಗಳಲ್ಲಿ ಬಡ್ತಿ ಆಗುವುದು. ಉತ್ತಮರ ಸಹವಾಸದಿಂದ ಸಮಾಜದಲ್ಲಿ ಗೌರವ ಪ್ರಾಪ್ತಿ. ಮನೆಯಲ್ಲಿ ಶುಭ ಕಾರ್ಯಾಚರಣೆ ನಡೆದೀತು. ಸಣ್ಣಪುಟ್ಟ ಅನಾರೋಗ್ಯ ಕಾಡಬಹುದು. ಜಲಾಶಯ ಸಮುದ್ರಗಳ ಹತ್ತಿರ ಹುಡುಗಾಟ ಸಲ್ಲದು.
– ಶ್ರೀ ಗಣಪತಿ ಉಪಾಸನೆ, ಶುಭಸಂಖ್ಯೆ–5.

ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)

ವಾರದಾರಂಭಕ್ಕೆ ಪ್ರಭಾವಿ ವ್ಯಕ್ತಿಗಳ ಸಂಪರ್ಕ ದೊರೆತು ವ್ಯಾಪಾರ ವ್ಯವಹಾರಗಳಲ್ಲಿ ಲಾಭವನ್ನು ಗಳಿಸುವಿರಿ. ಚಂದ್ರಗ್ರಹ ಸಂಚಾರ ಉತ್ತಮವಿದೆ. ಮನೆಯಲ್ಲಿ ಆಮೋದ–ಪ್ರಮೋದಗಳು ನಡೆಯುವುದು. ಕೆಲವೊಮ್ಮೆ ಬಹು ನಿರೀಕ್ಷೆಯ ಫಲ ಮಧುರವೇ ಆಗಿರುತ್ತದೆ. ನಿಮ್ಮ ಸುತ್ತಮುತ್ತ ಅಸೂಯಾಪರರು ಇದ್ದಾರೆ, ಜಾಗೃತರಾಗಿರಿ. ರಾಜಕಾರಣಿಗಳಿಗೆ ಹಲವು ಅಗ್ನಿಪರೀಕ್ಷೆಗಳು ಎದುರಾಗುವುದು. ಉಷ್ಣಜನಿತ ಕಾಯಿಲೆ ಕಾಡಬಹುದು.
– ಶ್ರೀ ವೆಂಕಟೇಶ್ವರ ದರ್ಶನ, ಶುಭಸಂಖ್ಯೆ–9.

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)

ವಾರದಾರಂಭಕ್ಕೆ ಶುಭಕಾರ್ಯಕ್ಕೆ ಪ್ರೇರಣೆ ಆಗುವುದು. ಅನಿರೀಕ್ಷಿತ ಮೂಲಗಳಿಂದ ಧನಸಂಚಯವಾಗುವುದು. ನಿಮ್ಮ ಸ್ವಂತ ಕೆಲಸಗಳನ್ನು ಆಜ್ಞಾಪೂರ್ವಕವಾಗಿ ಪೂರೈಸಿಕೊಳ್ಳುವಿರಿ. ಸತಿ–ಪತಿಯರು ಪರಸ್ಪರ ಸೋತು ಗೆದ್ದರೆ ಗೃಹಶಾಂತಿಗೆ ಭಂಗ ಬರದು. ಸರ್ಕಾರಿ ಅಧಿಕಾರಿಗಳು ಕಾನೂನುಬಾಹಿರ ಕೃತ್ಯವೆಸಗಿ ತೊಂದರೆಗೆ ಸಿಲುಕುವರು. ಆತುರದ ವಾಹನ ಚಾಲನೆ ತೊಂದರೆಗೆ ಆಹ್ವಾನ ಕೊಟ್ಟಂತೆ.
–ಶ್ರೀ ರಾಯರ ಸೇವೆ, ಶುಭಸಂಖ್ಯೆ–8.

ಕಟಕ (ಹೀ.ಹು.ಹೆ.ಹೊ.ಡ.ಡಿ.ಡು)

ಈ ವಾರದಲ್ಲಿ ನೀವು ಅದ್ಭುತ ಕ್ರಿಯಾಶಕ್ತಿಯನ್ನು ಪ್ರದರ್ಶಿಸುವ ಸಮಯವಾಗಿದೆ. ವಿದ್ಯಾರ್ಥಿಗಳಿಗೆ ಉನ್ನತ ಶ್ರೇಣಿ ದೊರೆತು ಹಲವರಿಗೆ ಕ್ಯಾಂಪಸ್ ಸೆಲೆಕ್ಷನ್ ದೊರೆಯುವ ಯೋಗವಿದೆ. ಪರೋಪಕಾರ ಬುದ್ಧಿಯಿಂದ ಸಾಮಾಜಿಕವಾಗಿ ಗೌರವಿಸಲ್ಪಡುವಿರಿ. ವನಿತಾಮಣಿಯರಿಗೆ ಕನ್ಯಾಸೆರೆಯಿಂದ ಬಿಡುಗಡೆಯ ಸುಯೋಗವಿದೆ. ಪೂರ್ವಾರ್ಜಿತ ವಸ್ತು ಮಾರಾಟದಿಂದ ಅಧಿಕ ಧನಲಾಭವಾಗುವುದು.
– ಶ್ರೀ ದುರ್ಗಾ ಸ್ತುತಿ, ಶುಭಸಂಖ್ಯೆ–1.

ಮಕರ (ಬೊ.ಜ.ಜೆ.ಶಿ.ಶು.ಶೆ.ಶೊ.ಗ.ಗಿ.)

ಸಪ್ತಾಹದ ಆದಿಗೆ ಕೆಲಸ ಕಾರ್ಯಗಳಲ್ಲಿ ಸಫಲತೆ. ವ್ಯಾಪಾರ ವ್ಯವಹಾರಗಳು ಚುರುಕಾಗಿ ನಡೆಯುವುದು. ಸಮಯಕ್ಕೆ ಸರಿಯಾಗಿ ಮಿತ್ರಜನರ ಸಹಾಯ ಹಾಗೂ ಸಾಲ ಒದಗಿ ಬರುವುದು. ನೆರೆಹೊರೆಯಲ್ಲಿ ಘರ್ಷಣೆಗೆ ಅವಕಾಶ ಕೊಡದಿರಿ, ವಿಕೋಪಕ್ಕೆ ಹೋದೀತು. ಅನ್ಯ ಮಹಿಳೆಯರನ್ನು ಗೌರವದಿಂದ ಕಾಣಿ. ಯಾರೋ ಮಾಡಿದ ತಪ್ಪಿಗೆ ನೀವು ಬಲಿಪಶುವಾಗುವ ಸಾಧ್ಯತೆ ಇದೆ. ಮನೆ ದೇವರ ದರ್ಶನ ಮಾಡಿ.
– ಶ್ರೀ ಶಿವಪಂಚಾಕ್ಷರಿ ಜಪಿಸಿ, ಶುಭಸಂಖ್ಯೆ–7.

ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)

ಸಪ್ತಾಹದ ಆದಿಗೆ ಚಂದ್ರಗ್ರಹ ಪ್ರಭಾವದಿಂದ ಸಣ್ಣ ಕೈಗಾರಿಕೆಯವರಿಗೆ ಮಾರಾಟ ಹೆಚ್ಚಳ. ವಿದ್ಯಾರ್ಥಿಗಳು ಅಭ್ಯಾಸದ ಕಡೆಗೆ ಹೆಚ್ಚಿನ ಶ್ರಮ ವಹಿಸಬೇಕು. ಫಲ ಪ್ರಾಪ್ತಿ ಕಾಲದಲ್ಲಿ ವಿಳಂಬವಾಗಬಹುದು. ಮಹತ್ತರ ಕೆಲಸಗಳನ್ನು ಸ್ವಲ್ಪ ಕಾಲ ಮುಂದೂಡಿ. ಸತಿ–ಸುತರ ಎದುರಾಡುವುದರಿಂದ ಮನಸ್ಸಿಗೆ ಬೇಸರ. ಅಕಾಲಿಕ ಭೋಜನದಿಂದ ಗ್ಯಾಸ್ ಟ್ರಬಲ್ ಕಾಡಿಸಬಹುದು.
– ಶ್ರೀ ಮಾರುತಿ ಸ್ತುತಿ, ಶುಭಸಂಖ್ಯೆ–4.

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)

ಲೇವಾದೇವಿ ಸಂಸ್ಥೆ ನಡೆಸುವವರಿಗೆ ಆದಾಯದಲ್ಲಿ ಹೆಚ್ಚಳ. ಸಿಮೆಂಟ್, ಕಬ್ಬಿಣ ವ್ಯಾಪಾರ ತೇಜೀಗತಿಯಲ್ಲಿ ಸಾಗುವುದು. ಗುರುಕೃಪೆಯಿಂದ ಆಸ್ತಿಪಾಸ್ತಿ ಹೊಂದುವ ಯೋಗವಿದೆ. ಕೌಟುಂಬಿಕ ತ್ರಾಸಗಳು ಕಡಿಮೆ ಆಗುವುದು. ಜನ್ಮಸ್ಥ ಶನಿಯ ಕಾರಣ ಶತ್ರುಗಳ ಉಪಟಳ ಹೆಚ್ಚುವುದು. ರಾಜಕೀಯದವರಿಗೆ ಅಪವಾದಗಳು ಸುತ್ತಿಕೊಳ್ಳುವುದು. ಆರೋಗ್ಯ ಅಷ್ಟಕ್ಕಷ್ಟೇ.
– ಶ್ರೀ ನಾರಾಯಣ ಸ್ತುತಿ, ಶುಭಸಂಖ್ಯೆ–1.

ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)

ಗುರುದೃಷ್ಟಿ ಇದೆ. ವಿವಾಹಾಕಾಂಕ್ಷಿಗಳಿಗೆ ಸೂಕ್ತ ವಧು–ವರ ನಿಶ್ಚಯವಾದೀತು. ಹಲವರಿಗೆ ಉನ್ನತ ಹುದ್ದೆ ಬಡ್ತಿ ದೊರೆಯಬಹುದು. ಆಪ್ತಮಿತ್ರರ ಮಿಲನದಿಂದ ಹರ್ಷ. ವಿದೇಶ ಪ್ರವಾಸದ ಆಕಾಂಕ್ಷೆ ಈಡೇರಬಹುದು. ಸರ್ಕಾರಿ ವರಿಷ್ಠ ಅಧಿಕಾರಿಗಳಿಗೆ ಜವಾಬ್ದಾರಿ ಹೆಚ್ಚಳ. ಯಂತ್ರ, ವಿದ್ಯುತ್ ಅಪಘಾತಗಳಿಂದ ಎಚ್ಚರವಿರಿ. ಹುಚ್ಚು ಸಾಹಸಕ್ಕೆ ಕೈ ಹಾಕದಿರಿ.
– ಶ್ರೀ ರಾಮನಾಮ ಜಪ, ಶುಭಸಂಖ್ಯೆ–7.

ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)

ವಾರದಾರಂಭಕ್ಕೆ ಚಂದ್ರಗ್ರಹ ಕೃಪೆಯಿಂದ ವೈಯಕ್ತಿಕ ಹಾಗೂ ಆಫೀಸ್ ಕೆಲಸಗಳು ಲವಲವಿಕೆಯಿಂದ ಜರುಗುವುದು. ವಾಕ್ಚಾತುರ್ಯದಿಂದ ಕಾರ್ಯ ಕಲಾಪಗಳನ್ನು ಸಾಧಿಸಿಕೊಳ್ಳುವಿರಿ. ಆದರೆ ಯಾವುದೇ ವಿಚಾರದಲ್ಲಿ ಆತುರದ ತೀರ್ಮಾನ ಬೇಡ. ಮಕ್ಕಳಿಂದ ವಿರೋಧದ ಮಾತು ಕೇಳಬೇಕಾದೀತು. ಹಿರಿಯರ ಹಿತವಚನವನ್ನು ಪಾಲಿಸಿ. ಸಟ್ಟಾ, ಜೂಜುಗಳಿಂದ ನಷ್ಟ ಉಂಟಾಗುವುದು. ವಾಹನ ಸಾವಧಾನವಾಗಿ ಚಲಿಸಿ.
– ಶ್ರೀ ಶನಿ ಚಾಲೀಸಾ ಪಠಿಸಿ, ಶುಭಸಂಖ್ಯೆ–6.

ಮಕ್ಕಳ ಚಿತ್ರ ಕಥೆ

'ಹಾರಲು ಪ್ರಯತ್ನಿಸುತ್ತಲೇ ಇರಲಿಲ್ಲ... ಆ ಗರುಡ...!'

–ಹೆಚ್.ಜಿ.ಎನ್.ಪ್ರಸಾದ್, ಮೊ: 9845376199

1


ಒಬ್ಬ ರಾಜನಿಗೆ ಪರದೇಶದಲ್ಲಿದ್ದ ಅವನ ಸ್ನೇಹಿತನೊಬ್ಬ ಅತ್ಯಂತ ಸುಂದರವಾದ ಎರಡು ಗರುಡ ಪಕ್ಷಿಗಳನ್ನು ಕಾಣಿಕೆಯಾಗಿ ಕಳುಹಿಸಿದ. ಅವುಗಳಷ್ಟು ಸುಂದರವಾದ ಪಕ್ಷಿಗಳನ್ನು ರಾಜ ನೋಡಿರಲೇ ಇಲ್ಲ. ಅವುಗಳಿಗೆ ಚೆನ್ನಾಗಿ ತರಬೇತಿ ನೀಡಲೆಂದು ತಮ್ಮ ರಾಜ್ಯದಲ್ಲಿನ ಪಕ್ಷಿ ತರಬೇತುದಾರನಿಗೆ ಅವನ್ನು ಒಪ್ಪಿಸಿದ. ಪ್ರತಿದಿನ ಅವುಗಳ ವಿವರ ತನಗೆ ದೊರಕುವಂತೆ ಆಜ್ಞೆ ನೀಡಿದ.

2


ತರಬೇತುದಾರ ತರಬೇತಿ ಆರಂಭಿಸಿ ಒಂದು ವಾರ ಕಳೆಯಿತು. ತರಬೇತಿದಾರ ದಿನವೂ ವರದಿ ಒಪ್ಪಿಸುತ್ತಿದ್ದ. ಒಂದು ಗರುಡ ಪಕ್ಷಿ ಗಂಭೀರವಾಗಿ ರಾಜಯೋಗದ ಶೈಲಿಯಿಂದ ಹಾರುತ್ತಾ ಇಡೀ ಆಕಾಶವನ್ನು ತನ್ನ ತೆಕ್ಕೆಗೆ ತೆಗೆದುಕೊಂಡಿತ್ತು.ಅದು ರೆಕ್ಕೆಯನ್ನು ಬಿಚ್ಚಿ ಹಾರಾಡಿತು. ಆದರೆ, ಎರಡನೆಯ ಪಕ್ಷಿಯ ಬಗ್ಗೆ ವರದಿ ನಿರಾಶಾದಾಯಕವಾಗಿತ್ತು. ಅದು ಹಾರಲು ಪ್ರಯತ್ನಿಸುತ್ತಲೇ ಇರಲಿಲ್ಲ. ಏನೆಲ್ಲಾ ಪುಸಲಾಯಿಸಿದರೂ ಆಸೆ ತೋರಿಸಿದರೂ, ಹೆದರಿಸಿದರೂ ಅದು ತಾನು ಕುಳಿತ ಮರದ ಕೊಂಬೆಯನ್ನು ಬಿಟ್ಟು ಕದಲುತ್ತಿರಲಿಲ್ಲ. ರಾಜ ತನ್ನ ಅರಮನೆಯ ಕಿಟಕಿಯಿಂದ ಅದನ್ನು ಗಮನಿಸುತ್ತಲೇ ಇದ್ದ.

3


ರಾಜನಿಗೆ ಗರುಡ ಪಕ್ಷಿಯ ಬಗ್ಗೆ ಚಿಂತೆಯಾಗಿ ಮತ್ತೊಬ್ಬ ತರಬೇತುದಾರನನ್ನು ನೇಮಿಸಿದ. ಆದರೂ ಪರಿಣಾಮ ಮಾತ್ರ ಒಂದೇ ಇತ್ತು. ಏನು ಮಾಡಿದರೂ ಗರುಡ ಕೊಂಬೆ ಬಿಟ್ಟು ಮೇಲೆ ಹಾರಲೇ ಇಲ್ಲ. ಇದರಿಂದ ಚಿಂತಿತನಾದ ರಾಜನು ತನಗೆ ಇದನ್ನು ಕಾಣಿಕೆಯಾಗಿ ಕೊಟ್ಟ ಸ್ನೇಹಿತನನ್ನು ಸಂಪರ್ಕಿಸಿ ಆ ದೇಶದ ವಿಶೇಷ ತರಬೇತುದಾರನನ್ನು ಕರೆಸಿದ. ಅವನೂ ಸಹ ಏನೇನೋ ಪ್ರಯೋಗ ಮಾಡಿದ. ಆದರೆ ಹಕ್ಕಿಗೆ ಹಾರಲು ಮನಸ್ಸಾಗಲೇ ಇಲ್ಲ.

4


ಆಗ ರಾಜ ಮತ್ತೊಂದು ವಿಚಾರ ಮಾಡಿದ. ತನ್ನ ದೇಶದ ಹಳ್ಳಿಗಳಲ್ಲಿನ ಕೆಲವು ರೈತರುಗಳು ಗರುಡವನ್ನು ಸಾಕುವುದು ತಿಳಿದಿತ್ತು. ಮಂತ್ರಿಗಳಿಗೆ ಆದೇಶ ನೀಡಿದ ಅಂಥ ಒಬ್ಬ ಹಿರಿಯ ರೈತನನ್ನು ಕರೆತನ್ನಿ. ಮರುದಿನವೇ ರೈತನೊಬ್ಬ ಹಾಜರಾದ. ಅವನಿಗೆ ಎಲ್ಲಾ ವಿಷಯವನ್ನು ಸವಿಸ್ತಾರವಾಗಿ ತಿಳಿಸಿದ ರಾಜ, ಹೇಗಾದರೂ ಮಾಡಿ ಗರುಡ ಪಕ್ಷಿ ಹಾರಲು ಅನುವು ಮಾಡುವಂತೆ ವಿನಂತಿಸಿಕೊಂಡ. ಈಗಾಗಲೇ ಸೋತ ದೇಶ–ವಿದೇಶಗಳ ತರಬೇತುದಾರರು ಮುಸಿಮುಸಿ ನಕ್ಕರು. ತಮ್ಮಂತಹ ಪರಿಣಿತರಿಗೇ ಸಾಧ್ಯವಾಗದ್ದು.. ಈ ರೈತನಿಂದ ಹೇಗಾದೀತು ಎಂದು ಕೈ ತಟ್ಟಿ ನಕ್ಕರು.

5


ಮರು ದಿನ ಕಿಟಕಿಯ ಹತ್ತಿರ ನಿಂತ ರಾಜನಿಗೆ ಆಶ್ಚರ್ಯ ಕಾದಿತ್ತು. ಮೊದಲನೆಯ ಗರುಡ ಆಕಾಶಕ್ಕೆ ಹಾರಿದ ಮರುಕ್ಷಣವೇ ಎರಡನೆಯ ಹಾರಲೊಲ್ಲದ ಗರುಡ ಪಕ್ಷಿಯೂ ಕೂಡ ಆಕಾಶಕ್ಕೆ ನೆಗೆದಿತ್ತು. ತನ್ನ ವಿಶಾಲವಾದ ರೆಕ್ಕೆಗಳನ್ನು ಹರಡಿಕೊಂಡು ನಿಜವಾದ ಬಾನಿನ ರಾಜನಂತೆ ಮೈದುಂಬಿ ಹಾರುತಿತ್ತು. ರಾಜ ಸಂತೋಷದಿಂದ ಕೂಗಿದ "ಈ ಪವಾಡ ಮಾಡಿದ ರೈತನನ್ನು ತಕ್ಷಣ ಕರೆತನ್ನಿ... !".

6


ತಕ್ಷಣ ರೈತ ಬಂದು ಕೈಜೋಡಿಸಿ ನಿಂತುಕೊಂಡ. ರಾಜ, "ಈ ಅಸಾಧ್ಯವಾದ ಪವಾಡವನ್ನು ನೀನು ಹೇಗೆ ಮಾಡಿದೆ...? ಅದೂ ಒಂದೇ ಕ್ಷಣದಲ್ಲಿ...?" ಎಂದು ಕೇಳಿದ. ರೈತ ನಿಧಾನವಾಗಿ ಹೇಳಿದ "ನಾನು ಏನೂ ಮಾಡಲಿಲ್ಲ ಪ್ರಭು....! ಗರುಡ ಕುಳಿತಿದ್ದ ಮರದ ಕೊಂಬೆಯನ್ನು ಕತ್ತರಿಸಿಬಿಟ್ಟೆ ಅಷ್ಟೇ.....!" ಎಂದ.

ನೀತಿ ನಮ್ಮಲ್ಲಿ ಬಹಳಷ್ಟು ಜನರ ಪರಿಸ್ಥಿತಿ ಕೂಡ ಎರಡನೆಯ ಗರುಡ ಪಕ್ಷಿಯ ಹಾಗೆ... ನಮ್ಮಲ್ಲಿ ಅಪರಿಮಿತವಾದ ಸಾಮರ್ಥ್ಯವಿದೆ... ಆದರೆ ನಾವು ಭಯದಿಂದಲೋ, ಭದ್ರತೆಯ ಚಿಂತೆಯಿಂದಲೋ....ಇರುವುದಕ್ಕೇ ಅಂಟಿಕೊಂಡು ಕುಳಿತಿದ್ದೇವೆ.

ತಾಲೂಕುಗಳಲ್ಲಿ ಯುವ ಜನತಾದಳ ಕಾರ್ಯಾಗಾರ



ಮೈಸೂರು, ಜೂ.18(ಎಂಕೆ)– ಜೆಡಿಎಸ್ ಪಕ್ಷ ಸಂಘಟನೆ ಹಿನ್ನಲೆ ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ಯುವಜನತಾದಳದ ಕಾರ್ಯಾಗಾರ ನಡೆಸಲು ನಿರ್ಧರಿಸಲಾಯಿತು.

ನಗರದ ಶೇಷಾದ್ರಿ ಅಯ್ಯರ್ ರಸ್ತೆಯಲ್ಲಿರುವ ಜೆಡಿಎಸ್ ಕಚೇರಿಯಲ್ಲಿ ಯುವಜನತಾದಳದ ಜಿಲ್ಲಾಧ್ಯಕ್ಷ ಗಂಗಾಧರ್‌ಗೌಡ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಕಾರ್ಯಾಗಾರ ನಡೆಸುವ ಕುರಿತು ಚರ್ಚಿಸಲಾಯಿತು. ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಜೆಡಿಎಸ್ ಅಧಿಕಾರಕ್ಕೆ ಬರಬೇಕಾದರೆ ಯುವಕರು ಪಕ್ಷ ಸಂಘಟನೆಯಲ್ಲಿ ಸಕ್ರೀಯವಾಗಿ ತೊಡಗಿಕೊಳ್ಳಬೇಕಾಗಿದೆ. ಈ ನಿಟ್ಟಿನಲ್ಲಿ ಕಾರ್ಯಾಗಾರ ನಡೆಸುವುದು ಸೂಕ್ತ ಎಂದು ತಿರ್ಮಾನಕ್ಕೆ ಬರಲಾಯಿತು. ಯುವಜನತಾದಳ ಸಾಮಾಜಿಕ ಜಾಲತಾಣ ವಿಭಾಗ ಜಿಲ್ಲಾಧ್ಯಕ್ಷ ಯೋಗೇಶ್ ಪ್ರಸಾದ್, ಚಾಮುಂಡೇಶ್ವರಿ ಕ್ಷೇತ್ರದ ಪ್ರಧಾನ ಕಾರ್ಯದರ್ಶಿ ವಿನೋದ್ ನಾಯಕ್, ಗೊರವನಹಳ್ಳಿ ನಾಗರಾಜು, ಕಾರ್ಮಿಕ ಘಟಕದ ಅಧ್ಯಕ್ಷ ಸಿದ್ದೇಶ್ವರ್, ಜಿಲ್ಲಾ ವಕ್ತಾರ ನಾಗವರ್ಧನ ಮತ್ತಿತರರು ಉಪಸ್ಥಿತರಿದ್ದರು.

ಅಗ್ನಿಪಥ್ ಯೋಜನೆ ಕೈಬಿಡಲು ಆಗ್ರಹಿಸಿ ಪ್ರತಿಭಟನೆ



ಮೈಸೂರು, ಜೂ.18(ಪಿಎಂ)– ಸೇನಾ ನೇಮಕಾತಿಯ ಅಗ್ನಿಪಥ್ ಯೋಜನೆಯಲ್ಲಿ ಉದ್ಯೋಗ ಭದ್ರತೆ ಇಲ್ಲ ಎಂದು ಆರೋಪಿಸಿ ಹಾಗೂ ಸದರಿ ಯೋಜನೆ ಕೈಬಿಡುವಂತೆ ಒತ್ತಾಯಿಸಿ ಆಲ್ ಇಂಡಿಯಾ ಡೆಮಾಕ್ರೆಟಿಕ್ ಯೂತ್ ಆರ್ಗನೈಸೇಷನ್ (ಎಐಡಿವೈಓ) ವತಿಯಿಂದ ಶನಿವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ಜಯಚಾಮರಾಜ ಒಡೆಯರ್ ವೃತ್ತದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು, ಅಗ್ನಿಪಥ್ ಯೋಜನೆ ಉದ್ಯೋಗ ಭದ್ರತೆಗೆ ಪೆಟ್ಟು ನೀಡುತ್ತದೆ. ನಿರುದ್ಯೋಗ ಸಮಸ್ಯೆ ಪರಿಹರಿಸಲು ಸರ್ಕಾರ ಶ್ರಮ ವಹಿಸುತ್ತಿದೆ ಎಂದು ಬಿಂಬಿಸಿ, ಯುವ ಜನರನ್ನು ವಂಚಿಸುವ ತಂತ್ರವೇ ಈ ಅಗ್ನಿಪಥ್ ಯೋಜನೆ ಎಂದು ದೂರಿದರು.

ಅಗ್ನಿಪಥ್ ಯೋಜನೆಯಲ್ಲಿ 4 ವರ್ಷ ರಕ್ಷಣಾ ಪಡೆಯಲ್ಲಿ ಕಾರ್ಯ ನಿರ್ವಹಿಸಿದ ನಂತರ ನಾಗರಿಕ ಸಮಾಜಕ್ಕೆ ಕಾಲಿಡುವ ಈ ಯುವಕರ ಜೀವನ ದುಸ್ತರವಾಗಲಿದೆ. ರಕ್ಷಣಾ ಪಡೆಯಲ್ಲಿ ಲಕ್ಷಕ್ಕೂ ಮಿಗಿಲಾಗಿ ಹುದ್ದೆಗಳು ಖಾಲಿ ಇದ್ದರೂ ಪೂರ್ಣ ಪ್ರಮಾಣದಲ್ಲಿ ಯುವಕರನ್ನು ಖಾಯಂ ಆಗಿ ನೇಮಕ ಮಾಡಿಕೊಳ್ಳಲು ಸರ್ಕಾರ ಆಸಕ್ತಿ ತೋರಿಸುತ್ತಿಲ್ಲ ಎಂದು ಆರೋಪಿಸಿದರು. ಇದೇ ವೇಳೆ ಅಗ್ನಿಪಥ್ ಯೋಜನೆಯ ಪ್ರತಿ ಸುಡುವ ಮೂಲಕ ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು. ಸಂಘಟನೆಯ ಮುಖಂಡರಾದ ಸುಮಾ, ಚಂದ್ರಕಲಾ, ನೀತು, ಶ್ರೀಧರ್, ಪರಮೇಶ್, ಹನುಮಂತು, ಮೋನಿಷಾ, ಚಂದ್ರಿಕಾ, ಸ್ವಾತಿ, ಚಂದನ, ಹೇಮಂತ್ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ರೋಹಿತ್ ಚಕ್ರತೀರ್ಥ ಬಂಧನಕ್ಕೆ ಆಗ್ರಹಿಸಿ ಪ್ರತಿಭಟನೆ



ಮೈಸೂರು, ಜೂ.18(ಪಿಎಂ)–ಪಠ್ಯ ಪುಸ್ತಕ ಪರಿಷ್ಕರಣೆ ಸಮಿತಿ ಅಧ್ಯಕ್ಷ ರೋಹಿತ್ ಚಕ್ರತೀರ್ಥ ನಾಡು–ನುಡಿ ಮತ್ತು ನಾಡಿನ ಮಹನೀಯರ ಬಗ್ಗೆ ಅವಹೇಳನ ಮಾಡಿದ್ದಾರೆ ಎಂದು ಆರೋಪಿಸಿ ಹಾಗೂ ಅವರನ್ನು ಬಂಧಿಸಬೇಕು ಎಂದು ಒತ್ತಾಯಿಸಿ ಮೈಸೂರು–ಚಾಮರಾಜನಗರ ಒಕ್ಕಲಿಗರ ಸಂಘ, ಜಿಲ್ಲಾ ಒಕ್ಕಲಿಗರ ಯುವ ವೇದಿಕೆ ಮತ್ತು ನಮ್ಮೂರು–ನಮ್ಮೊರು ಸಮಾಜ ಸೇವಾ ಟ್ರಸ್ಟ್ ಸಂಯುಕ್ತಾಶ್ರಯದಲ್ಲಿ ಶನಿವಾರ ಪ್ರತಿಭಟನೆ ನಡೆಸಲಾಯಿತು. ಮೈಸೂರು ಜಿಲ್ಲಾಧಿಕಾರಿ ಕಚೇರಿ ಎದುರು ಜಮಾಯಿಸಿದ ಪ್ರತಿಭಟನಾಕಾರರು, ಆತನ ನೇತೃತ್ವದಲ್ಲಿ ಪರಿಷ್ಕರಣೆಗೊಂಡಿರುವ ಪಠ್ಯ ರದ್ದುಗೊಳಿಸಬೇಕು ಎಂದು ಒತ್ತಾಯಿಸಿದರು. ಒಕ್ಕಲಿಗರ ಸಂಘದ ಅಧ್ಯಕ್ಷ ಮರಿಸ್ವಾಮಿ, ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ಸಿ.ಜಿ.ಗಂಗಾಧರ್, ಟ್ರಸ್ಟ್ ಅಧ್ಯಕ್ಷ ಸತೀಶ್‌ಗೌಡ, ಮುಖಂಡ ತೇಜೇಶ್ ಲೋಕೇಶ್‌ಗೌಡ, ಯುವ ವೇದಿಕೆ ಅಧ್ಯಕ್ಷ ರಾಜಕುಮಾರ್, ಮುಖಂಡರಾದ ಯಮುನಾ, ಸುಶೀಲ ನಂಜಪ್ಪ, ರವಿ, ಸಂತೋಷ್ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಅಗ್ನಿಪಥ್ ವಿರೋಧಿಸಿ ದೇಶಾದ್ಯಂತ ಉಗ್ರ ಪ್ರತಿಭಟನೆ

ಸೇನಾ ಮುಖ್ಯಸ್ಥರೊಂದಿಗೆ ರಾಜನಾಥ್ ಸಿಂಗ್ ಸಭೆ


ನವದೆಹಲಿ: ಭಾರತೀಯ ಸೇನೆಗೆ ಈ ವರ್ಷ 17 ರಿಂದ 23 ವರ್ಷದೊಳಗಿನ 46,000 ಯುವಕರನ್ನು ನೇಮಿಸಿಕೊಳ್ಳಲು ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಅಗ್ನಿಪಥ್ ಯೋಜನೆ ವಿರುದ್ಧ ದೇಶಾದ್ಯಂತ ವ್ಯಾಪಕ ಪ್ರತಿಭಟನೆ ನಡೆಯುತ್ತಿರುವ ಹಿನ್ನೆಲೆಯಲ್ಲಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಶನಿವಾರ ಮೂರು ಸೇನಾಪಡೆಗಳ ಮುಖ್ಯಸ್ಥರೊಂದಿಗೆ ತುರ್ತು ಸಭೆ ನಡೆಸಿದರು.

ಕಳೆದ ಮೂರು ದಿನಗಳಿಂದ ದೇಶದ ಹಲವು ಭಾಗಗಳಲ್ಲಿ ಯುವಜನರಿಂದ ತೀವ್ರ ಪ್ರತಿಭಟನೆಗಳು ನಡೆದಿದ್ದು, ಪ್ರತಿಪಕ್ಷಗಳು ಯೋಜನೆಯನ್ನು ಹಿಂಪಡೆಯುವಂತೆ ಸರ್ಕಾರವನ್ನು ಒತ್ತಾಯಿಸಿವೆ. ಶನಿವಾರ ಆಲ್ ಇಂಡಿಯಾ ಸ್ಟೂಡೆಂಟ್ಸ್ ಅಸೋಸಿಯೇಟೆಡ್ 24 ಗಂಟೆಗಳ ಬಿಹಾರ ಬಂದ್‌ಗೆ ಕರೆ ನೀಡಿದ್ದು, ಪ್ರತಿಭಟನೆಯ ಕೇಂದ್ರಬಿಂದುವಾಗಿದೆ. ತೀವ್ರ ಪ್ರತಿಭಟನೆ ಹಿನ್ನೆಲೆಯಲ್ಲಿ ರಕ್ಷಣಾ ಸಚಿವರು ಇಂದು ಭೂಸೇನೆ, ವಾಯುಪಡೆ ಮತ್ತು ನೌಕಾಪಡೆಗಳ ಮುಖ್ಯಸ್ಥರೊಂದಿಗೆ ಸಭೆ ನಡೆಸಿದ್ದಾರೆ.

ಸಭೆಯಲ್ಲಿ ವಾಯುಪಡೆ ಮುಖ್ಯಸ್ಥ ಏರ್ ಚೀಫ್ ಮಾರ್ಷಲ್ ವಿಆರ್ ಚೌಧರಿ, ನೌಕಾಪಡೆ ಮುಖ್ಯಸ್ಥ ಅಡ್ಮಿರಲ್ ಆರ್ ಹರಿಕುಮಾರ್ ಮತ್ತು ಸೇನಾಪಡೆಯ ಉಪ ಮುಖ್ಯಸ್ಥ ಜನರಲ್ ಬಿಎಸ್ ರಾಜು ಅವರು ಭಾಗವಹಿಸಿದ್ದರು. ಸೇನಾ ಮುಖ್ಯಸ್ಥ ಜನರಲ್ ಮನೋಜ್ ಪಾಂಡೆ ಅವರು ಅಧಿಕೃತ ಪ್ರವಾಸದ ಮೇಲೆ ಹೈದರಾಬಾದ್‌ನಲ್ಲಿರುವ ಕಾರಣ ಸಭೆಗೆ ಹಾಜರಾಗಲು ಸಾಧ್ಯವಾಗಿಲ್ಲ.

'ಅಗ್ನಿಪಥ' ಯೋಜನೆಯನ್ನು ತ್ವರಿತವಾಗಿ ಜಾರಿಗೊಳಿಸುವುದು ಮತ್ತು ಪ್ರತಿಭಟನಾಕಾರರನ್ನು ಸಮಾಧಾನಪಡಿಸುವ ಮಾರ್ಗಗಳನ್ನು ಖಚಿತಪಡಿಸಿಕೊಳ್ಳುವುದು ಈ ಸಭೆಯ ಪ್ರಮುಖ ಉದ್ದೇಶವಾಗಿದೆ ಎಂದು ತಿಳಿದುಬಂದಿದೆ.

ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆ



ಮೈಸೂರು, ಜೂ.18– ಮೈಸೂರಿನ ಟೆರಿಷೇಯನ್ ಕಾಲೇಜ್‌ನ ವಿದ್ಯಾರ್ಥಿನಿ ಎಸ್. ನಿಖಿತ ಪಿಯುಸಿ ವಿಜ್ಞಾನ ವಿಭಾಗದ ಪರೀಕ್ಷೆಯಲ್ಲಿ 600ಕ್ಕೆ 577 ಅಂಕ(96.1%) ಗಳೊಂದಿಗೆ ಉತ್ತೀರ್ಣಳಾಗಿದ್ದಾಳೆ. ಕನ್ನಡದಲ್ಲಿ 98, ಇಂಗ್ಲಿಷ್ 94, ಭೌತಶಾಸ್ತ್ರ 95, ರಸಾಯನ ಶಾಸ್ತ್ರ 100, ಗಣಿತ 100, ಜೀವಶಾಸ್ತ್ರ 90 ವಿಷಯಗಳಲ್ಲಿ ಅಂಕಗಳನ್ನು ಗಳಿಸಿದ್ದಾಳೆ. ಈಕೆ ಮೈಸೂರಿನ ಸಾತಗಳ್ಳಿ ಗ್ರಾಮದ ಶಿವಸ್ವಾಮಿ ಮತ್ತು ರಾಜೇಶ್ವರಿ ದಂಪತಿ ಪುತ್ರಿ.

ಪ್ರಧಾನಿ ನರೇಂದ್ರ ಮೋದಿ ಆಗಮನದ ಹಿನ್ನೆಲೆ

ಮೈಸೂರಲ್ಲಿ ಭಾರತೀಯ ಸೇನೆಯ ವಿಧ್ವಂಸಕ ನಿಷ್ಕ್ರಿಯ ದಳ ಪ್ರದಕ್ಷಿಣೆ



● ಪ್ರಧಾನಿ ಕಾರ್ಯಕ್ರಮಗಳ ಸ್ಥಳ ಪರಿಶೀಲನೆ ● ವೈಮಾನಿಕ ಸಮೀಕ್ಷೆ ಮೂಲಕ ಕಣ್ಗಾವಲು ● ಸ್ಫೋಟಕ ಪತ್ತೆ ಹಚ್ಚುವ ಪರಿಕರದೊಂದಿಗೆ ಸಜ್ಜಾದ ತಂಡ ● ಭಾರತೀಯ ವಾಯುಸೇನೆ ಹೆಲಿಕಾಪ್ಟರ್‌ನಲ್ಲಿ ಆಗಮನ

ಮೈಸೂರು,ಜೂ.18(ಎಂಟಿವೈ)– ಸಾಂಸ್ಕೃತಿಕ ನಗರಿ ಮೈಸೂರಿಗೆ ಎರಡು ದಿನದ ಪ್ರವಾಸಕ್ಕೆಂದು ಪ್ರಧಾನಿ ನರೇಂದ್ರ ಮೋದಿ ಆಗಮಿಸುತ್ತಿರುವ ಹಿನ್ನೆಲೆಯಲ್ಲಿ ಶನಿವಾರ ಭಾರತೀಯ ಸೇನೆಯ ವಿಧ್ವಂಸಕ ನಿಷ್ಕ್ರಿಯ ದಳ ಶನಿವಾರ ಮೈಸೂರಿಗೆ ಆಗಮಿಸಿತು.

ಪ್ರಧಾನಿ ನರೇಂದ್ರ ಮೋದಿ ಮೈಸೂರಿಗೆ ಆಗಮಿಸಲು ಕೇವಲ 48 ಗಂಟೆ ಬಾಕಿಯಿದ್ದು, ಮೈಸೂರಲ್ಲಿ ಎಸ್‌ಜಿಪಿ ಮತ್ತು ಎನ್‌ಎಸ್‌ಜಿ ತಂಡದಿಂದ ಭದ್ರತಾ ಪರಿಶೀಲನೆ ಚುರುಕುಗೊಳ್ಳಲಿದೆ. ಜೂ.20ಕ್ಕೆ ಮೈಸೂರಿಗೆ ಪ್ರಧಾನಿ ನರೇಂದ್ರ ಮೋದಿ ಆಗಮಿಸುವ ಹಿನ್ನೆಲೆಯಲ್ಲಿ ಕಾರ್ಯಕ್ರಮಗಳು ನಡೆಯುವ ಸ್ಥಳವನ್ನು ಸ್ಪೆಷಲ್ ಪ್ರೊಟೆಕ್ಷನ್ ಗ್ರೂಪ್(ಎಸ್‌ಪಿಜಿ) ಹಾಗೂ ನ್ಯಾಷನಲ್ ಸೆಕ್ಯುರಿಟಿ ಗಾರ್ಡ್ಸ್ (ಎನ್‌ಎಸ್‌ಜಿ) ವಶಕ್ಕೆ ಪಡೆಯಲಿದೆ. ಇದರ ಅಂಗವಾಗಿ ಬಾಂಬ್ ಪತ್ತೆ ದಳ, ಶ್ವಾನ ದಳ ಸೇರಿದಂತೆ ಇನ್ನಿತರ ಭದ್ರತಾ ಏಜೆನ್ಸಿಗಳ ತಪಾಸಣಾ ಕಾರ್ಯ ಚುರುಕುಗೊಂಡಿದ್ದು, ಅದರೊಂದಿಗೆ ವಿಧ್ವಂಸಕ ನಿಷ್ಕ್ರಿಯ ದಳವೂ ಸೇರಿಕೊಂಡಿದೆ.


ಭಾರತೀಯ ಸೇನೆಯ ವಿಧ್ವಂಸಕ ನಿಷ್ಕ್ರಿಯ ದಳದ 8 ಮಂದಿ ಸಿಬ್ಬಂದಿಗಳನ್ನು ಹೊತ್ತು ಬಂದ ಭಾರತೀಯ ವಾಯು ಸೇನೆಗೆ ಸೇರಿದ ಝುಡ್‌ಎಂ 2887 ಹೆಸರಿನ ಬೃಹತ್ ಹೆಲಿಕಾಪ್ಟರ್ ಮೈಸೂರು ವಿಶ್ವವಿದ್ಯಾನಿಲಯದ ಓವೆಲ್ ಮೈದಾನದಲ್ಲಿ ಸುರಕ್ಷಿತವಾಗಿ ಲ್ಯಾಂಡ್ ಆಯಿತು. ಇದಕ್ಕೂ ಮುನ್ನ ಮೈಸೂರು ನಗರವನ್ನು ಮೂರು ಪ್ರದಕ್ಷಿಣೆ ಹಾಕಿ ವೈಮಾನಿಕ ಸಮೀಕ್ಷೆ ನಡೆಸಿದ ವಿಧ್ವಂಸಕ ನಿಷ್ಕ್ರಿಯ ದಳ ಸಿಬ್ಬಂದಿಗಳು ಆಗಸದಿಂದಲೇ ಪ್ರಧಾನಿ ನರೇಂದ್ರ ಮೋದಿ ಪಾಲ್ಗೊಳ್ಳುವ ಕಾರ್ಯಕ್ರಮದ ಸ್ಥಳ ಹಾಗೂ ಸುತ್ತಮುತ್ತಲಿನ ಸ್ಥಳಗಳ ಬಗ್ಗೆ ಸಮೀಕ್ಷೆ ನಡೆಸಿದರು.

ಬಳಿಕ ಹೆಲಿಕಾಪ್ಟರ್ ಬೆಂಗಳೂರಿನ ಯಲಹಂಕ ವಾಯುನೆಲೆಗೆ ಪ್ರಯಾಣ ಬೆಳೆಸಿತು. ವಾಯು ಸೇನೆಗೆ ಸೇರಿದ ಝುಡ್‌ಎಂ 2887 ಹೆಲಿಕಾಪ್ಟರ್ 13 ಟನ್ ತೂಕವಿದ್ದು, ಬೃಹತ್ ಗಾತ್ರದ 5 ರೆಕ್ಕೆ ಹೊಂದಿದ್ದು, 3500 ಕೆಜಿ ಭಾರ ಹೊರುವ ಸಾಮರ್ಥ್ಯ ಹೊಂದಿದೆ. ಟರ್ಬೋ ಇಂಜಿನ್ ಹೊಂದಿರುವ ಈ ಹೆಲಿಕಾಪ್ಟರ್ ಗಂಟೆಗೆ 260 ಕಿ.ಮಿ ವೇಗದಲ್ಲಿ ಸಾಗಲಿದೆ. ಅಲ್ಲದೆ, ನಿರಂತರವಾಗಿ 800 ಕಿ.ಮಿ ಕ್ರಮಿಸಬಲ್ಲದ್ದಾಗಿದೆ. 30 ಮಂದಿ ಪ್ರಯಾಣಿಕರನ್ನು ಕರೆದೊಯ್ಯಲು ಆಸನದ ವ್ಯವಸ್ಥೆಯಿದ್ದು, ಭೂಮಿಯಿಂದ 22 ಸಾವಿರ ಅಡಿ ಎತ್ತರದಲ್ಲಿ ಹಾರಡಬಲ್ಲ ಸಾಮರ್ಥ್ಯ ಹೊಂದಿದೆ.

ಇಂದಿನಿಂದ ಪರಿಶೀಲನೆ: ಮೈಸೂರಿಗೆ ಇಂದು ಆಗಮಿಸಿದ ವಿಧ್ವಂಸಕ ನಿಷ್ಕ್ರಿಯ ದಳ ಸಿಬ್ಬಂದಿಗಳು ಶನಿವಾರ ಸಂಜೆ ಪ್ರಧಾನಿ ನರೇಂದ್ರ ಮೋದಿ ಸಂಚರಿಸಲು ಗುರುತಿಸಲ್ಪಟ್ಟ ರಸ್ತೆಗಳಲ್ಲಿ ಸಂಚರಿಸಲಿದ್ದಾರೆ ನಾಳೆ (ಭಾನುವಾರ)ಯಿಂದ ಸ್ಫೋಟಕ ಪತ್ತೆ ಮಾಡುವ ಸಲಕರಣೆಯೊಂದಿಗೆ ತಪಾಸಣೆ ನಡೆಸಲಿದ್ದಾರೆ. ಎರಡು ದಿನಗಳ ಕಾಲ ಕಟ್ಟುನಿಟ್ಟಿನ ತಪಾಸಣೆ ನಡೆಸಿ ಹದ್ದಿನ ಕಣ್ಣಿಡಲಿದ್ದಾರೆ.

ಡಿಜಿ–ಐಜಿಪಿ ಪರಿಶೀಲನೆ: ಪ್ರಧಾನಿ ನರೇಂದ್ರ ಮೋದಿ ಮೈಸೂರು ಪ್ರವಾಸ ಹಿನ್ನೆಲೆಯಲ್ಲಿ ಭದ್ರತೆಯನ್ನು ವೀಕ್ಷಿಸಲು ಇಂದು ಬೆಳಗ್ಗೆ ಮೈಸೂರಿಗೆ ಡಿಜಿ–ಐಜಿಪಿ ಪ್ರವೀಣ್ ಸೂದ್ ಆಗಮಿಸಿದ್ದಾರೆ. ಹೆಲಿಕಾಪ್ಟರ್ ಲ್ಯಾಂಡ್ ಆಗುವ ಓವೆಲ್ ಮೈದಾನ, ವಿಮಾನ ನಿಲ್ದಾಣ, ಅರಮನೆ ಆವರಣ, ಚಾಮುಂಡಿಬೆಟ್ಟದ ರಸ್ತೆ, ಮಹಾರಾಜ ಕಾಲೇಜು ಮೈದಾನದ ಸುತ್ತಮುತ್ತ, ಸುತ್ತೂರು ಮಠದ ರಸ್ತೆ ಸೇರಿದಂತೆ ವಿವಿಧೆಡೆ ಪರಿಶೀಲಿಸಿ ಕೆಲವು ಸಲಹೆ ಸೂಚನೆ ನೀಡಿದರು. ಈ ವೇಳೆ ದಕ್ಷಿಣ ವಲಯದ ಐಜಿಪಿ ಪ್ರವೀಣ್ ಮಧುಕರ್ ಪವಾರ್, ನಗರ ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರಲ್ಲಿ ಪ್ರಧಾನಿಗೆ ಭದ್ರತಾ ವ್ಯವಸ್ಥೆ ಪರಿಶೀಲಿಸಿದ ಪೊಲೀಸ್ ಮಹಾ ನಿರ್ದೇಶಕ ಪ್ರವೀಣ್ ಸೂದ್



ಮೈಸೂರು, ಜೂ. 18(ಆರ್‌ಕೆ)– ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಭೇಟಿ ಹಿನ್ನೆಲೆಯಲ್ಲಿ ಕೈಗೊಂಡಿರುವ ಭದ್ರತಾ ವ್ಯವಸ್ಥೆಯನ್ನು ರಾಜ್ಯ ಪೊಲೀಸ್ ಮಹಾನಿರ್ದೇಶಕ ಪ್ರವೀಣ್ ಸೂದ್ ಇಂದು ಮೈಸೂರಿನಲ್ಲಿ ಪರಿಶೀಲನೆ ನಡೆಸಿದರು.

ಎಸ್‌ಪಿಜಿ ಹಿರಿಯ ಅಧಿಕಾರಿಗಳು ಈಗಾಗಲೇ ಮೈಸೂರಿನಲ್ಲಿ ಬೀಡುಬಿಟ್ಟು, ಪ್ರಧಾನಿಗಳ ಭೇಟಿ ಹಿನ್ನೆಲೆಯಲ್ಲಿ ಕೈಗೊಂಡಿರುವ ಸುರಕ್ಷತಾ ಕ್ರಮಗಳ ಮೇಲ್ವಿಚಾರಣೆ ನಡೆಸಿ, ಅಗತ್ಯ ಸೂಚನೆಗಳನ್ನು ನೀಡುತ್ತಿರುವ ಬೆನ್ನಲ್ಲೇ ರಾಜ್ಯ ಪೊಲೀಸ್ ಮುಖ್ಯಸ್ಥರಾದ ಪ್ರವೀಣ್ ಸೂದ್, ದಕ್ಷಿಣ ವಲಯ ಐಜಿಪಿ ಪ್ರವೀಣ್ ಮಧುಕರ್ ಪವಾರ್, ನಗರ ಪೊಲೀಸ್ ಆಯುಕ್ತ ಡಾ. ಚಂದ್ರಗುಪ್ತ ಹಾಗೂ ಇತರ ಹಿರಿಯ ಪೊಲೀಸ್ ಅಧಿಕಾರಿಗಳೊಂದಿಗೆ ಭದ್ರತಾ ಕ್ರಮಗಳ ಪರಿಶೀಲನೆ ನಡೆಸಿದರು.

ಪ್ರಧಾನಮಂತ್ರಿಗಳು ಭೇಟಿ ನೀಡಿ ವಾಸ್ತವ್ಯ ಹೂಡುವ ಸ್ಥಳ, ಸಂಚರಿಸುವ ಮಾರ್ಗ, ಪಾಲ್ಗೊಳ್ಳಲಿರುವ ಕಾರ್ಯಕ್ರಮಗಳ ಸ್ಥಳಗಳಿಗೆ ಭೇಟಿ ನೀಡಿದ ಅವರು, ಮೈಸೂರು ನಗರ ಪೊಲೀಸ್ ಘಟಕ, ಜಿಲ್ಲಾ ಪೊಲೀಸ್ ಘಟಕದಿಂದ ಮಾಡಿರುವ ಭದ್ರತೆ, ಸುರಕ್ಷತಾ ಕ್ರಮಗಳನ್ನು ವೀಕ್ಷಿಸಿದರಲ್ಲದೆ, ಕೆಲ ಮಾರ್ಪಾಡುಗಳೊಂದಿಗೆ ಸಲಹೆ–ಸೂಚನೆಗಳನ್ನು ನೀಡಿದರು.

ಮಹಾರಾಜ ಕಾಲೇಜು ಮೈದಾನದಲ್ಲಿ ನಿರ್ಮಿಸುತ್ತಿರುವ ಭವ್ಯ ವೇದಿಕೆಯಲ್ಲಿ ಪ್ರಧಾನಿಗಳೊಂದಿಗೆ ಇತರ ಗಣ್ಯರಿಗೆ ಆಸನ, ಧ್ವನಿವರ್ಧಕ, ಆಹ್ವಾನಿತರಿಗೆ ಪ್ರತ್ಯೇಕ ಎನ್‌ಕ್ಲೋಷರ್, ಪ್ರಧಾನಿಗಳ ಆಗಮನ, ನಿರ್ಗಮನ, ಅವರ ವಾಹನ, ಭದ್ರತಾ ವಾಹನಗಳ ನಿಲುಗಡೆ ಸ್ಥಳ, ಸಂಚರಿಸುವ ಮಾರ್ಗದ ರೂಟ್ ಮ್ಯಾಪ್‌ನಂತೆ ಪೊಲೀಸರ ನಿಯೋಜನೆ ಬಗ್ಗೆ ಪೊಲೀಸ್ ಆಯುಕ್ತ ಡಾ. ಚಂದ್ರಗುಪ್ತ ಮಾಹಿತಿ ನೀಡಿದರು.


ನಂತರ ಕ್ರಾಫರ್ಡ್ ಹಾಲ್ ಎದುರಿನ ಓವಲ್ ಮೈದಾನ, ಸ್ಕೌಟ್ಸ್ ಅಂಡ್ ಗೈಡ್ಸ್ ಮೈದಾನಗಳಲ್ಲಿ ವಾಹನ ನಿಲುಗಡೆ ವ್ಯವಸ್ಥೆ, ಸಂಚಾರ ನಿರ್ಬಂಧ ರಸ್ತೆಗಳನ್ನು ವೀಕ್ಷಿಸಿದ ಪ್ರವೀಣ್ ಸೂದ್, ಬಳಿಕ ಯೋಗ ದಿನಾಚರಣೆ ನಡೆಯುವ ಅರಮನೆ ಆವರಣಕ್ಕೆ ತೆರಳಿ ಯೋಗ ಪ್ರದರ್ಶನ, ಪ್ರಧಾನಿ, ಗಣ್ಯರ ವೇದಿಕೆ, ಪ್ರವೇಶ–ನಿರ್ಗಮನ ದ್ವಾರಗಳು, ಭದ್ರತಾ ಮತ್ತು ಕಾನ್ವೇ (ಬೆಂಗಾವಲು) ವಾಹನಗಳ ನಿಲುಗಡೆಗೆ ನಿಗದಿಗೊಳಿಸಿರುವ ಸ್ಥಳಗಳನ್ನೂ ಪರಿಶೀಲಿಸಿದರು.

ಅದೇ ರೀತಿ ದಸರಾ ವಸ್ತುಪ್ರದರ್ಶನ ಮೈದಾನ, ಸುತ್ತೂರು ಮಠ, ಚಾಮುಂಡಿ ಬೆಟ್ಟ, ಲಲಿತಮಹಲ್ ಹೆಲಿಪ್ಯಾಡ್, ನಂಜನಗೂಡು ರಸ್ತೆ, ಮಂಡಕಳ್ಳಿ ವಿಮಾನ ನಿಲ್ದಾಣಗಳಿಗೂ ತೆರಳಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಭೇಟಿಗೆ ಮಾಡಿರುವ ಪೂರ್ವ ಸಿದ್ಧತೆಗಳನ್ನು ಪೊಲೀಸ್ ಮಹಾನಿರ್ದೇಶಕರು ಪರಿಶೀಲಿಸಿದರು.

ರ್‍ಯಾಡಿಸನ್ ಬ್ಲ್ಯೂ ಪ್ಲಾಜಾ ಹೋಟೆಲ್‌ನಲ್ಲಿ ಪ್ರಧಾನಿಗಳು ವಾಸ್ತವ್ಯ ಹೂಡುವ ಮತ್ತು ಮೀಸಲಿರಿಸಿರುವ ಹೆಚ್ಚುವರಿ ಕೊಠಡಿಗಳನ್ನು ಪರಿಶೀಲಿಸಿದ ಅವರು, ಕೇಂದ್ರ ಭದ್ರತಾ ಘಟಕಗಳ ಹಿರಿಯ ಅಧಿಕಾರಿಗಳು ನೀಡಿರುವ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಸೂಚಿಸಿದರಲ್ಲದೆ, ಅದರ ಮೇಲ್ವಿಚಾರಣೆಯನ್ನು ಕಟ್ಟುನಿಟ್ಟಾಗಿ ಮಾಡುವಂತೆ ಅಧೀನ ಪೊಲೀಸ್ ಅಧಿಕಾರಿಗಳಿಗೆ ತಾಕೀತು ಮಾಡಿದರು.

ಮಧ್ಯಾಹ್ನ ಜಿಲ್ಲಾಧಿಕಾರಿ ಡಾ. ಬಗಾದಿ ಗೌತಮ್, ಆಯುಷ್ ಇಲಾಖೆ, ಜಿಲ್ಲಾ ಪಂಚಾಯ್ತಿ, ಮುಡಾ, ಪಾಲಿಕೆ ಅಧಿಕಾರಿಗಳು, ಪೊಲೀಸ್ ಆಯುಕ್ತರು, ಎಸ್ಪಿ ಸೇರಿದಂತೆ ಇನ್ನಿತರ ಉನ್ನತಾಧಿಕಾರಿಗಳೊಂದಿಗೆ ಸಭೆ ನಡೆಸಿದ ಪ್ರವೀಣ್ ಸೂದ್, ಪ್ರಧಾನಿಗಳು ಬಂದು ಮೈಸೂರಿನಿಂದ ತೆರಳುವವರೆಗೂ ಯಾವುದೇ ಗೊಂದಲ, ಲೋಪವಾಗದಂತೆ ಕಟ್ಟೆಚ್ಚರ ವಹಿಸಬೇಕು, ಪ್ರಧಾನಮಂತ್ರಿಗಳ ಕಚೇರಿ, ಎಸ್‌ಪಿಜಿ, ಎನ್‌ಎಸ್‌ಜಿ ಮುಖ್ಯಸ್ಥರ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದು ಸಲಹೆ ನೀಡಿದ್ದಾರೆ.

ಹಿರಿಯ ಬಿಜೆಪಿ ಮುಖಂಡ ಡಾ. ಶಿವಲಿಂಗಯ್ಯ ನಿಧನ



ಬೆಂಗಳೂರು, ಜೂ.18–ಬಿಜೆಪಿ ಹಿರಿಯ ಮುಖಂಡ ಡಾ. ಎಲ್.ಶಿವಲಿಂಗಯ್ಯ (92) ಅವರು ಇಂದು (ಜೂ.18) ಬೆಂಗಳೂರಿನಲ್ಲಿ ನಿಧನರಾದರು. ಲೋಕೋಪಯೋಗಿ ಇಲಾಖೆ ಮುಖ್ಯ ಇಂಜಿನಿಯರಿಂಗ್ ಆಗಿದ್ದ ಇವರು ನಿವೃತ್ತಿ ನಂತರ ಬಿಜೆಪಿ ಸೇರ್ಪಡೆಯಾಗಿ 1991, 1994 ಮತ್ತು 1996ರಲ್ಲಿ ಸತತ ಮೂರು ಬಾರಿ ಚಾಮರಾಜನಗರ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿಯಾಗಿ ವಿ.ಶ್ರೀನಿವಾಸಪ್ರಸಾದ್ ಅವರ ವಿರುದ್ಧ ಸ್ಪರ್ಧಿಸಿದ್ದರು. ಆ ಸಂದರ್ಭದಲ್ಲಿ ಬಿಜೆಪಿ ಸಂಘಟಿಸುವಲ್ಲಿ ಬಹಳ ಪರಿಶ್ರಮ ಪಟ್ಟಿದ್ದರು.

ಶಿಕ್ಷಣ ಕ್ಷೇತ್ರದಲ್ಲಿ ತೊಡಗಿಸಿಕೊಂಡಿದ್ದ ಅವರು, ಆನಂದ ಸೋಷಿಯಲ್ ಅಂಡ್ ಎಜುಕೇಷನಲ್ ಟ್ರಸ್ಟ್, ಡಾ. ಬಿ.ಆರ್.ಅಂಬೇಡ್ಕರ್ ಮೆಡಿಕಲ್ ಕಾಲೇಜು, ಡಾ. ಬಿ.ಆರ್.ಅಂಬೇಡ್ಕರ್ ಡೆಂಟಲ್ ಕಾಲೇಜು, ಡಾ. ಬಿ.ಆರ್. ಅಂಬೇಡ್ಕರ್ ನರ್ಸಿಂಗ್ ಕಾಲೇಜು, ಪಾಂಚಜನ್ಯ ವಿದ್ಯಾಪೀಠ ಎಜುಕೇಷನಲ್ ಟ್ರಸ್ಟ್, ಡಾ. ಅಂಬೇಡ್ಕರ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಸಂಸ್ಥಾಪಕರಾಗಿ, ಅಂಬೇಡ್ಕರ್ ಮೆಮೋರಿಯಲ್ ಸೊಸೈಟಿ, ದೀನ ಸೇವಾ ಸಂಘ ಮತ್ತು ಆನಂದ ಕೋ–ಆಪರೇಟಿವ್ ಬ್ಯಾಂಕ್‌ನ ಸಂಸ್ಥಾಪಕ ಅಧ್ಯಕ್ಷರಾಗಿ ರಾಜ್ಯದಲ್ಲಿ ಹೆಸರುವಾಸಿಯಾಗಿದ್ದರು.

ಮೃತರು ಇಬ್ಬರು ಪುತ್ರರು ಹಾಗೂ ಅಪಾರ ಬಂಧು ವರ್ಗವನ್ನು ಅಗಲಿದ್ದಾರೆ. ನಾಳೆ (ಜೂ.19) ಮಧ್ಯಾಹ್ನ 3 ಗಂಟೆಯವರೆಗೆ ಸದಾಶಿವನಗರದಲ್ಲಿರುವ ನಿವಾಸದಲ್ಲಿ ಸಾರ್ವಜನಿಕ ದರ್ಶನಕ್ಕೆ ಪಾರ್ಥಿವ ಶರೀರವನ್ನು ಇಟ್ಟು, ನಂತರ ಸಂಜೆ 5 ಗಂಟೆಗೆ ರಾಜಾಜಿನಗರದಲ್ಲಿರುವ ಕಲಾ ಫಾರಂನಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ. ವಿಂಟೇಜ್ ಕಾರು ಪ್ರದರ್ಶನದ ಮೂಲಕ ಹೆಸರು ಗಳಿಸಿರುವ ಡಾ. ರವಿಪ್ರಕಾಶ್ ಮೃತರ ಪುತ್ರರಲ್ಲಿ ಒಬ್ಬರು.

ಮರಕ್ಕೆ ಕಾರು ಡಿಕ್ಕಿ: ಇಬ್ಬರು ಸಾವು

ಮೈಸೂರು, ಜೂ.18–ಮರಕ್ಕೆ ಕಾರು ಡಿಕ್ಕಿ ಹೊಡೆದ ಪರಿಣಾಮ ಇಬ್ಬರು ಸಾವನ್ನಪ್ಪಿದ ಘಟನೆ ಮೈಸೂರಿನ ಲಲಿತಾದ್ರಿಪುರ ಗ್ರಾಮದಲ್ಲಿ ಜೂ.16ರ ಸರಿ ರಾತ್ರಿ ಸಂಭವಿಸಿದೆ.

ಮೈಸೂರಿನ ಮಹೇಂದ್ರ ಮತ್ತು ರವಿಕುಮಾರ್ ಅಪಘಾತದಲ್ಲಿ ಮೃತಪಟ್ಟವರಾಗಿದ್ದು, ಇವರು ಜೂ.16ರ ಸರಿ ರಾತ್ರಿ 12.30ರ ಸುಮಾರಿನಲ್ಲಿ ಸ್ನೇಹಿತ ಪ್ರತೀಪ್ ಕುಮಾರ್ ಎಂಬುವರ ಕಾರಿ(ಕೆಎ 10 ಎಂ 5322)ನಲ್ಲಿ ಲಲಿತ ಮಹಲ್ ಹೆಲಿಪ್ಯಾಡ್ ಕಡೆಯಿಂದ ಲಲಿತಾದ್ರಿಪುರದ ಕಡೆ ತೆರಳುತ್ತಿದ್ದಾಗ ಲಲಿತಾದ್ರಿಪುರದ ಸಿದ್ದಪ್ಪಾಜಿ ದೇವಸ್ಥಾನದ ಮುಂದೆ ಇರುವ ಮರಕ್ಕೆ ಕಾರು ಡಿಕ್ಕಿ ಹೊಡೆದಿದೆ. ಇದರಿಂದ ರವಿಕುಮಾರ್ ಸ್ಥಳದಲ್ಲೇ ಮೃತಪಟ್ಟರೆ, ಮಹೇಂದ್ರ ಆಸ್ಪತ್ರೆಗೆ ಸಾಗಿಸುವ ಮಾರ್ಗ ಮಧ್ಯೆ ಮೃತಪಟ್ಟಿದ್ದಾರೆ. ಇದೇ ಕಾರಿನಲ್ಲಿ ಪ್ರಯಾಣಿಸುತ್ತಿದ್ದ ಚಾಮರಾಜನಗರ ತಾಲೂಕು ಕೊತ್ತಲವಾಡಿ ಗ್ರಾಮದ ಸಂತೋಷ್ ಕುಮಾರ್ ಮತ್ತು ಕಾರು ಚಾಲನೆ ಮಾಡುತ್ತಿದ್ದ ಪ್ರತೀಪ್ ಕುಮಾರ್ ಗಾಯಗೊಂಡು, ಮೈಸೂರಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಈ ಸಂಬಂಧ ಸಿದ್ಧಾರ್ಥನಗರ ಸಂಚಾರ ಠಾಣೆ ಪೊಲೀಸರು ಪ್ರತೀಪ್ ಕುಮಾರ್ ವಿರುದ್ಧ ದೂರು ದಾಖಲಿಸಿಕೊಂಡು, ತನಿಖೆ ಮುಂದುವರೆಸಿದ್ದಾರೆ.



ಮೈಸೂರಿನ ರಾಜೇಂದ್ರ ನಗರದಲ್ಲಿರುವ ಆಲ್ ಇಂಡಿಯಾ ಟ್ರೆಡಿಷನಲ್ ಸ್ಪೋರ್ಟ್ಸ್ ಮತ್ತು ಕರಾಟೆ ಅಸೋಸಿಯೇಷನ್ ವತಿಯಿಂದ ಏರ್ಪಡಿಸಲಾಗಿದ್ದ ಕರಾಟೆ ಬ್ಲಾಕ್ ಬೆಲ್ಟ್ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಕ್ಯೋಶಿ ಸುನೀಲ್ ಕುಮಾರ್ ಬ್ಲಾಕ್ ಬೆಲ್ಟ್ ಮತ್ತು ಪ್ರಮಾಣ ಪತ್ರ ವಿತರಿಸಿದರು. ಈ ಪರೀಕ್ಷೆಯನ್ನು ರೆನ್‌ಶೀ ಲೋಕೇಶ್ ಏರ್ಪಡಿಸಿದ್ದರು.

'ಪ್ರಾಣಿಗಳ ನೋವನ್ನು ಅನುಭವಿಸಿ' ಅಣಕು ಪ್ರದರ್ಶನ

ಮೈಸೂರು, ಜೂ.18(ಜಿಎ)– ಭಾರತದಾದ್ಯಂತ 15 ನಗರಗಳಲ್ಲಿ ವಿಗನ್ ಇಂಡಿಯಾ ಮೂವ್ಮೆಂಟ್ ಸ್ವಯಂ ಸೇವಕರು ಬೀದಿಗಿಳಿದು ವಿಶ್ವದ ಅತ್ಯಂತ ನಿರ್ಲಕ್ಷಿತ ಬಲಿಪಶುಗಳು– ಪ್ರಾಣಿಗಳು ಎಂದು ಅಣಕು ಪ್ರದರ್ಶನ ಮಾಡುವ ಮೂಲಕ ಜನರಲ್ಲಿ ಜಾಗೃತಿ ಮೂಡಿಸಿದ್ದರು.

ಮೈಸೂರಿನ ಚಿಕ್ಕ ಗಡಿಯಾರದ ಆವರಣದಲ್ಲಿ ವಿಗನ್ ಇಂಡಿಯಾ ಮೂವ್ಮೆಂಟ್ ವತಿಯಿಂದ ಆಯೋಜಿಸಿದ್ದ, 'ಪ್ರಾಣಿಗಳ ನೋವನ್ನು ಅನುಭವಿಸಿ' ಎಂಬ ವಿಶೇಷ ಜಾಗೃತಿ ಕಾರ್ಯಕ್ರಮದಲ್ಲಿ ಮೈಸೂರು ಮತ್ತು ಬೆಂಗಳೂರಿನ ಪ್ರಾಣಿ ಹಕ್ಕುಗಳ ಕಾರ್ಯಕರ್ತರು ಭಾಗವಹಿಸಿ ಪಂಜರದ ಒಳಗೆ ಪ್ರಾಣಿಗಳು ಹೇಗೆ ಜೀವಿಸುತ್ತದೆ ಹಾಗೂ ಅವುಗಳ ಕಷ್ಟಗಳೇನು ಎಂಬುದರ ಬಗ್ಗೆ ಶನಿವಾರ ಸಂಜೆ ಸಾರ್ವಜನಿಕರಿಗೆ ಜಾಗೃತಿ ಮೂಡಿಸಿದರು. ಪ್ರಾಣಿಗಳೊಂದಿಗೆ ಸಮಯ ಕಳೆದ ಯಾರಿಗಾದರೂ ತಿಳಿದಿದೆ, ಪ್ರತಿ ಪ್ರಾಣಿಯು ನಮ್ಮಂತೆಯೇ ಮಾನವ ವ್ಯಕ್ತಿತ್ವವನ್ನು ಹೊಂದಿದೆ. ಅವು ನಮ್ಮಂತೆಯೇ ತಮ್ಮ ಕುಟುಂಬ, ಸ್ವಾತಂತ್ರ್ಯ ಮತ್ತು ಜೀವನವನ್ನು ಗೌರವಿಸುತ್ತವೆ. ಆದರೂ, ನಾವು ಪ್ರಾಣಿಗಳನ್ನು ಅದರ ಪ್ರೀತಿಪಾತ್ರರಿಂದ ಬೇರ್ಪಡಿಸುತ್ತೇವೆ, ಅವುಗಳ ಸ್ವಾತಂತ್ರ್ಯವನ್ನು ಕಸಿದುಕೊಳ್ಳುತ್ತೇವೆ



ಮತ್ತು ಅವುಗಳ ದೇಹವನ್ನು ವಿರೂಪಗೊಳಿಸುತ್ತೇವೆ. ಪ್ರತಿ ದಿನ, ಗಂಟೆ ಮತ್ತು ನಿಮಿಷ, ಪ್ರಾಣಿಗಳು ಯಾವುದೇ ಮಾನವ ಉದ್ದೇಶಪೂರ್ವಕವಾಗಿ ಬೆಂಬಲಿಸದ ಭಯಾನಕತೆಗೆ ಒಳಗಾಗುತ್ತವೆ ಎಂದು ತಿಳಿಸಿದರು. ಈ ವೇಳೆ ಅಮ್ಜೋರ್, ನಿತಿನ್ ಜೈನ್, ದಿಲೀಪ್, ಸುನಿಲ್, ಅನುರಾಗ್, ಅಭಿಷೇಕ್ ಅನನ್ಯ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಮಾಜಿ ಸಿಎಂ ಸಿದ್ದರಾಮಯ್ಯರೊಂದಿಗೆ ಚರ್ಚಿಸಲು ಸಂಸದ ಪ್ರತಾಪ್ ಸಿಂಹ ಅರ್ಹರಲ್ಲ

ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೇ ಚರ್ಚೆ ವ್ಯವಸ್ಥೆ ಮಾಡಲಿ

ಸಂಸದರಿಗೆ ಶೋಷಿತ ಸಮುದಾಯದ ಮುಖಂಡರ ಸವಾಲು

ಮೈಸೂರು,ಜೂ.18(ಪಿಎಂ)– ಅಭಿವೃದ್ಧಿ ಕಾರ್ಯಗಳ ಸಂಬಂಧ ತಮ್ಮೊಂದಿಗೆ ಚರ್ಚೆಗೆ ಬರುವಂತೆ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಸಂಸದ ಪ್ರತಾಪ್ ಸಿಂಹ ಆಹ್ವಾನಿಸಿರುವುದು ಹಾಸ್ಯಾಸ್ಪದ. ಸಿದ್ದರಾಮಯ್ಯ ಅವರೊಂದಿಗೆ ಚರ್ಚಿಸಲು ಪ್ರತಾಪ್ ಸಿಂಹ ಅರ್ಹರಲ್ಲ. ಬೇಕಿದ್ದರೆ ಅವರ ಪಕ್ಷದ ವರಿಷ್ಠರೂ ಆದ ಪ್ರಧಾನಿ ನರೇಂದ್ರ ಮೋದಿಯವರೊಂದಿಗೆ ಚರ್ಚಿಸಲು ಸಿದ್ದರಾಮಯ್ಯರನ್ನು ಕರೆತರುತ್ತೇವೆ. ಇದಕ್ಕೆ ಪ್ರತಾಪ್ ಸಿಂಹ ಸಿದ್ಧರಿದ್ದಾರಾ ಎಂದು ಶೋಷಿತ ಸಮುದಾಯದ ಮುಖಂಡರು ಸವಾಲು ಹಾಕಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಸಿದ್ದರಾಮಯ್ಯನವರು ಮುಖ್ಯಮಂತ್ರಿ ಆಗಿದ್ದ ಅವಧಿಯಲ್ಲಿ ಅವರು ಮೈಸೂರು ನಗರಕ್ಕೆ ನೀಡಿರುವ ಅಭಿವೃದ್ಧಿ ಕಾರ್ಯಗಳ ವಿವರ ಒಳಗೊಂಡ ಕಿರು ಹೊತ್ತಿಗೆ ಬಿಡುಗಡೆಗೊಳಿಸಿ, ಪ್ರತಾಪ್ ಸಿಂಹ ಅವರಿಗೆ ಈ ಸವಾಲು ಹಾಕಿದರು.

ಸಿದ್ದರಾಮಯ್ಯ ತಮ್ಮ ಆಡಳಿತಾವಧಿಯಲ್ಲಿ ಮೈಸೂರು ನಗರಕ್ಕೆ 3,600 ಕೋಟಿ ರೂ.ಗಳ ಅಭಿವೃದ್ಧಿ ಕಾರ್ಯ ಮಾಡಿದ್ದಾರೆ. ಇದನ್ನು ದಾಖಲೆಸಹಿತ ಸಾಬೀತು ಪಡಿಸಲು ನಾವು ಸಿದ್ಧವಿದ್ದೇವೆ. ಪ್ರತಾಪ್ ಸಿಂಹ ನಮ್ಮೊಂದಿಗೆ ಚರ್ಚೆಗೆ ಬರಲಿ. ಸಿದ್ದರಾಮಯ್ಯ ಅವರೊಂದಿಗೆ ಚರ್ಚಿಸುವಷ್ಟು ಅರ್ಹತೆಯನ್ನು ಪ್ರತಾಪ್ ಸಿಂಹ ಹೊಂದಿಲ್ಲ ಎಂದು ಪ್ರತಿಪಾದಿಸಿದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಶೋಷಿತ ಸಮುದಾಯದ ಮುಖಂಡರು ಸಿದ್ದರಾಮಯ್ಯನವರು ಸಿಎಂ ಆಗಿದ್ದ ಅವಧಿಯಲ್ಲಿ ಮೈಸೂರು ನಗರಕ್ಕೆ ನೀಡಿದ ಅಭಿವೃದ್ಧಿ ಕಾರ್ಯಗಳ ಕಿರುಹೊತ್ತಿಗೆ ಬಿಡುಗಡೆ ಮಾಡಿದರು.

ಮಾಜಿ ಮೇಯರ್ ಅನಂತು ಮಾತನಾಡಿ, ಸಿದ್ದರಾಮಯ್ಯ ಅವರನ್ನು ಏಕವಚನದಲ್ಲಿ ಸಂಬೋಧಿಸಿ ಚರ್ಚೆಗೆ ಬರುವಂತೆ ಪ್ರತಾಪ್ ಸಿಂಹ ಆಹ್ವಾನ ನೀಡಿದ್ದಾರೆ. ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಅವರು ಚರ್ಚೆಗೆ ಆಹ್ವಾನ ನೀಡಿದ್ದಾಗ, ಇದೇ ಪ್ರತಾಪ್ ಸಿಂಹ ಬರಲಿಲ್ಲ. ಮೈಸೂರು ನಗರದ ಬಗ್ಗೆಯೇ ಸರಿಯಾಗಿ ಗೊತ್ತಿಲ್ಲದ ಇವರು ಮೈಸೂರು ಮತ್ತು ರಾಜ್ಯದ ಅಭಿವೃದ್ಧಿಗೆ ಕೊಡುಗೆ ನೀಡಿದ ಸಿದ್ದರಾಮಯ್ಯರ ಬಗ್ಗೆ ಲಘುವಾಗಿ ಮಾತನಾಡುತ್ತಿದ್ದಾರೆ ಎಂದು ಕಿಡಿಕಾರಿದರು.

ಕಾಂಗ್ರೆಸ್ ನಗರ ಪ್ರಧಾನ ಕಾರ್ಯದರ್ಶಿ ಮತ್ತು ನಗರ ಪಾಲಿಕೆ ಮಾಜಿ ಸದಸ್ಯ ಎಂ.ಶಿವಣ್ಣ ಮಾತನಾಡಿ,

> "2019ರ ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಸಂಸದ ಪ್ರತಾಪ್ ಸಿಂಹ ವೈಯಕ್ತಿಕ ವಿಚಾರ ಸಂಬಂಧ ಕೋರ್ಟ್‌ನಿಂದ ತಡೆಯಾಜ್ಞೆ ತಂದಿದ್ದಾರೆ. ತಡೆಯಾಜ್ಞೆ ತೆರವುಗೊಂಡರೆ ಅದು ಏನಿರಬಹುದೆಂದು ಎಲ್ಲರಿಗೂ ಗೊತ್ತಾಗಲಿದೆ.
> -ಮಾಜಿ ಮೇಯರ್ ಅನಂತು


ಪ್ರತಾಪ್ ಸಿಂಹ 8 ವರ್ಷಗಳಲ್ಲಿ ಸಂಸದರಾಗಿ ತಾವು ಮಾಡಿರುವ ಅಭಿವೃದ್ಧಿ ಕಾರ್ಯಗಳ ಬಗ್ಗೆ ಶ್ವೇತಪತ್ರ ಹೊರಡಿಸಬೇಕು. ಅವರದೇ ಪಕ್ಷದ ಪಾಲಿಕೆ ಸದಸ್ಯರು ಇವರನ್ನು ಚಿಲ್ಲರೆ ರಾಜಕಾರಣಿ ಎಂದು ಕರೆಯುತ್ತಾರೆ ಎಂದು ಪ್ರತಾಪ್ ಸಿಂಹ ವಿರುದ್ಧ ಕಿಡಿಕಾರಿದರಲ್ಲದೆ, ಸಿದ್ದರಾಮಯ್ಯ ಅವರ ಬಗ್ಗೆ ಮಾತನಾಡುವಷ್ಟು ಎತ್ತರಕ್ಕೆ ನೀವು ಬೆಳೆದಿಲ್ಲ ಎಂದು ಛೇಡಿಸಿದರು.

ನಗರ ಪಾಲಿಕೆ ಮಾಜಿ ಸದಸ್ಯ ಸುನೀಲ್ ಮಾತನಾಡಿ, ಪ್ರತಾಪ್ ಸಿಂಹ ತಮ್ಮ ವರಿಷ್ಠರನ್ನು ಮೆಚ್ಚಿಸಲು ಹೊರಟಿದ್ದಾರೆ. ತಾವು ಮೋದಿಯವರನ್ನು ಮೈಸೂರಿಗೆ ಕರೆ ತಂದ ಹಿನ್ನೆಲೆಯಲ್ಲಿ ರಸ್ತೆಗಳು ಅಭಿವೃದ್ಧಿಯಾಗುತ್ತಿವೆ. ಅದಕ್ಕಾಗಿ ಮೈಸೂರಿಗರು ತಮಗೆ ಧನ್ಯವಾದ ಹೇಳಬೇಕು ಎಂದು ಹೇಳಿಕೊಂಡಿದ್ದಾರೆ. ಅವರಿಗೆ ನಾಚಿಕೆಯಾಗಬೇಕು ಎಂದು ಖಂಡಿಸಿದರು. ಪಾಲಿಕೆ ಸದಸ್ಯ ಜೆಗೋಪಿ, ಮಾಜಿ ಸದಸ್ಯ ಸುನಂದ ಕುಮಾರ್, ಮುಖಂಡ ಅಕ್ಬರ್ ಗೋಷ್ಠಿಯಲ್ಲಿದ್ದರು.

ಇಂದು ಜೆಡಿಎಸ್ ಬೃಹತ್ ಸಮಾವೇಶ

● ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರಿಂದ ಉದ್ಘಾಟನೆ ● ವಸ್ತು ಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಅಬ್ದುಲ್ ಅಜ್ಜೀಜ್ ನೇತೃತ್ವದಲ್ಲಿ ಅಬ್ದುಲ್ ಖಾದರ್ ಶಾಹಿದ್ ಸೇರಿದಂತೆ ನೂರಾರು ಮಂದಿ ಪಕ್ಷ ಸೇರ್ಪಡೆ

ಮೈಸೂರು,ಜೂ.18(ಪಿಎಂ)– ಮೈಸೂರಿನ ಬನ್ನಿಮಂಟಪದ



ಜೋಡಿ ತೆಂಗಿನ ಮರ ರಸ್ತೆಯ ಮೈದಾನದಲ್ಲಿ ಜೂ.19ರಂದು ಹಮ್ಮಿಕೊಂಡಿರುವ ಬೃಹತ್ ಜೆಡಿಎಸ್ ಸಮಾವೇಶದಲ್ಲಿ ನೂರಾರು ಮಂದಿ ಪಕ್ಷಕ್ಕೆ ಸೇರ್ಪಡೆಯಾಗುತ್ತಿದ್ದಾರೆ ಎಂದು ಪಕ್ಷದ ಮುಖಂಡರೂ ಆದ ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಅಬ್ದುಲ್ ಅಜ್ಜೀಜ್ (ಅಬ್ದುಲ್ಲಾ) ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಸಂಜೆ 4ಕ್ಕೆ ಸಮಾವೇಶ ಮತ್ತು ಪಕ್ಷ ಸೇರ್ಪಡೆ ಕಾರ್ಯಕ್ರಮ ನಡೆಯಲಿದ್ದು, ಎನ್ಆರ್ ಮತ್ತು ಚಾಮರಾಜ ಕ್ಷೇತ್ರದ ಕಾಂಗ್ರೆಸ್ ಮತ್ತು ಬಿಜೆಪಿ ಮುಖಂಡರು, ಕಾರ್ಯಕರ್ತರು ಜೆಡಿಎಸ್ ಸೇರ್ಪಡೆಗೊಳ್ಳಲಿದ್ದಾರೆ. ಇದರಲ್ಲಿ ಕಾಂಗ್ರೆಸ್‌ನಲ್ಲಿರುವ ಅಲ್ಪಸಂಖ್ಯಾತರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ ಎಂದು ಹೇಳಿದರು.

ಈ ಪೈಕಿ ನಗರ ಪಾಲಿಕೆ ಮಾಜಿ ಸದಸ್ಯರು, ಪಾಲಿಕೆ ಸದಸ್ಯ ಸ್ಥಾನಕ್ಕೆ ಸ್ಪರ್ಧಿಸಿ ಪರಾಭವಗೊಂಡಿರುವವರೂ ಸೇರಿದ್ದಾರೆ. ಎನ್ಆರ್ ಕ್ಷೇತ್ರದ ಮಾಜಿ ಕಾಂಗ್ರೆಸ್ ಮುಖಂಡ ಅಬ್ದುಲ್ ಖಾದರ್ (ಶಾಹಿದ್) ಅವರು ಕಾಂಗ್ರೆಸ್‌ನಲ್ಲಿರುವ ತಮ್ಮ ಅಪಾರ ಬೆಂಬಲಿಗರೊಂದಿಗೆ ಜೆಡಿಎಸ್ ಸೇರ್ಪಡೆಗೊಳ್ಳಲಿದ್ದಾರೆ ಎಂದರು.

ಸಿ.ಎಂ.ಇಬ್ರಾಹಿಂ ಅವರು ಜೆಡಿಎಸ್ ಅಧ್ಯಕ್ಷರಾದ ಬಳಿಕ ರಾಜ್ಯಾದ್ಯಂತ ಪಕ್ಷವನ್ನು ಬಲಗೊಳಿಸಲು ಕ್ರಮ ಕೈಗೊಂಡಿರುವ ಪರಿಣಾಮ ನಗರದಲ್ಲಿ ನೂರಾರು ಮಂದಿ ಪಕ್ಷ ಸೇರ್ಪಡೆಯಾಗುತ್ತಿದ್ದಾರೆ. ಮಾಜಿ ಪ್ರಧಾನಿಗಳೂ ಆದ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಹೆಚ್.ಡಿ.ದೇವೇಗೌಡ ಸಮಾವೇಶ ಉದ್ಘಾಟಿಸಲಿದ್ದಾರೆ. ಪಕ್ಷದ ರಾಜ್ಯಾಧ್ಯಕ್ಷ ಸಿ.ಎಂ.ಇಬ್ರಾಹಿಂ ಅಧ್ಯಕ್ಷತೆ ವಹಿಸಲಿದ್ದು, ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಉಪಸ್ಥಿತರಿರುವರು ಎಂದರು.

ಜೆಡಿಎಸ್ ನಗರಾಧ್ಯಕ್ಷ ಕೆ.ಟಿ.ಚೆಲುವೇಗೌಡ ಮಾತನಾಡಿ, ಅಬ್ದುಲ್ ಅಜ್ಜೀಜ್ (ಅಬ್ದುಲ್ಲಾ) ಅವರ ನೇತೃತ್ವದಲ್ಲಿ ಈ ಬೃಹತ್ ಕಾರ್ಯಕ್ರಮ ನಡೆಯುತ್ತಿದೆ. ಮುಂದಿನ ದಿನಗಳಲ್ಲಿ ಇನ್ನು ಹೆಚ್ಚಿನ ಸಂಖ್ಯೆಯಲ್ಲಿ ಪಕ್ಷವನ್ನು ಸೇರ್ಪಡೆಯಾಗುವ ನಿರೀಕ್ಷೆ ಇದೆ ಎಂದರಲ್ಲದೆ, ದಕ್ಷಿಣ ಪದವೀಧರರ ಕ್ಷೇತ್ರದಿಂದ ಪರಿಷತ್ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿ ಹೆಚ್.ಕೆ.ರಾಮು ಅವರಿಗೆ ಮತ ನೀಡುವ ಮೂಲಕ ಬೆಂಬಲಿಸಿದ ಪದವೀಧರ ಮತದಾರರಿಗೆ ಧನ್ಯವಾದ ತಿಳಿಸಿದರು. ಜಿಲ್ಲಾಧ್ಯಕ್ಷ ನರಸಿಂಹಸ್ವಾಮಿ, ಪಾಲಿಕೆ ಸದಸ್ಯೆ ಪ್ರೇಮಾ ಶಂಕರೇಗೌಡ, ಪಕ್ಷದ ಮುಖಂಡರಾದ ಎಂ.ಎನ್.ರಾಮು, ಆರ್.ಮುದ್ದುರಾಜ್ ಮತ್ತಿತರರು ಗೋಷ್ಠಿಯಲ್ಲಿದ್ದರು.

ನಾಳೆ ಸಂಜೆ ಮೈಸೂರಿಗೆ ಪ್ರಧಾನಿ ಮೋದಿ

ಮೈಸೂರು, ಜೂ. 18(ಆರ್‌ಕೆ)– ಅಂತರರಾಷ್ಟ್ರೀಯ ಯೋಗ ದಿನಾಚರಣೆ ಸೇರಿದಂತೆ ಹಲವು ಕಾರ್ಯ



ಕ್ರಮಗಳಲ್ಲಿ ಪಾಲ್ಗೊಳ್ಳಲು ಪ್ರಧಾನ ಮಂತ್ರಿ ನರೇಂದ್ರ ಮೋದಿ ಜೂನ್ 20ರಂದು ಮೈಸೂರಿಗೆ ಆಗಮಿಸುವರು. ಸೋಮವಾರ ಸಂಜೆ 4 ಗಂಟೆಗೆ ಬೆಂಗಳೂರಿನ ಬಿಎ ಎಸ್‌ಇ ಹೆಲಿಪ್ಯಾಡ್‌ನಿಂದ ಎಂಐ–17 ಹೆಲಿಕಾಪ್ಟರ್‌ನಲ್ಲಿ 4.50ಕ್ಕೆ ಮೈಸೂರಿನ ಲಲಿತ ಮಹಲ್ ಹೆಲಿಪ್ಯಾಡ್‌ಗೆ ಆಗಮಿಸಿ ರಸ್ತೆ ಮೂಲಕ ಕಾರಿನಲ್ಲಿ ಮಹಾರಾಜ ಕಾಲೇಜು ಮೈದಾನದಲ್ಲಿ ನಡೆಯಲಿರುವ ಕೇಂದ್ರ ಮತ್ತು ರಾಜ್ಯ ಸರ್ಕಾರಿ ಪುರಸ್ಕೃತ ಯೋಜನೆಗಳ ಫಲಾನುಭವಿಗಳೊಂದಿಗೆ ಸಂವಾದ ಕಾರ್ಯಕ್ರಮದಲ್ಲಿ ಸಂಜೆ 5 ಗಂಟೆಗೆ ಭಾಗವಹಿಸುವರು. ಆಯಿಷ್‌ನಲ್ಲಿ ನಿರ್ಮಿಸಿರುವ ಉತ್ಕೃಷ್ಟತಾ ಕೇಂದ್ರ (Centre of Excellence)ದ ಕಟ್ಟಡವನ್ನು ಅದೇ ಕಾರ್ಯಕ್ರಮದಲ್ಲಿ ಉದ್ಘಾಟಿಸಲಿರುವ ಅವರು, ಮೈಸೂರು ಮತ್ತು ನಾಗನಹಳ್ಳಿ ರೈಲು ನಿಲ್ದಾಣಗಳ ಯಾರ್ಡ್ (ಅಂಗಳ) ಪುನರ್ ನಿರ್ಮಾಣ ಕಾಮಗಾರಿಗಳಿಗೂ ಶಿಲಾನ್ಯಾಸ ನೆರವೇರಿಸುವರು.

ನಂತರ ಸಂಜೆ 6.30 ಗಂಟೆಗೆ ಚಾಮುಂಡಿಬೆಟ್ಟದ ತಪ್ಪಲಿನ ಸುತ್ತೂರು ಮಠಕ್ಕೆ ತೆರಳಿ ಜೆಎಸ್‌ಎಸ್ ಸಂಸ್ಕೃತ ಪಾಠಶಾಲೆ, ವಿದ್ಯಾರ್ಥಿನಿಲಯದ ನೂತನ ಕಟ್ಟಡ ಉದ್ಘಾಟಿಸಲಿರುವ ಪ್ರಧಾನಿಗಳು, ಕೃತಿಗಳ ಬಿಡುಗಡೆ ಮಾಡುವರು. ರಾತ್ರಿ 7.30 ಗಂಟೆಗೆ ಚಾಮುಂಡಿಬೆಟ್ಟಕ್ಕೆ ತೆರಳಿ ತಾಯಿ ಚಾಮುಂಡೇಶ್ವರಿ ದರ್ಶನ ಪಡೆಯಲಿರುವ ಅವರು, ರಾತ್ರಿ 8.10 ಗಂಟೆಗೆ ನಜರ್‌ಬಾದ್‌ನ ರ್ಯಾಡಿಸನ್ ಬ್ಲ್ಯೂ ಪ್ಲಾಜಾ ಹೋಟೆಲ್‌ನಲ್ಲಿ ವಾಸ್ತವ್ಯ ಹೂಡುವರು. ಮರುದಿನ (ಜೂ. 21) ಬೆಳಗ್ಗೆ 6.30 ಗಂಟೆಗೆ ಮೈಸೂರು ಅರಮನೆ ಆವರಣದಲ್ಲಿ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ವ್ಯವಸ್ಥೆ ಮಾಡಲಾಗಿರುವ ಸಾಮೂಹಿಕ ಯೋಗ ಪ್ರದರ್ಶನದಲ್ಲಿ ಭಾಗ ವಹಿಸಿ, ಸ್ವತಃ ಯೋಗ ಪ್ರದರ್ಶನ ಮಾಡುವರು. ನಂತರ ಬೆಳಗ್ಗೆ 8 ಗಂಟೆಗೆ ದಸರಾ ವಸ್ತುಪ್ರದರ್ಶನ ಮೈದಾನಕ್ಕೆ ತೆರಳಿ ಯೋಗ ವಸ್ತುಪ್ರದರ್ಶನ ವೀಕ್ಷಿಸಿದ ನಂತರ ಬೆಳಗ್ಗೆ 8.30 ಗಂಟೆಗೆ ಅರಮನೆಯಲ್ಲಿ ರಾಜಮನೆತನ ಕುಟುಂಬದ ಸದಸ್ಯರೊಂದಿಗೆ ಉಪಹಾರ ಸೇವಿಸುವರು.

ಬೆಳಗ್ಗೆ 9 ಗಂಟೆಗೆ ಅರಮನೆಯಿಂದ ಹೊರಟು ರಸ್ತೆ ಮೂಲಕ ಮಂಡಕಳ್ಳಿ ವಿಮಾನ ನಿಲ್ದಾಣ ತಲುಪುವ ಪ್ರಧಾನ ಮಂತ್ರಿಗಳು, ಬೆಳಗ್ಗೆ 9.25 ಗಂಟೆಗೆ ಭಾರತೀಯ ವಾಯು ಪಡೆಯ ವಿಶೇಷ ವಿಮಾನದಲ್ಲಿ ಕೇರಳದ ತಿರುವನಂತಪುರಂಗೆ ಪ್ರಯಾಣ ಬೆಳೆಸುವರು. ಪ್ರಧಾನಮಂತ್ರಿಗಳು ಆಗಮಿಸಿ ನಿರ್ಗಮಿಸುವವರೆಗೂ ಮೈಸೂರಿನಲ್ಲಿ ಭದ್ರತೆ, ಸುರಕ್ಷತೆಗಾಗಿ ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಂಡಿದ್ದು, ಸಿದ್ಧತಾ ಕಾರ್ಯ ಪೂರ್ಣಗೊಳಿಸಲಾಗಿದೆ. ಅವರೊಂದಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕೇಂದ್ರ ಸಂಸದೀಯ ವ್ಯವಹಾರ ಸಚಿವ ಪ್ರಹ್ಲಾದ್ ಜೋಷಿ, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಕಾರ್ಯಕ್ರಮಗಳಲ್ಲಿ ಭಾಗವಹಿಸುವರು.

ಪ್ರಧಾನಿ ಮೋದಿ ಪಾಲ್ಗೊಳ್ಳುವ ಕಾರ್ಯಕ್ರಮಗಳ ಸಿದ್ಧತಾ ಕಾರ್ಯ ಪರಿಶೀಲಿಸಿದ ಉಸ್ತುವಾರಿ ಸಚಿವ ಸೋಮಶೇಖರ್





ಅರಮನೆ ಆವರಣ ಹಾಗೂ ಜೆಎಸ್‌ಎಸ್ ಮಠದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಸಿದ್ಧತೆಯನ್ನು ಪರಿಶೀಲಿಸಿದರು. ಈ ವೇಳೆ ಸುತ್ತೂರು ಶ್ರೀಗಳು ಹಾಗೂ ಸಂಸದ ಪ್ರತಾಪ್ ಸಿಂಹ, ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್ ಇತರರು ಉಪಸ್ಥಿತರಿದ್ದಾರೆ.

ಮೈಸೂರು, ಜೂ.18(ಎಸ್‌ಬಿಡಿ)– ಪ್ರಧಾನಿ ಮೋದಿ ಅವರು ಭಾಗವಹಿಸಲಿರುವ ಕಾರ್ಯಕ್ರಮಗಳ ಸಿದ್ಧತಾ ಕಾರ್ಯವನ್ನು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಶನಿವಾರ ಪರಿಶೀಲಿಸಿದರು.

ಅರಮನೆ ಆವರಣ, ಮಹಾರಾಜ ಕಾಲೇಜು ಮೈದಾನ, ದಸರಾ ವಸ್ತು ಪ್ರದರ್ಶನ ಆವರಣದಲ್ಲಿ ವೇದಿಕೆ ನಿರ್ಮಾಣ ಸೇರಿದಂತೆ ಎಲ್ಲಾ ರೀತಿಯ ಸಿದ್ಧತಾ ಕಾರ್ಯಗಳ ಪರಿಶೀಲನೆ ನಡೆಸಿದರು. ಬಳಿಕ ಸುತ್ತೂರು ಶಾಖಾ ಮಠಕ್ಕೆ ಭೇಟಿ ನೀಡಿ ಅಲ್ಲಿ ನಡೆಯಲಿರುವ ಕಾರ್ಯಕ್ರಮದ ಸಂಬಂಧ ಶ್ರೀಗಳೊಂದಿಗೆ ಚರ್ಚೆ ನಡೆಸಿದರು. ನಂತರ ಚಾಮುಂಡಿಬೆಟ್ಟಕ್ಕೆ ತೆರಳಿ ಅಲ್ಲಿನ ಸಿದ್ಧತೆ ಬಗ್ಗೆಯೂ ವಿವರ ಪಡೆದರು.

ಈ ನಡುವೆ ಸಚಿವರು ಅರಮನೆ ಮಂಡಳಿ ಸಭಾಂಗಣದಲ್ಲಿ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳೊಂದಿಗೆ ಚರ್ಚೆ ನಡೆಸಿದರು. ಈ ವೇಳೆ ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್, ಸಾಮೂಹಿಕ ಯೋಗ ಪ್ರದರ್ಶನದಲ್ಲಿ ಸುಮಾರು 15 ಸಾವಿರ ಮಂದಿಗೆ ಅವಕಾಶ ಕಲ್ಪಿಸಲಾಗಿದ್ದು, ನಾಲ್ಕು ಗೇಟ್‌ಗಳ ಮೂಲಕ ಅರಮನೆ ಆವರಣ ಪ್ರವೇಶಿಸಬಹುದಾಗಿದೆ. ಗಣ್ಯರಿಗೆ ಪ್ರತ್ಯೇಕ ಪ್ರವೇಶ ಇರಲಿದೆ. ಕ್ಯೂಆರ್ ಕೋಡ್ ಹೊಂದಿರುವ ವಾಹನಗಳನ್ನು ಸ್ಕ್ಯಾನಿಂಗ್ ಮಾಡಿ ನಂತರವಷ್ಟೇ ನಿಗದಿತ ಸ್ಥಳದಲ್ಲಿ ನಿಲುಗಡೆಗೆ ಅವಕಾಶ ಮಾಡಿಕೊಡಲಾಗುತ್ತದೆ ಎಂದು ವಿವರಿಸಿದರು.

ಸಂಸದ ಪ್ರತಾಪ್ ಸಿಂಹ, ಶಾಸಕ ಎಲ್.ನಾಗೇಂದ್ರ, ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್, ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಹೇಮಂತ್‌ಕುಮಾರ್ ಗೌಡ, ಮೈಲ್ಯಾಕ್ ಅಧ್ಯಕ್ಷ ಎನ್.ವಿ.ಫಣೀಶ್, ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ಜಿಪಂ ಸಿಇಓ ಪೂರ್ಣಿಮಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಚೇತನ್, ಅರಮನೆ ಮಂಡಳಿ ಉಪನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ ಮತ್ತಿತರರು ಸಭೆಯಲ್ಲಿ ಉಪಸ್ಥಿತರಿದ್ದರು.

ಈ ವೇಳೆ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಸಚಿವ ಎಸ್.ಟಿ.ಸೋಮ ಶೇಖರ್, ಎಸ್‌ಪಿಜಿ ನಿರ್ದೇಶನದಂತೆ ಯಾವುದೇ ಲೋಪವಾಗದ ರೀತಿಯಲ್ಲಿ ಅಗತ್ಯ ಸಿದ್ಧತೆ ನಡೆಸುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ. ನಾಳೆ(ಜೂ.19) ಅಂತಿಮ ಹಂತದ ಯೋಗ ತಾಲೀಮು ನಡೆಯಲಿದ್ದು, 2 ಕೋವಿಡ್ ಲಸಿಕೆ ಪಡೆದ ಯೋಗ ಪಟುಗಳು ಬೆಳಗ್ಗೆ 5.30ರೊಳಗೆ ಅರಮನೆ ಆವರಣ ಪ್ರವೇಶಿಸಬೇಕು. ಕಳೆದ 10–15 ದಿನ ಮಳೆಯಾಗಿರುವುದನ್ನು ಗಮನಿಸಿದರೆ ಬೆಳಗ್ಗೆ ಮಳೆಯಾಗಿರುವ ನಿದರ್ಶನವಿಲ್ಲ. ಹಾಗಾಗಿ ಜೂ.21ರಂದು ಪ್ರಧಾನಿ ಮೋದಿ ಅವರ ನೇತೃತ್ವದಲ್ಲಿ ನಡೆಯುವ ಸಾಮೂಹಿಕ ಯೋಗ ಪ್ರದರ್ಶನಕ್ಕೆ ಮಳೆ ಅಡ್ಡಿಯಾಗುವ ಸಾಧ್ಯತೆ ಇಲ್ಲ ಎಂದರು.

ಜೂ.21ರ ತನಕ ಅರಮನೆ ಪ್ರವೇಶ ನಿಷಿದ್ಧ

ಮೈಸೂರು, ಜೂ.18(ಎಸ್‌ಬಿಡಿ)– ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಹಿನ್ನೆಲೆಯಲ್ಲಿ ನಾಳೆ(ಜೂ.19)ಯಿಂದ ಜೂ.21ರ ಮಧ್ಯಾಹ್ನ 12ರವರೆಗೆ ಸಾರ್ವಜನಿಕರಿಗೆ ಅರಮನೆ ಪ್ರವೇಶ ನಿರ್ಬಂಧಿಸಲಾಗಿದೆ. ಪ್ರಧಾನಿ ಮೋದಿ ಅವರ ನೇತೃತ್ವದಲ್ಲಿ ಜೂ.21ರಂದು ಸಾಮೂಹಿಕ ಯೋಗ ಪ್ರದರ್ಶನ ನಡೆಯಲಿದ್ದು, ಸಿದ್ಧತಾ ಕಾರ್ಯ ಪ್ರಗತಿಯಲ್ಲಿದೆ. ಅಲ್ಲದೆ ನಾಳೆ(ಜೂ.19) ಅಂತಿಮ ಹಂತದ ಯೋಗ ತಾಲೀಮು ನಡೆಯಲಿದೆ. ಈ ಹಿನ್ನೆಲೆಯಲ್ಲಿ ಜೂ.21ರ ಮಧ್ಯಾಹ್ನ 12ರವರೆಗೆ ತಾತ್ಕಾಲಿಕವಾಗಿ ಪ್ರವೇಶ ನಿರ್ಬಂಧಿಸಲಾಗಿದೆ. ಅರಮನೆ ಆವರಣದಲ್ಲಿ ನಡೆಯಲಿರುವ ಧ್ವನಿ ಮತ್ತು ಬೆಳಕು ಕಾರ್ಯಕ್ರಮ ಜೂ.22ರವರೆಗೂ ಇರುವುದಿಲ್ಲ ಎಂದು ಅರಮನೆ ಮಂಡಳಿ ಉಪನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಂವಾದಕ್ಕೆ 20 ಮಂದಿ ಆಯ್ಕೆ

ಮಹಾರಾಜ ಕಾಲೇಜು ಮೈದಾನದ ವೇದಿಕೆಯಲ್ಲಿ ಜೂ.20ರಂದು ಪ್ರಧಾನಿ ಮೋದಿ ಅವರು ಕೇಂದ್ರ ಸರ್ಕಾರದ ವಿವಿಧ ಯೋಜನೆಗಳ ಫಲಾನುಭವಿಗಳೊಂದಿಗೆ ಸಂವಾದ ನಡೆಸಲಿದ್ದಾರೆ. ವಿವಿಧ ಯೋಜನೆಗಳ ಪ್ರಯೋಜನ ಪಡೆದಿರುವ 20 ಫಲಾನುಭವಿಗಳ ಗುರುತಿಸಲಾಗಿದ್ದು, ಅವರಲ್ಲಿ ಯಾರೊಂದಿಗಾದರೂ ಪ್ರಧಾನಿಯವರು ಸಂವಾದ ನಡೆಸಬಹುದು.

–ಎಸ್.ಟಿ.ಸೋಮಶೇಖರ್, ಜಿಲ್ಲಾ ಉಸ್ತುವಾರಿ ಸಚಿವ

ಕಡಿಮೆ ಬಡ್ಡಿ ದರದಲ್ಲಿ ಸಾಲದ ಆಮಿಷ ತೋರಿ ಖಾಸಗಿ ಕಂಪನಿ ಉದ್ಯೋಗಿಗೆ ಲಕ್ಷ ರೂ. ವಂಚನೆ

ಮೈಸೂರು, ಜೂ.18–ಕಡಿಮೆ ಬಡ್ಡಿ ದರದಲ್ಲಿ ಸಾಲ ನೀಡುವುದಾಗಿ ನಂಬಿಸಿ ಖಾಸಗಿ ಕಂಪನಿ ಉದ್ಯೋಗಿಯೊಬ್ಬರಿಗೆ ಚೆನ್ನೈನ ಸಂಸ್ಥೆಯೊಂದು ಲಕ್ಷ ರೂ. ವಂಚಿಸಿರುವ ಬಗ್ಗೆ ವರದಿಯಾಗಿದೆ.

ವಿವರ: ಬೆಂಗಳೂರಿನ ಡೆನ್ಯೂ ಕಂಪನಿಯಲ್ಲಿ ಪ್ರೋಸೆಸಿಂಗ್ ಎಕ್ಸಿಕ್ಯೂಟಿವ್ ಆಗಿ ಕೆಲಸ ಮಾಡುತ್ತಿರುವ ಟಿ.ಸಿ.ಹರ್ಷಿತ್ (31) ಅವರು ಮೈಸೂರಿನ ಕೆ.ಸಿ.ಲೇಔಟ್‌ನಲ್ಲಿರುವ ತಮ್ಮ ಮನೆಯಲ್ಲಿಯೇ ವರ್ಕ್ ಫ್ರಮ್ ಹೋಂ ಕೆಲಸ ಮಾಡುತ್ತಿದ್ದಾರೆ. ಇವರ ತಾಯಿ ಮೈಸೂರಿನ ಕೋ–ಆಪರೇಟಿವ್ ಸೊಸೈಟಿವೊಂದರಲ್ಲಿ ವಾರ್ಷಿಕ ಶೇ.13ರಂತೆ ಬಡ್ಡಿ ದರದಲ್ಲಿ 56 ಲಕ್ಷ ರೂ. ಸಾಲ ಪಡೆದಿದ್ದು, ಬೇರೆ ಯಾವುದಾದರೂ ಬ್ಯಾಂಕ್‌ನಲ್ಲಿ ಕಡಿಮೆ ಬಡ್ಡಿ ದರದಲ್ಲಿ ಸಾಲ ಸಿಗುವುದೇ ಎಂದು ಹರ್ಷಿತ್ ಗೂಗಲ್‌ನಲ್ಲಿ ಸರ್ಚ್ ಮಾಡಿದ್ದಾರೆ. ಆಗ ಚೆನ್ನೈನ The Block Rock Group ಎಂಬ ಸಂಸ್ಥೆ ಶೇ.3ರ ಬಡ್ಡಿ ದರದಲ್ಲಿ ಸಾಲ ನೀಡುವುದಾಗಿ ತಿಳಿಸಿದ್ದ ಮೇರೆಗೆ ಆ ಸಂಸ್ಥೆಯ ಆಪರೇಷನ್ ಹೆಡ್ ನವೀನ್ ಎಂಬುವರ ಮೊಬೈಲ್‌ಗೆ ಕರೆ ಮಾಡಿ ತಮಗೆ 70 ಲಕ್ಷ ರೂ. ಸಾಲ ಬೇಕೆಂದು ಕೇಳಿದ್ದಾರೆ. ಆದರೆ ನವೀನ್ ತಮ್ಮ ಸಂಸ್ಥೆಯಲ್ಲಿ ಕನಿಷ್ಠ 1 ಕೋಟಿ ರೂ. ಸಾಲ ಪಡೆಯಬೇಕು ಎಂದಾಗ ಅದಕ್ಕೆ ಹರ್ಷಿತ್ ಒಪ್ಪಿದ್ದಾರೆ.

ನವೀನ್ ಸೂಚನೆ ಮೇರೆಗೆ ಕಳೆದ ಮಾರ್ಚ್ 19ರಂದು ಚೆನ್ನೈನ ಸಂಸ್ಥೆಗೆ ತಮ್ಮ ತಾಯಿಯೊಂದಿಗೆ ತೆರಳಿದ ಹರ್ಷಿತ್, ಸಂಸ್ಥೆಯ ನಿರ್ದೇಶಕ ಆದೀರಾ ಶ್ರೀನಿವಾಸನ್ ಅವರನ್ನು ಭೇಟಿ ಮಾಡಿದಾಗ ಅವರು 1 ಕೋಟಿ ರೂ. ಸಾಲಕ್ಕೆ 3 ಲಕ್ಷ ರೂ. ಪ್ರೋಸೆಸಿಂಗ್ ಚಾರ್ಜ್ ಕೊಡಬೇಕಾಗುತ್ತದೆ ಎಂದರು. ಅದರಂತೆ 1 ಲಕ್ಷ ರೂ. ಬ್ಯಾಂಕ್ ಖಾತೆಗೆ ವರ್ಗಾವಣೆ ಮಾಡಿ, ಉಳಿದ 2 ಲಕ್ಷ ರೂ.ಗಳಿಗೆ ಏಪ್ರಿಲ್ 25ರಂದು ಚೆಕ್ ನೀಡಿದ್ದಾರೆ. ಮೇ 12ಕ್ಕೆ ಹರ್ಷಿತ್ ಅವರ ವಿಳಾಸಕ್ಕೆ ಬಂದು ಪರಿಶೀಲನೆ ಮಾಡುವುದಾಗಿ ತಿಳಿಸಿದ್ದ ನವೀನ್, ಮೈಸೂರಿಗೆ ಬಾರದೇ ಇದ್ದಾಗ ಅನುಮಾನಗೊಂಡ ಹರ್ಷಿತ್, ಚೆಕ್ ಅನ್ನು ಬ್ಯಾಂಕ್‌ನಲ್ಲಿ ಹೋಲ್ಡ್ ಮಾಡಿಸಿ, ತಾವು ಪಾವತಿಸಿದ್ದ ಲಕ್ಷ ರೂ. ವಾಪಸ್ ನೀಡುವಂತೆ ಕೇಳಿದಾಗ ನವೀನ್ ಒಂದು ವಾರ ಕಾಲಾವಕಾಶ ಕೇಳಿದ್ದ. ಆನಂತರ ಚೆನ್ನೈನಲ್ಲಿರುವ ತಮ್ಮ ಪರಿಚಯಸ್ಥರಿಗೆ ವಿಷಯ ತಿಳಿಸಿದಾಗ The Block Rock Group ಮುಚ್ಚಲಾಗಿದೆ ಎಂಬ ಮಾಹಿತಿ ದೊರೆತ ಹಿನ್ನೆಲೆಯಲ್ಲಿ ಹರ್ಷಿತ್ ಈ ಸಂಬಂಧ ನಜರ್‌ಬಾದ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ಇಂದು ಕಟ್ಟಡ ನಿರ್ಮಾಣ ಕಾರ್ಮಿಕರ ಜಿಲ್ಲಾ ಸಮ್ಮೇಳನ

ಮೈಸೂರು,ಜೂ.18(ಎಂಟಿವೈ)– ಮೈಸೂರಿನ ಕೆ.ಆರ್.ಮೊಹಲ್ಲಾದ ನಾಲಾಬೀದಿ ಸಮುದಾಯ ಭವನದಲ್ಲಿ ಜೂ.19ರಂದು ಬೆಳಗ್ಗೆ 10.30ಕ್ಕೆ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಒಕ್ಕೂಟದ ಪ್ರಥಮ ಜಿಲ್ಲಾ ಸಮ್ಮೇಳನವನ್ನು ಆಯೋಜಿಸಲಾಗಿದೆ ಎಂದು ಒಕ್ಕೂಟದ ಜಿಲ್ಲಾಧ್ಯಕ್ಷ ವಿ.ಸೋಮಶಂಕರ್ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕೇಂದ್ರ ಹಾಗೂ ರಾಜ್ಯ ಸರ್ಕಾರದ ಕಾರ್ಮಿಕ ವಿರೋಧಿ ನೀತಿ ವಿರುದ್ಧ ಹೋರಾಟ ಮಾಡುವ ಅನಿವಾರ್ಯತೆ ನಿರ್ಮಾಣವಾಗಿದ್ದು, ಸಮ್ಮೇಳನದಲ್ಲಿ ಚರ್ಚಿಸಲಾಗುವುದು. ಸರ್ಕಾರ ಕೂಡಲೇ ಕಟ್ಟಡ ಕಾರ್ಮಿಕ ಕಾನೂನು ಮತ್ತು ಸೆಸ್ ಕಾನೂನು 1996 ಅನ್ನು ಪುನರ್ ಸ್ಥಾಪಿಸಬೇಕು, ಕಟ್ಟಡ ಕಾರ್ಮಿಕ ಕಲ್ಯಾಣ ಮಂಡಳಿಗಳನ್ನು ರಕ್ಷಿಸಬೇಕು. ಕಲ್ಯಾಣ ಮಂಡಳಿಯ ಎಲ್ಲ ಘೋಷಿತ ಸೌಲಭ್ಯಗಳನ್ನು ಜಾರಿಗೊಳಿಸಬೇಕು, ಕೋವಿಡ್ ಹೆಸರಿನಲ್ಲಿ ನಡೆದಿರುವ ಎಲ್ಲ ಖರೀದಿಗಳ ಬಗ್ಗೆ ತನಿಖೆ ನಡೆಸಬೇಕು ಎಂದು ಒತ್ತಾಯಿಸಿದರು. ಗೋಷ್ಠಿಯಲ್ಲಿ ಒಕ್ಕೂಟದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎಚ್.ಎಂ.ಬಸವಯ್ಯ, ಖಜಾಂಚಿ ಎಂ. ಮಂಜುನಾಥ್, ಸಂಚಾಲಕ ಮೆಹಬೂಬ್, ಸಹ ಸಂಚಾಲಕ ಸಿ.ಬಿ.ನವೀನ್‌ಕುಮಾರ್ ಇದ್ದರು.

ಅಪರಿಚಿತ ಸಾವು

ಮೈಸೂರು, ಜೂ.18–ಮೈಸೂರು ತಾಲೂಕು ಲಿಂಗದೇವರಕೊಪ್ಪಲು ಬಳಿಯ ಸೇಂಟ್ ಜೋಸೆಫ್ ಶಾಲೆಯ ಮುಂಭಾಗ ಸಂಭವಿಸಿದ ರಸ್ತೆ ಅಪಘಾತದಲ್ಲಿ ಅಪರಿಚಿತ ವ್ಯಕ್ತಿಯೊಬ್ಬರು ಸಾವನ್ನಪ್ಪಿದ್ದು, ಇಲವಾಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ವಾರಸುದಾರರು 0821–2402222, 9480805046, 9480805031 ಅಥವಾ 2444800 ಮೂಲಕ ಸಂಪರ್ಕಿಸಲು ಕೋರಲಾಗಿದೆ.

ಬೈಕ್ ಡಿಕ್ಕಿ: ಬಿಸಿಎಂ ಹಾಸ್ಟೆಲ್ ಎಸ್‌ಡಿಎ ಸಾವು

ಹಾಸನ, ಜೂ.18–ಬೈಕ್‌ಗೆ ಹಿಂಬದಿಯಿಂದ ಮತ್ತೊಂದು ಬೈಕ್ ಡಿಕ್ಕಿ ಹೊಡೆದ ಪರಿಣಾಮ ಬಿಸಿಎಂ ಹಾಸ್ಟೆಲ್‌ನ ಎಸ್‌ಡಿಎ ಸಾವನ್ನಪ್ಪಿರುವ ಘಟನೆ ಹಾಸನದ ಮಲೆನಾಡು ಇಂಜಿನಿಯರಿಂಗ್ ಕಾಲೇಜು ಮತ್ತು ಆಕಾಶವಾಣಿ ಮಧ್ಯೆ ಸಂಭವಿಸಿದೆ.

ಬಿಸಿಎಂ ಹಾಸ್ಟೆಲ್‌ನ ಎಸ್‌ಡಿಎ ಸಿ.ಎಂ.ಮಲ್ಲಶೆಟ್ಟಿ (55) ಅಪಘಾತದಲ್ಲಿ ಸಾವನ್ನಪ್ಪಿದವರಾಗಿದ್ದು, ಇವರು ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯದ ಪ್ರಭಾರ ಮೇಲ್ವಿಚಾರಕರಾಗಿಯೂ ಕಾರ್ಯ ನಿರ್ವಹಿಸುತ್ತಿದ್ದರು. ಜೂನ್ 16 ರಂದು ಸಂಜೆ 4.45ರ ವೇಳೆ ಇವರು ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯದಿಂದ ಬಿಸಿಎಂ ಹಾಸ್ಟೆಲ್‌ಗೆ ಹೀರೋ ಹೊಂಡಾ ಸ್ಪ್ಲೆಂಡರ್ ಬೈಕ್ (ಕೆಎ 14 ಎಸ್ 0853)ನಲ್ಲಿ ತೆರಳುತ್ತಿದ್ದಾಗ ಹಿಂಬದಿಯಿಂದ ಬಂದ ಬೈಕ್ (ಕೆಎ 46 ಎ 0968) ಇವರ ಬೈಕ್‌ಗೆ ಡಿಕ್ಕಿ ಹೊಡೆದಿದೆ. ತೀವ್ರವಾಗಿ ಗಾಯಗೊಂಡಿದ್ದ ಅವರನ್ನು ಹಾಸನದ ಎಸ್‌ಎಸ್‌ಎಂ ಆಸ್ಪತ್ರೆಗೆ ದಾಖಲಿಸಿದ್ದು, ಚಿಕಿತ್ಸೆ ಫಲಕಾರಿಯಾಗದೇ ಅಂದು ರಾತ್ರಿ 10 ಗಂಟೆ ಸುಮಾರಿನಲ್ಲಿ ಮೃತಪಟ್ಟಿದ್ದಾರೆ. ಈ ಸಂಬಂಧ ಮಲ್ಲಶೆಟ್ಟಿ ಪತ್ನಿ ಲೀಲಾವತಿ ನೀಡಿದ ದೂರನ್ನು ದಾಖಲಿಸಿಕೊಂಡಿರುವ ಹಾಸನ ಸಂಚಾರ ಠಾಣೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.


ಕಸಾಯಿಖಾನೆಗೆ ಸಾಗಿಸುತ್ತಿದ್ದ ಜಾನುವಾರು ರಕ್ಷಣೆ: ಇಬ್ಬರ ಬಂಧನ

ಮೈಸೂರು, ಜೂ.18–ಕಸಾಯಿ ಖಾನೆಗೆ ಸಾಗಿಸುತ್ತಿದ್ದ 9 ಜಾನುವಾರುಗಳನ್ನು ಇಲವಾಲ ಠಾಣೆ ಪೊಲೀಸರು ವಶಪಡಿಸಿಕೊಂಡು, ಇಬ್ಬರನ್ನು ಬಂಧಿಸಿದ್ದಾರೆ.

ಕೆ.ಆರ್.ನಗರ ತಾಲೂಕು ಬೋರೇಗೌಡನ ಕೊಪ್ಪಲು ಗ್ರಾಮದ ಗೂಡ್ಸ್ ವಾಹನದ ಚಾಲಕ ಧನಂಜಯ (26) ಮತ್ತು ಭೇರ್ಯ ಗ್ರಾಮದ ದನದ ವ್ಯಾಪಾರಿ ಮಹಮ್ಮದ್ ಷಫಿ (48) ಬಂಧಿತರಾಗಿದ್ದು, ಪೊಲೀಸರು ದಾಳಿ ನಡೆಸಿದ ವೇಳೆ ಕೆ.ಆರ್.ಪೇಟೆ ಟೌನ್ ಹೊಸ ಹೊಳಲು ಗ್ರಾಮದ ಅಪ್ಪಿ ಅಲಿಯಾಸ್ ಅಪ್ಪು (22) ಪರಾರಿಯಾಗಿದ್ದಾನೆ.

ಇಲವಾಲ ಠಾಣೆ ಪೊಲೀಸರು ಜೂನ್ 17ರ ಮುಂಜಾನೆ ವಾಹನ ತಪಾಸಣೆಯಲ್ಲಿ ತೊಡಗಿದ್ದಾಗ ಕೆ.ಆರ್.ನಗರ ಕಡೆಯಿಂದ ಮೈಸೂರು ಕಡೆಗೆ ಹೊಸಕೋಟೆ ಮಾರ್ಗವಾಗಿ ಚಲಿಸುತ್ತಿದ್ದ ಮಿನಿ ಗೂಡ್ಸ್ ವಾಹನವನ್ನು (ಕೆಎ 09 ಡಿ 6021) ತಡೆದು ತಪಾಸಣೆ ನಡೆಸುವ ವೇಳೆ ಅದರಲ್ಲಿದ್ದ ಅಪ್ಪಿ ಓಡಿ ಹೋಗಿದ್ದು, ಇನ್ನಿಬ್ಬರನ್ನು ಪೊಲೀಸರು ಬಂಧಿಸಿದರು. ವಾಹನದೊಳಗಿದ್ದ ನಾಲ್ಕು ಹಸುವಿನ ಕರುಗಳು, ಒಂದು ಎಮ್ಮೆ ಮತ್ತು ನಾಲ್ಕು ಹಸು ಸೇರಿದಂತೆ 9 ಜಾನುವಾರುಗಳನ್ನು ವಶಪಡಿಸಿಕೊಂಡು ಮೊಕದ್ದಮೆ ದಾಖಲಿಸಿ, ತನಿಖೆ ನಡೆಸುತ್ತಿದ್ದಾರೆ.


ಗೃಹಿಣಿ ನಾಪತ್ತೆ



ಮೈಸೂರು, ಜೂ.18–ಗೃಹಿಣಿಯೋರ್ವರು ನಾಪತ್ತೆಯಾಗಿರುವ ಬಗ್ಗೆ ಮೈಸೂರಿನ ಹೆಬ್ಬಾಳ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಈ ಠಾಣಾ ವ್ಯಾಪ್ತಿಯಲ್ಲಿ ವಾಸವಿರುವ ಪಿ.ಪೊನ್ ಪಾಂಡಿಯನ್ ಎಂಬುವರ ಪತ್ನಿ ಶ್ರೀಮತಿ ವೇದಾವತಿ (42) ಜೂನ್ 16ರಂದು ಸಂಜೆ ಮನೆಯಿಂದ ಹೊರ ಹೋದವರು ಈವರೆಗೂ ವಾಪಸ್ಸಾಗಿಲ್ಲ ಎಂದು ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಲಾಗಿದೆ. ಇವರ ಬಗ್ಗೆ ಮಾಹಿತಿ ಇರುವವರು ಹೆಬ್ಬಾಳ್ ಠಾಣೆ ದೂ.ಸಂಖ್ಯೆ 0821–2418318 ಅಥವಾ ನಗರ ಪೊಲೀಸ್ ಕಂಟ್ರೋಲ್ ರೂಂ 2418339 ಅನ್ನು ಸಂಪರ್ಕಿಸುವಂತೆ ಪೊಲೀಸ್ ಪ್ರಕಟಣೆ ಕೋರಿದೆ.

ಜೂ.22ರವರೆಗೆ ಮೈಸೂರು ಭಾಗದಲ್ಲಿ ಸಾಧಾರಣ ಮಳೆ ಸಾಧ್ಯತೆ

ಮೈಸೂರು, ಜೂ.18(ಆರ್‌ಕೆಬಿ)– ಭಾರತೀಯ ಹವಾ ಮುನ್ಸೂಚನೆ ಪ್ರಕಾರ ಜೂ.18ರಿಂದ 22ರವರೆಗೆ ಮೈಸೂರು, ಕೊಡಗು, ಮಂಡ್ಯ, ಚಾಮರಾಜನಗರ ಜಿಲ್ಲೆಗಳಲ್ಲಿ



ಸಾಧಾರಣ ಮಳೆ ಬೀಳಲಿದೆ. ಈ ಐದು ದಿನಗಳ ಅವಧಿಯಲ್ಲಿ ಮೈಸೂರು ಜಿಲ್ಲೆಯಲ್ಲಿ ಜೂ.18ರಂದು 15, 19ರಂದು 7, ಜೂ.20 ಮತ್ತು 21ರಂದು ತಲಾ 6 ಹಾಗೂ 22ರಂದು 5 ಮಿ.ಮೀ. ಮಳೆಯಾಗಲಿದೆ. ಕೊಡಗು ಜಿಲ್ಲೆಯಲ್ಲಿ ಜೂ.18ರಂದು 15 ಮಿ.ಮೀ., 19ರಂದು 27 ಮಿ.ಮೀ., ಜೂ.20, 21 ಮತ್ತು 22ರಂದು ತಲಾ 15 ಮಿ.ಮೀ. ಮಳೆಯಾಗಲಿದೆ. ಮಂಡ್ಯ ಮತ್ತು ಚಾಮರಾಜನಗರ ಜಿಲ್ಲೆಯಲ್ಲಿ ಜೂ.18ರಂದು ಕ್ರಮವಾಗಿ 18 ಮತ್ತು 17 ಮಿ.ಮೀ., ಉಳಿದ ದಿನಗಳಲ್ಲಿ ಕ್ರಮವಾಗಿ 8, 7, 6 ಮತ್ತು 5 ಮಿ.ಮೀ. ಮಳೆಯಾಗುವ ಸಾಧ್ಯತೆ ಇದೆ. ಈ ಅವಧಿಯಲ್ಲಿ ಉಷ್ಣಾಂಶದಲ್ಲಿ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯಲ್ಲಿ ಗರಿಷ್ಠ 28ರಿಂದ 29 ಡಿಗ್ರಿ ಸೆಲ್ಸಿಯಸ್, ಕನಿಷ್ಠ 21 ಡಿಗ್ರಿ ಸೆಲ್ಸಿಯಸ್, ಕೊಡಗಿನಲ್ಲಿ ಗರಿಷ್ಠ 25, ಕನಿಷ್ಠ 18ರಿಂದ 19 ಡಿಗ್ರಿ ಸೆಲ್ಸಿಯಸ್, ಮಂಡ್ಯ ಜಿಲ್ಲೆಯಲ್ಲಿ ಗರಿಷ್ಠ 28ರಿಂದ 31, ಕನಿಷ್ಠ 21 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ಇರಲಿದೆ ಎಂದು ನಾಗನಹಳ್ಳಿ ಕೃಷಿ ಹವಾಮಾನ ಕ್ಷೇತ್ರ ವಿಭಾಗದ ಅಧಿಕಾರಿಗಳು ತಿಳಿಸಿದ್ದಾರೆ.

ಪ್ಯಾರಿಸ್ ಮಾದರಿ ಮೈಸೂರು ಅಭಿವೃದ್ಧಿ ಹೇಳಿಕೆ ಹಿನ್ನೆಲೆ

ಪ್ರಧಾನಿಯವರು ಅನುದಾನ ಕಲ್ಪಿಸಿದ ಮಾಹಿತಿಗೆ ಆಗ್ರಹಿಸಿ ಇಂದು ಪ್ರತಿಭಟನೆ

ಮೈಸೂರು,ಜೂ.18(ಪಿಎಂ)– ತಮ್ಮ ಆಶ್ವಾಸನೆಯಂತೆ ಮೈಸೂರನ್ನು ಪ್ಯಾರಿಸ್ ಮಾದರಿ ಅಭಿವೃದ್ಧಿಪಡಿಸುವ ಸಂಬಂಧ ನೀಡಿರುವ ಅನುದಾನ ಮತ್ತು ರೂಪಿಸಿರುವ ಯೋಜನೆಗಳ ಬಗ್ಗೆ ಪ್ರಧಾನಿ ನರೇಂದ್ರ ಮೋದಿಯವರು ಮೈಸೂರು ಭೇಟಿ ವೇಳೆ ಮಾಹಿತಿ ನೀಡಬೇಕೆಂದು ಆಗ್ರಹಿಸಿ ಜೂ.19ರಂದು ಎಡ ಪಕ್ಷಗಳು, ರೈತ, ದಲಿತ ಹಾಗೂ ಪ್ರಗತಿಪರ ಸಂಘಟನೆಗಳ ಒಕ್ಕೂಟದಿಂದ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಸಿಪಿಐ ಜಿಲ್ಲಾ ಕಾರ್ಯದರ್ಶಿ ಹೆಚ್.ಬಿ.ರಾಮಕೃಷ್ಣ, ಅಂದು ಬೆಳಗ್ಗೆ 11ಕ್ಕೆ ಮೈಸೂರಿನ ಗಾಂಧಿ ಚೌಕದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ. 2014ರ ಚುನಾವಣೆ ಸಂದರ್ಭದಲ್ಲಿ ಪ್ರಚಾರಕ್ಕಾಗಿ ಮೈಸೂರಿಗೆ ಆಗಮಿಸಿದ್ದ ಮೋದಿಯವರು ಮೈಸೂರನ್ನು ಪ್ಯಾರಿಸ್ ಮಾದರಿ ಅಭಿವೃದ್ಧಿಪಡಿಸುವ ಭರವಸೆ ನೀಡಿದ್ದರು. ಅಂತೆಯೇ ಈ ಬಗ್ಗೆ ಅವರು ಕೈಗೊಂಡಿರುವ ಕ್ರಮಗಳ ಬಗ್ಗೆ ಜನತೆಗೆ ಮಾಹಿತಿ ನೀಡಬೇಕು ಎಂದು ಒತ್ತಾಯಿಸಿದರು. ಅಲ್ಲದೆ, ಮೈಸೂರಿನಲ್ಲಿ ಕೈಗಾರಿಕೆ ಮತ್ತು ಉದ್ಯೋಗಾವಕಾಶಗಳಿಗೆ ಅನುಕೂಲವಾಗುವ ಮೈಸೂರು–ಕುಶಾಲನಗರ ರೈಲು ಮಾರ್ಗ, ಮೈಸೂರು–ಮೆಟ್ಟುಪಾಳ್ಯಂ ರೈಲು ಮಾರ್ಗ, ನಂಜನಗೂಡು–ನೀಲಂಬೂರು ರೈಲು ಮಾರ್ಗ ಯೋಜನೆಗಳು ಯಾವ ಹಂತದಲ್ಲಿದೆ ಎಂದು ತಿಳಿಸಬೇಕು ಎಂದು ಆಗ್ರಹಿಸಿದರು.

ಸೇನಾ ನೇಮಕಾತಿ ಸಂಬಂಧ ಅಗ್ನಿಪಥ ಯೋಜನೆ ಕೈಬಿಡಬೇಕು. ಕಾರ್ಮಿಕ ವಿರೋಧಿಯೂ ಮಾಲೀಕರ ಪರವಾದ ನಾಲ್ಕು ಸಂಹಿತೆಗಳನ್ನು ಹಿಂಪಡೆಯಬೇಕು. ವಿದ್ಯುತ್ ಖಾಸಗೀಕರಣ ಕೈಬಿಡಬೇಕು. ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆ ಜಾರಿಗೊಳಿಸಬೇಕು. ಇಂಧನ ಮತ್ತು ಅಡುಗೆ ಅನಿಲದ ಬೆಲೆ ಇಳಿಸಬೇಕು. ಬಜೆಟ್‌ನಲ್ಲಿ ಪರಿಶಿಷ್ಟ ಜಾತಿ–ಪಂಗಡದ ಅನುದಾನ ಹೆಚ್ಚಳ ಮಾಡಬೇಕು. ನೂತನ ಶಿಕ್ಷಣ ನೀತಿಯನ್ನು ಹಿಂಪಡೆಯಬೇಕು ಎಂದು ಒತ್ತಾಯಿಸಿದರು. ಸ್ವರಾಜ್ ಇಂಡಿಯಾ ಪಕ್ಷದ ಮುಖಂಡ ಉಗ್ರನರಸಿಂಹೇಗೌಡ, ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಜಗದೀಶ್ ಸೂರ್ಯ, ಎಸ್‌ಯುಸಿಐ ಜಿಲ್ಲಾ ಕಾರ್ಯದರ್ಶಿ ರವಿ, ಸದಸ್ಯೆ ಸಂಧ್ಯಾ, ಸಿಪಿಐ(ಎಂಎಲ್) ಜಿಲ್ಲಾ ಕಾರ್ಯದರ್ಶಿ ಚೌಡಳ್ಳಿ ಜವರಯ್ಯ, ಐಎನ್‌ಟಿಯುಸಿ ಜಿಲ್ಲಾಧ್ಯಕ್ಷ ಎಂ.ಅನಿಲ್‌ಕುಮಾರ್ ಗೋಷ್ಠಿಯಲ್ಲಿದ್ದರು.

ಜೂ.25, ಕೆಎಂಡಿ ಜಾಗೃತಿ ಅಭಿಯಾನ ಸಂಬಂಧ ಸಭೆ

ಮೈಸೂರು,ಜೂ.18(ಪಿಎಂ)– ದೇಶ ಮತ್ತು ರಾಜ್ಯದಲ್ಲಿ ಕೋಮು ಸಾಮರಸ್ಯ ಕಾಪಾಡುವ ಮತ್ತು ಅಭಿವೃದ್ಧಿಗೆ ಆದ್ಯತೆ ನೀಡುವ ಆಡಳಿತವನ್ನು ಮುಂಬರುವ ದಿನಗಳಲ್ಲಿ ಸ್ಥಾಪಿಸಲು ಕರ್ನಾಟಕ ರಾಜ್ಯ ಕಾಯಕ ಸಮಾಜಗಳ ಒಕ್ಕೂಟದ ವತಿಯಿಂದ ಕೆಎಂಡಿ (ಕಾಯಕ ಸಮಾಜಗಳು, ಅಲ್ಪಸಂಖ್ಯಾತರು ಮತ್ತು ದಲಿತರು) ಜಾಗೃತಿ ಅಭಿಯಾನ ಆರಂಭಿಸುತ್ತಿದ್ದು, ಈ ಸಂಬಂಧ ಜೂ.25ರಂದು ಚಿಂತಕರ ಸಭೆ ಆಯೋಜಿಸಲಾಗಿದೆ ಎಂದು ಒಕ್ಕೂಟದ ಅಧ್ಯಕ್ಷ ಕೆ.ಸಿ.ಪುಟ್ಟಸಿದ್ದಶೆಟ್ಟಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 11.30ಕ್ಕೆ ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಚಿಂತಕರ ಸಭೆ ಆಯೋಜಿಸಲಾಗಿದೆ. ಈ ಸಭೆಯ ಚರ್ಚೆ ಆಧರಿಸಿ, ಅಭಿಯಾನದ ರೂಪುರೇಷೆ ಸಿದ್ಧಪಡಿಸಲಾಗುವುದು. 'ಬಹುತ್ವ ಮನ್ನಿಸದೇ ಭಾರತಕ್ಕೆ ಭವಿಷ್ಯವಿಲ್ಲ' ಘೋಷವಾಕ್ಯದಡಿ ಈ ಅಭಿಯಾನ ನಡೆಯಲಿದೆ ಎಂದು ಹೇಳಿದರು.

ಇಂದು ದೇಶ ಮತ್ತು ರಾಜ್ಯ ಆಳುತ್ತಿರುವವರು ಬುದ್ಧ, ಬಸವ, ಅಂಬೇಡ್ಕರ್, ಪೆರಿಯರ್ ರಾಮಸ್ವಾಮಿ, ನಾರಾಯಣಗುರು ಅವರನ್ನು ಮರೆತಿದ್ದಾರೆ. ದೇಶದಲ್ಲಿ ಅಭಿವೃದ್ಧಿ ಮರೀಚಿಕೆಯಾಗಿದ್ದು, ದೇವರು–ಧರ್ಮದ ಹೆಸರಿನಲ್ಲಿ ಭಾವನಾತ್ಮಕವಾಗಿ ಜನತೆಯನ್ನು ಕೆರಳಿಸಿ, ಅದನ್ನೇ ಮತವಾಗಿ ಪರಿವರ್ತನೆ ಮಾಡಲು ಪ್ರಯತ್ನಿಸುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಕೆಎಂಡಿ ಜಾಗೃತಿ ಅಭಿಯಾನ ಅಗತ್ಯವಾಗಿದೆ ಎಂದರು.

ಪ್ರತಾಪ್ ಸಿಂಹ ವಿರುದ್ಧ ಕಿಡಿ: ಮಾಜಿ ಸಿಎಂ ಸಿದ್ದರಾಮಯ್ಯ ಅವರ ಬಗ್ಗೆ ಲಘುವಾಗಿ ಮಾತನಾಡುವುದನ್ನು ಸಂಸದ ಪ್ರತಾಪ್ ಸಿಂಹ ಈ ಕೂಡಲೇ ನಿಲ್ಲಿಸಬೇಕೆಂದು ಕೆ.ಸಿ.ಪುಟ್ಟಸಿದ್ದಶೆಟ್ಟಿ ಒತ್ತಾಯಿಸಿದರು. ಪ್ರತಾಪ್ ಸಿಂಹರ ಸಮಾಜಘಾತುಕ ವರ್ತನೆ ವಿರುದ್ಧ ಜಾಗೃತಿ ಮೂಡಿಸಲಿದ್ದೇವೆ. ಮುಂಬರುವ ಚುನಾವಣೆಯಲ್ಲಿ ಅವರನ್ನು ಮೈಸೂರಿನಿಂದ ಗಂಟು ಮೂಟೆ ಕಟ್ಟಿ ಕಳುಹಿಸಲಿದ್ದೇವೆ ಎಂದು ಕಿಡಿಕಾರಿದರು. ಒಕ್ಕೂಟದ ಉಪಾಧ್ಯಕ್ಷ ಎನ್.ಆರ್.ನಾಗೇಶ್, ರಮೇಶ್, ಸಂಪತ್‌ಕುಮಾರ್, ನಂಜುಂಡಸ್ವಾಮಿ ಗೋಷ್ಠಿಯಲ್ಲಿದ್ದರು.

ವಿವಿಧ ಯೋಜನೆ ಫಲಾನುಭವಿಗಳಿಗೆ ಸವಲತ್ತು ವಿತರಿಸಿದ ಶಾಸಕ ರಾಮದಾಸ್

ಮೈಸೂರು,ಜೂ.18(ಎಂಟಿವೈ)–ಪ್ರಧಾನಿ ನರೇಂದ್ರ ಮೋದಿ ಮೈಸೂರಲ್ಲಿ ಕೇಂದ್ರ ಸರ್ಕಾರದ ಯೋಜನೆಗಳ ಫಲಾನುಭವಿಗಳೊಂದಿಗೆ ಸಂವಾದ ನಡೆಸಲಿರುವ ಹಿನ್ನೆಲೆಯಲ್ಲಿ ಕೆ.ಆರ್.ವಿಧಾನಸಭಾ ಕ್ಷೇತ್ರದಲ್ಲಿ ಶಾಸಕ ಎಸ್.ಎ.ರಾಮದಾಸ್ ನೇತೃತ್ವದಲ್ಲಿ ಶನಿವಾರ ನಡೆದ ವಿಶೇಷ ಅಭಿಯಾನದಲ್ಲಿ ವಿವಿಧ ಯೋಜನೆಗಳ ನೂರಾರು ಮಂದಿ ಫಲಾನುಭವಿಗಳಿಗೆ ಸವಲತ್ತು ಹಾಗೂ ಪ್ರಮಾಣ ಪತ್ರ ವಿತರಿಸಲಾಯಿತು.



ಮೈಸೂರಿನ ವಿದ್ಯಾರಣ್ಯಪುರಂನಲ್ಲಿರುವ ರಾಮಲಿಂಗೇಶ್ವರ ಉದ್ಯಾನವನದಲ್ಲಿ ಶನಿವಾರ ನಡೆದ ಸವಲತ್ತು ವಿತರಣಾ ಹಾಗೂ ವಿವಿಧ ಯೋಜನೆಗಳ ಫಲಾನುಭವಿಗಳಿಗೆ ಪ್ರಮಾಣ ಪತ್ರ ನೀಡುವ ವಿಶೇಷ ಅಭಿಯಾನದಲ್ಲಿ ಪಾಲಿಕೆ ಮೂಲಕ ಮಂಜೂರಾದ ಕೆಲವು ಯೋಜನೆಗಳ ಫಲಾನುಭವಿಗಳಿಗೆ ಪಾಲಿಕೆ ಆಯುಕ್ತ ಜಿ.ಲಕ್ಷ್ಮೀಕಾಂತರೆಡ್ಡಿ ಅವರು ಟ್ಯಾಕ್ಸಿ ಕೀ, ಸಂಧ್ಯಾ ಸುರಕ್ಷಾ ಬಾಂಡ್ ಸೇರಿದಂತೆ ಹಲವು ಯೋಜನೆಗಳ ಬಾಂಡ್ ವಿತರಿಸಿದರು. ಬಳಿಕ ಕೆ.ಆರ್.ಕ್ಷೇತ್ರದಲ್ಲಿ ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿ ಮನೆ ಮಂಜೂರಾದ 6500 ಮಂದಿ ಫಲಾನುಭವಿಗಳಿಗೆ ದೃಢೀಕರಣ ಪತ್ರವನ್ನು ಅವರ ಮನೆಗಳಿಗೇ ಅಂಚೆ ಮೂಲಕ ಕಳುಹಿಸುವ ಪ್ರಕ್ರಿಯೆಗೂ ಚಾಲನೆ ನೀಡಲಾಯಿತು.

ಈ ವೇಳೆ ಶಾಸಕ ಎಸ್.ಎ.ರಾಮದಾಸ್ ಮಾತನಾಡಿ, ಜೂ.20ರಂದು ಸಂಜೆ 5 ಗಂಟೆಗೆ ಮಹಾರಾಜ ಕಾಲೇಜು ಮೈದಾನದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಕೇಂದ್ರದ ಯೋಜನೆಗಳ ಫಲಾನುಭವಿಗಳೊಂದಿಗೆ ಸಂವಾದ ನಡೆಸಲಿದ್ದಾರೆ. ಈ ಕಾರ್ಯಕ್ರಮಕ್ಕೂ ಮುನ್ನ ಕೆ.ಆರ್.ಕ್ಷೇತ್ರದಲ್ಲಿ ಕೇಂದ್ರ ಸರ್ಕಾರದ ಯೋಜನೆಗಳನ್ನು ಪರಿಪೂರ್ಣವಾಗಿ ಅನುಷ್ಠಾನಗೊಳಿಸುವುದಕ್ಕಾಗಿ ಕ್ಷೇತ್ರದಲ್ಲಿ 2 ದಿನ ವಿಶೇಷ ಅಭಿಯಾನ ನಡೆಸಲಾಗಿತ್ತು. ಅದರ ಮುಂದುವರೆದ ಭಾಗವಾಗಿ ಮೈಸೂರಿನ ರಾಮಲಿಂಗೇಶ್ವರ ಉದ್ಯಾನದಲ್ಲಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು ಎಂದರು.

ಕೆ.ಆರ್.ಕ್ಷೇತ್ರದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ವಿವಿಧ ಯೋಜನೆಗಳ 70 ಸಾವಿರ ಫಲಾನುಭವಿಗಳಿದ್ದಾರೆ. ನಮ್ಮ ಕ್ಷೇತ್ರದಲ್ಲಿ ಯೋಜನೆಯನ್ನು ಪರಿಣಾಮಕಾರಿಯಾಗಿ ತಲುಪಿಸಲಾಗಿದೆ. ಸಾಮಾಜಿಕ ಭದ್ರತಾ ಯೋಜನೆಯಡಿಯಲ್ಲಿ ಪಿಂಚಣಿ, ಸುಕನ್ಯಾ ಸಮೃದ್ಧಿ ಯೋಜನೆ, ಪೋಷಣ್ ಅಭಿಯಾನ್ ಯೋಜನೆ, ಮಾತೃವಂದನಾ ಕಾರ್ಯಕ್ರಮ ಹೀಗೆ ಹಲವಾರು ಯೋಜನೆಗಳಡಿ ಅರ್ಹ ಫಲಾನುಭವಿಗಳನ್ನು ಗುರುತಿಸಿ ಅವರಿಗೆ ಸ್ಥಳದಲ್ಲೇ ಸೌಲಭ್ಯ ಕಲ್ಪಿಸುವ ಉದ್ದೇಶದಿಂದ ಕೆ.ಆರ್.ಕ್ಷೇತ್ರದ 19 ವಾರ್ಡ್‌ಗಳನ್ನು ಒಳಗೊಂಡಂತೆ ಒಟ್ಟು ಐದು ಕೇಂದ್ರಗಳಲ್ಲಿ ಎರಡು ದಿನ ವಿಶೇಷ ಅಭಿಯಾನ ನಡೆಸಲಾಗಿದೆ. ಆಜಾದಿ ಕಾ ಅಮೃತ ಮಹೋತ್ಸವ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರದ ಯೋಜನೆಗಳ ಫಲಾನುಭವಿಗಳ ಸಭೆ ನಡೆಸಿ, ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿ 6500 ಫಲಾನುಭವಿಗಳಿಗೆ ತಿಳುವಳಿಕೆ ಪತ್ರ ವಿತರಿಸಲಾಗಿದೆ ಎಂದು ತಿಳಿಸಿದರು.

ಅಲ್ಲದೆ, ಸ್ವ–ಉದ್ಯೋಗ ಕಲ್ಪಿಸಿಕೊಳ್ಳುವುದಕ್ಕಾಗಿ ವಿವಿಧ ಕಾರ್ಯಕ್ರಮದಡಿ ನೆರವು ನೀಡಲಾಗಿದೆ. ಲೇಬರ್ ಟೂಲ್ ಕಿಟ್ ವಿತರಣೆ, ಐರಾವತ ಯೋಜನೆ, ಪ್ರೇರಣ ಮೈಕ್ರೋ ಯೋಜನೆ, ಪೌರಕಾರ್ಮಿಕರ ಮಕ್ಕಳಿಗೆ ಟ್ಯಾಬ್ ವಿತರಣೆ, ಕಟ್ಟಡ ಕಾರ್ಮಿಕ ಮಕ್ಕಳಿಗೆ ಈ ಶ್ರಮ್ ಕಾರ್ಡ್ ವಿತರಣೆ, ಪರಿಶಿಷ್ಟ ಜಾತಿ ಯುವಕರಿಗೆ ಸಾಲ ಸೌಲಭ್ಯ ಮಂಜೂರಾತಿ ಪತ್ರ, ಬೀದಿಬದಿ ವ್ಯಾಪಾರಿಗಳಿಗೆ ಸ್ವನಿಧಿ ಸಾಲಸೋಲ ಯೋಜನೆ, ಮಾತೃವಂದನ ಹಾಗೂ ಮಡಿಲು ಯೋಜನೆಯಡಿ 200 ಗರ್ಭಿಣಿಯರಿಗೆ ಮತ್ತು ಮಕ್ಕಳಿಗೆ ಅನ್ನಪೋಷಣ್ ಯೋಜನೆಯ ಸೌಲಭ್ಯ ನೀಡಲಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಪಾಲಿಕೆ ಸದಸ್ಯರಾದ ಶಾಂತಮ್ಮ ವಡಿವೇಲು, ಶಾರದ ಈಶ್ವರ, ಎಡಿಸಿ ರೂಪ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಉಪನಿರ್ದೇಶಕ ಮಧುಸೂದನ್, ಉಪತಹಸೀಲ್ದಾರ್ ರೂಪ, ತಾಲೂಕು ಆರೋಗ್ಯಾಧಿಕಾರಿ ಡಾ.ರಾಜೇಶ್ವರಿ, ಮೋನಿಷಾ, ಕಾರ್ಮಿಕ ಇಲಾಖೆಯ ಜಾದವ್, ನಿಖಿಲ್, ರವಿ, ಶಶಿಧರ್, ಫುಡ್ ಇನ್ಸ್‌ಪೆಕ್ಟರ್ ರತ್ನಮ್ಮ, ಕೋಮಲ, ಕೆ.ಆರ್.ಕ್ಷೇತ್ರದ ಬಿಜೆಪಿ ಅಧ್ಯಕ್ಷ ಎಂ.ವಡಿವೇಲು, ಪ್ರಧಾನ ಕಾರ್ಯದರ್ಶಿಗಳಾದ ಓಂಶ್ರೀನಿವಾಸ್, ನಾಗೇಂದ್ರ ಕುಮಾರ್, ಬಿಎಲ್‌ಎ–1 ಪ್ರಸಾದ್ ಬಾಬು, ಜೆ.ರವಿ, ಶಿವಪ್ಪ, ಮೈ.ಪು.ರಾಜೇಶ್, ಆಶ್ರಯ ಸಮಿತಿ ಸದಸ್ಯರಾದ ಹೇಮಂತ್‌ಕುಮಾರ್, ಸುರೇಶ್ ಇತರರಿದ್ದರು.

ರಾಜ್ಯದಲ್ಲಿ 600 ಕಿ.ಮೀ. ರೈಲ್ವೆ ಕಂಬಿ ಬ್ಯಾರಿಕೇಡ್ ಅಳವಡಿಕೆಗೆ ಕ್ರಮ

ಸಚಿವ ಉಮೇಶ್ ವಿ.ಕತ್ತಿ ಮಾಹಿತಿ



ಹೆಚ್.ಡಿ.ಕೋಟೆ, ಜೂ.18(ಮಂಜು)– ಮಾನವ ಮತ್ತು ವನ್ಯಜೀವಿಗಳ ಸಂಘರ್ಷ ಇಂದು ನೆನ್ನೆಯದಲ್ಲ. ಬಹಳ ಹಿಂದಿನಿಂದಲೂ ನಡೆಯುತ್ತಲೆ ಇದ್ದು, ಪ್ರಾಣಿಗಳು ಕಾಡಿನಿಂದ ಹೊರ ಬಾರದಂತೆ ತಡೆಯಲು ರಾಜ್ಯದಲ್ಲಿ 600ಕಿ.ಮೀ.ನಷ್ಟು ರೈಲ್ವೆ ಕಂಬಿ ಬ್ಯಾರಿಕೇಡ್ ಅಳವಡಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ಅರಣ್ಯ ಸಚಿವ ಉಮೇಶ್ ವಿ.ಕತ್ತಿ ತಿಳಿಸಿದರು.

ತಾಲೂಕಿನ ಅಂತರಸಂತೆ ಹಾಗೂ ಡಿ.ಬಿ.ಕುಪ್ಪೆ ಅರಣ್ಯ ವ್ಯಾಪ್ತಿಯ ಉದ್ಬೂರು ಕೂಡು ಅರಣ್ಯ ವ್ಯಾಪ್ತಿಯಲ್ಲಿ ಹುಲ್ಲುಗಾವಲು ಬೀಜ ಬಿತ್ತನೆ ಮಾಡಿ ಮಾತನಾಡಿದ ಅವರು, ನಾಡಿನತ್ತ ಪ್ರಾಣಿಗಳು ಬರುವುದನ್ನು ತಡೆಯಲು ರೈಲ್ವೆ ಕಂಬಿ ಬ್ಯಾರಿಕೇಡ್ ಅಳವಡಿಸಬೇಕಾಗಿದೆ. ಆದರೆ, ಈಗ ಹಳೆಯ ಕಂಬಿಗಳು ಕಡಿಮೆ ಪ್ರಮಾಣದಲ್ಲಿ ಬರುತ್ತಿದ್ದು, ತಮಿಳುನಾಡಿನ ಹೊಸೂರು ಮಾದರಿಯ ವೈರ್‌ರೂಫ್ (ರೋಫ್ ಬ್ಯಾರಿಕೇಡ್) ಅಳವಡಿಸುವ ಬಗ್ಗೆ ಚಿಂತಿಸಲಾಗಿದೆ. ಅದರಂತೆ ಪ್ರಾಯೋಗಿಕವಾಗಿ ನಾಗರಹೊಳೆ ವ್ಯಾಪ್ತಿಯ ವೀರನ ಹೊಸಹಳ್ಳಿ ಭಾಗದಲ್ಲಿ 4.5ಕಿ.ಮೀನಲ್ಲಿ ಅಳವಡಿಸಲಾಗಿದೆ. ಇದರಿಂದ ವೆಚ್ಚವೂ ಕಡಿಮೆಯಾಗಲಿದೆ. ಆದ್ದರಿಂದ ಈ ವರ್ಷ ತಡೆಗೋಡೆ ನಿರ್ಮಿಸಲು 100 ಕೋಟಿ ರೂ. ಮೀಸಲಿಡಲಾಗಿದೆ ಎಂದರು.

ಪ್ರಾಣಿಗಳು ಶಾಂತವಾಗಿರುತ್ತವೆ. ಆದರೆ, ನಾವು ಕ್ರೂರವಾಗಿದ್ದೇವೆ. ಇದರಿಂದ ಸಂಘರ್ಷ ಹೆಚ್ಚಾಗುತ್ತಿದೆ. ಇದನ್ನರಿತು ನಾವು ಪ್ರಾಣಿಗಳಿಂದ ದೂರವಿರುವುದು ಉತ್ತಮ. ಆದರೂ ಇಲಾಖೆಯಿಂದ ಸಂಘರ್ಷ ತಡೆಯಲು ಸಾಧ್ಯವಾದಷ್ಟು ಶ್ರಮಿಸಲಾಗುತ್ತಿದೆ. ತಾಲೂಕಿನ ನಾಗರಹೊಳೆ ಅರಣ್ಯ ವ್ಯಾಪ್ತಿಯ ಅಂತರಸಂತೆ ಮತ್ತು ಡಿ.ಬಿ.ಕುಪ್ಪೆ ವನ್ಯಜೀವಿ ವಿಭಾಗಗಳಲ್ಲಿ ನರೇಗಾ ಯೋಜನೆ ಮೂಲಕ 150 ಹೆಕ್ಟೇರ್ ಕಾಡಿನಲ್ಲಿ ಲಂಟಾನ ತೆರವು ಮಾಡಲಾಗಿದೆ. ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಾಗಿ ಲಂಟಾನ ತೆರವು ಮಾಡುವ ಯೋಜನೆ ಇದೆ. ಲಂಟಾನವನ್ನು ಉತ್ತಮವಾಗಿ ತೆರವು ಮಾಡಿದಾಗ ಮಾತ್ರ ಪ್ರಾಣಿಗಳಿಗೆ ಉತ್ತಮ ಆಹಾರ ದೊರೆತು ಅವು ಕಾಡಿನಲ್ಲೇ ಉಳಿದು, ಸಂಘರ್ಷ ಕಡಿಮೆಯಾಗಲಿದೆ ಎಂದರು.

ರೈತರ ಒತ್ತುವರಿ ವಿಚಾರವಾಗಿ ಪ್ರತಿಕ್ರಿಯಿಸಿದ ಅವರು, ಈಗಾಗಲೇ 6 ಲಕ್ಷದ 60 ಸಾವಿರ ಎಕರೆ ಜಮೀನನ್ನು ಅರಣ್ಯ ಇಲಾಖೆಯಿಂದ ರೈತರಿಗೆ ಬಿಡಲಾಗಿದೆ. ಇದಕ್ಕೆ ವಿರೋಧ ವ್ಯಕ್ತವಾದರೂ, ನ್ಯಾಯಾಲಯದ ಆದೇಶದ ಮೇರೆಗೆ ಎಲ್ಲಾ ಅರಣ್ಯದಲ್ಲಿಯೂ ಘೋಷಣೆ ಮಾಡಲಾಗಿತ್ತು. ಇಂದು ನಾವು ಆದೇಶದಂತೆ ಸರ್ವೇ ಮಾಡಿ ಬಿಟ್ಟು ಕೊಟ್ಟಿದ್ದೇವೆ ಎಂದರು.

ಅರಣ್ಯ ಇಲಾಖೆ ಆದಿವಾಸಿಗಳ ಮೇಲೆ ಪ್ರಕರಣ ದಾಖಲಿಸಿದ್ದಾರೆ ಎಂಬ ವಿಚಾರವಾಗಿ ಶಾಸಕರು ಸಹ ಧರಣಿ ಮಾಡಿದ್ದಾರೆ ಎಂಬುದು ತಿಳಿದಿದೆ. ಈ ಬಗ್ಗೆ ಪರಿಶೀಲಿಸಿ ಮೊಕದ್ದಮೆ ವಜಾ ಮಾಡುವ ಬಗ್ಗೆ ಚರ್ಚಿಸುತ್ತೇನೆ ಎಂದರು. ಈ ವೇಳೆ ಕೊಡಗು ವಿಭಾಗದ ಸಿಸಿಎಫ್ ಮೂರ್ತಿ, ನಾಗರಹೊಳೆ ಡಿಸಿಎಫ್ ಮಹೇಶ್ ಕುಮಾರ್, ಎಸಿಎಫ್ ಎಸ್.ಪಿ.ಮಹದೇವ್, ವಲಯ ಅರಣ್ಯಾಧಿಕಾರಿಗಳಾದ ಎಸ್.ಎಸ್.ಸಿದ್ಧರಾಜು, ಕೆ.ಎಲ್.ಮಧು, ಹರ್ಷಿತ್ ಗೌಡ ಸಿಬ್ಬಂದಿಗಳಾದ ಆಂಟೋನಿ ಜ್ಯೋತಿ ಕುಮಾರ್ ರಾಹುಲ್ ಸುಪ್ರೀತ್ ಇತರರಿದ್ದರು.

ಮಾದಾಪುರ ಗ್ರಾಪಂಗೆ ನಳಿನಿ ನೂತನ ಅಧ್ಯಕ್ಷೆ



ತಿ.ನರಸೀಪುರ, ಜೂ.18(ಎಸ್‌ಕೆ)– ತಾಲೂಕಿನ ಮಾದಾಪುರ ಗ್ರಾಪಂ ನೂತನ ಅಧ್ಯಕ್ಷೆಯಾಗಿ ನಳಿನಿ ಸೋಮಣ್ಣ ಆಯ್ಕೆಯಾಗಿದ್ದಾರೆ. ಇಲ್ಲಿನ ಗ್ರಾಪಂ ಸಭಾಂಗಣದಲ್ಲಿ ಅಧ್ಯಕ್ಷರ ಆಯ್ಕೆ ಸಂಬಂಧ ಕರೆಯಲಾಗಿದ್ದ ಚುನಾವಣಾ ವಿಶೇಷ ಸಭೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ನಳಿನಿ ಹಾಗೂ ಪುಷ್ಪ ನಾಮಪತ್ರ ಸಲ್ಲಿಸಿದ್ದರು. ನಂತರ ನಡೆದ ಚುನಾವಣೆಯಲ್ಲಿ ನಳಿನಿ 15 ಮತ ಪಡೆದು ಅಧ್ಯಕ್ಷೆಯಾಗಿ ಆಯ್ಕೆಗೊಂಡರೇ, ಪ್ರತಿಸ್ಪರ್ಧಿ ಪುಷ್ಪ 8 ಮತ ಪಡೆದು ಪರಾಭವಗೊಂಡರು. ಚುನಾವಣಾಧಿಕಾರಿಯಾಗಿ ಶಿವಮಾಧವ ಕಾರ್ಯ ನಿರ್ವಹಿಸಿದರು.

ಈ ಹಿಂದೆ ನಡೆದ ಆಂತರಿಕ ಒಪ್ಪಂದದಂತೆ ಅಧ್ಯಕ್ಷ ಸ್ಥಾನಕ್ಕೆ ಸುಶೀಲ ಅವರು ರಾಜೀನಾಮೆ ನೀಡಿದ ಹಿನ್ನೆಲೆಯಲ್ಲಿ ಅವರಿಂದ ತೆರವಾದ ಸ್ಥಾನಕ್ಕೆ ಇಂದು ಚುನಾವಣೆ ನಡೆಯಿತು. 23 ಮಂದಿ ಸದಸ್ಯರು ಚುನಾವಣೆ ಪ್ರಕ್ರಿಯೆಯಲ್ಲಿ ಭಾಗವಹಿಸಿದ್ದರು.

ಈ ವೇಳೆ ಪಿಡಿಓ ಕೆಂಪರಾಜು, ಉಪಾಧ್ಯಕ್ಷ ಪ್ರದೀಪ್, ಸದಸ್ಯರಾದ ಮಾಲತಿ, ಮಹದೇವಮ್ಮ, ರೂಪವತಿ, ಮಾನಸ, ಮೀನಾಕ್ಷಿ, ಮೇಘ, ಮಹದೇವಮ್ಮ, ರೇಖಾ, ಸುವರ್ಣ, ನಿಲಸೋಗೆ ಮಹೇಶ್, ರೇವಣ್ಣ, ಬಸವರಾಜು, ಕೃಷ್ಣ, ಮನು ಕುಮಾರ್, ಅಶೋಕ, ಸೋಮಣ್ಣ, ಮನೋಜ್ ಕುಮಾರ್, ಸಿದ್ದಯ್ಯ, ಎಸ್ಸಿ ಎಸ್ಟಿ ಗುತ್ತಿಗೆದಾರ ಸಂಘದ ಜಿಲ್ಲಾಧ್ಯಕ್ಷ ಹೊಸಪುರ ಕೆ.ಮಲ್ಲು, ಚೌಹಳ್ಳಿ ಮಲ್ಲೇಶ್, ಮರಿಸ್ವಾಮಿ, ಗ್ರಾಪಂ ಮಾಜಿ ಸದಸ್ಯ ಕೃಷ್ಣಮೂರ್ತಿ, ಶೇಖರಪ್ಪ, ಸುಧಾಕರ್, ಗೌಡ್ರು, ಸಿದ್ದಪ್ಪಾಜಿ, ಸೋಮಣ್ಣ, ಸಣ್ಣಮಾದನಾಯ್ಕ, ರವಿ, ಮಹದೇವಪ್ರಸಾದ್, ಸುರೇಶ, ಮಹದೇವನಾಯಕ ಹಾಜರಿದ್ದರು.

140 ಕ್ವಿಂಟಾಲ್ ಅನ್ನಭಾಗ್ಯ ಅಕ್ಕಿ ವಶ

ನಂಜನಗೂಡು, ಜೂ.18(ಸುದರ್ಶನ)– ಅಕ್ರಮವಾಗಿ ಅನ್ನಭಾಗ್ಯ ಅಕ್ಕಿ ಸಾಗಿಸುತ್ತಿದ್ದ ಲಾರಿಯನ್ನು ನಂಜನಗೂಡು ಗ್ರಾಮಾಂತರ ಪೊಲೀಸರು ವಶಪಡಿಸಿಕೊಂಡಿದ್ದಾರೆ.



ಪಟ್ಟಣದಿಂದ ಮೈಸೂರು ಕಡೆಗೆ ಗೂಡ್ಸ್ ಲಾರಿಯಲ್ಲಿ ಅಕ್ರಮವಾಗಿ ಸಾಗಿಸುತ್ತಿದ್ದ ವೇಳೆ ಗ್ರಾಮಾಂತರ ಠಾಣೆಯ ವೃತ್ತ ನಿರೀಕ್ಷಕ ಶಿವನಂಜಶೆಟ್ಟಿ ನೇತೃತ್ವದಲ್ಲಿ ದಾಳಿ ನಡೆಸಿದ ಸಿಬ್ಬಂದಿ 1.56 ಲಕ್ಷ ರೂ. ಮೌಲ್ಯದ 40 ಕೆಜಿ ತೂಕದ 268 ಮೂಟೆಗಳ ಒಟ್ಟು 140 ಕ್ವಿಂಟಾಲ್ ಅಕ್ಕಿ ವಶಪಡಿಸಿಕೊಂಡಿದ್ದಾರೆ. ಈ ವೇಳೆ ಲಾರಿ ಚಾಲಕ ಪರಾರಿಯಾಗಿದ್ದು, ವಶಕ್ಕೆ ಪಡೆಯಲಾದ ಅಕ್ಕಿಯನ್ನು ತಾಲೂಕು ಆಹಾರ ನಿರೀಕ್ಷಕ ಅಧಿಕಾರಿಗಳ ವಶಕ್ಕೆ ನೀಡಲಾಗಿದೆ ತಾಲೂಕು ಆಹಾರ ನಿರೀಕ್ಷಕ ಅಧಿಕಾರಿ ರವೀಂದ್ರ ಮತ್ತು ಸಿಬ್ಬಂದಿ ಪರಿಶೀಲನೆ ನಡೆಸಿ, ಈ ಸಂಬಂಧ ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಸಿಟಿಜನ್ ಕಾಲೇಜಿಗೆ ಉತ್ತಮ ಫಲಿತಾಂಶ


ಹರಿಪ್ರಿಯ


ಕೆ.ಭೂಮಿಕಾ

ನಂಜನಗೂಡು, ಜೂ.18(ಸುದರ್ಶನ್)– ನಗರದ ಸಿಟಿಜನ್ ಪದವಿ ಪೂರ್ವ ಕಾಲೇಜು ವಾಣಿಜ್ಯ ಮತ್ತು ವಿಜ್ಞಾನ ವಿಭಾಗ ದಲ್ಲಿ ಅತ್ಯುನ್ನತ ಫಲಿತಾಂಶ ಪಡೆದಿದೆ.

ವಿಜ್ಞಾನ ವಿಭಾಗದಲ್ಲಿ ಹರಿಪ್ರಿಯ 589, ಡಿ.ಆರ್.ಸುರಭಿ 583, ಸಹಜ್ ಭಟ್ಟಚಾರ್ಯ 581ಅಂಕ ಪಡೆದು ಕಾಲೇಜಿಗೆ ಕೀರ್ತಿ ತಂದಿದ್ದಾರೆ. ವಾಣಿಜ್ಯ ವಿಭಾಗದಲ್ಲಿ ಕೆ.ಭೂಮಿಕಾ 589, ಜಿ.ಪ್ರೀತಿ 585, ಆಫೀಯಾ ಖಾನಂ 582, ಎನ್.ಐಶ್ವರ್ಯ 580ಅಂಕ ಪಡೆದ್ದಾರೆ ಎಂದು ಕಾಲೇಜಿನ ಆಡಳಿತ ಮಂಡಳಿ ಅಧ್ಯಕ್ಷೆ ಮಶೂದ ಬೇಗಂ, ಕಾರ್ಯದರ್ಶಿ ನೂರ್ ಮೊಹಮ್ಮದ್ ಅಲಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜೂ.24ರಂದು ಸರಗೂರಿನಲ್ಲಿ ಬಸವ ಜಯಂತಿ

ಬಸವ ಜಯಂತಿ ಪ್ರಚಾರ ರಥಕ್ಕೆ ಚಾಲನೆ



ಸರಗೂರು, ಜೂ.18(ನಾಗೇಶ್)– ಪಟ್ಟಣದಲ್ಲಿ ಜೂ.24ರಂದು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಸರಗೂರು, ಹೆಚ್.ಡಿ.ಕೋಟೆ ಸಹಯೋಗದಲ್ಲಿ ನಡೆಯುವ ಬಸವ ಜಯಂತಿ ಕಾರ್ಯಕ್ರಮದ ಯಶಸ್ವಿಗೆ ಶ್ರಮಿಸಬೇಕು ಎಂದು ಮಹಾಸಭಾದ ಸರಗೂರು ತಾಲೂಕು ಘಟಕದ ಅಧ್ಯಕ್ಷ ಡಿ.ಜಿ.ಶಿವರಾಜು ತಿಳಿಸಿದರು.

ಜಗಜ್ಯೋತಿ ಬಸವೇಶ್ವರ ಜಯಂತಿ ಮಹೋತ್ಸವದ ಪ್ರಚಾರ ರಥಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಸರಗೂರು–ಹೆಚ್.ಡಿ.ಕೋಟೆ ತಾಲೂಕಿನ ಪ್ರತಿ ಗ್ರಾಮಗಳಿಗೆ ಪ್ರಚಾರ ರಥ ಸಂಚರಿಸಲಿದೆ. ಕ್ಷೇತ್ರದ ಜನತೆ ಬಸವ ಜಯಂತಿ ಕಾರ್ಯಕ್ರಮಕ್ಕೆ ಆಗಮಿಸಿ ಕಾರ್ಯಕ್ರಮದ ಯಶಸ್ವಿಗೆ ಶ್ರಮಿಸಬೇಕು ಎಂದು ತಿಳಿಸಿದರು.

ಹಂಚೀಪುರ ಸಿದ್ದಮಲ್ಲೇಶ್ವರ ಪಟ್ಟಣದ ಮಠಾಧಿಪತಿ ಚನ್ನಬಸವ ಸ್ವಾಮೀಜಿ ಮಾತನಾಡಿ, ಕೊರೊನಾ ಹಿನ್ನೆಲೆಯಲ್ಲಿ ಬಸವ ಜಯಂತಿಯನ್ನು 2 ವರ್ಷಗಳಿಂದ ಆಚರಣೆ ಮಾಡಿರಲಿಲ್ಲ. ಈ ಬಾರಿ ಮಹಾಸಭಾದಿಂದ ಸರಗೂರಿನಲ್ಲಿ ವಿಜೃಂಭಣೆಯಿಂದ ಆಚರಿಸಲಾಗುವುದು. ಅಲ್ಲದೆ ಜಯಂತಿ ಆಚರಣೆಯಿಂದ ವೀರಶೈವ ಸಮಾಜಕ್ಕೆ ಉತ್ತಮ ಸಂದೇಶ ರವಾನೆಯಾಗಲಿದೆ. ಪ್ರಚಾರ ಸಮಿತಿಯೂ 7 ದಿನಗಳು ಪ್ರಚಾರ ಮಾಡಲಿದೆ ಎಂದು ತಿಳಿಸಿದರು.

ಈ ವೇಳೆ ಹಂಚೀಪುರ ಮಠದ ಕಿರಿಯ ತೋಂಟದಾರ್ಯ ಸ್ವಾಮೀಜಿ, ಮಹಾಸಭಾದ ಹೆಚ್.ಡಿ.ಕೋಟೆ ತಾಲೂಕು ಘಟಕದ ಅಧ್ಯಕ್ಷ ಮೊತ್ತ ಬಸವರಾಜಪ್ಪ ಪ್ರಚಾರ ಸಮಿತಿ ಅಧ್ಯಕ್ಷ ಪರಶಿವಮೂರ್ತಿ, ಹಣಕಾಸು ಸಮಿತಿ ಸಂಚಾಲಕ ನಟರಾಜು, ಪ್ರಧಾನ ಕಾರ್ಯದರ್ಶಿ ಸಿದ್ದಪ್ಪ, ಕೋಶಾಧ್ಯಕ್ಷ ಕೆ.ಎ.ರಾಜಪ್ಪ, ಮಹದೇವಪ್ಪ, ಶಿವಪ್ಪಾಜಿ, ವೀರಶೈವ ಸಹಕಾರ ಸಂಘದ ಅಧ್ಯಕ್ಷ ಹಂಚೀಪುರ ಗಣಪತಿ, ಮಹದೇವಸ್ವಾಮಿ, ಶಿವಣ್ಣ, ಪುಟ್ಟಣ್ಣ, ಶರಣ ಸಾಹಿತ್ಯ ಪರಿಷತ್‌ನ ಗುರುಸ್ವಾಮಿ, ಎಂ.ಎಸ್.ಮಲ್ಲಿಕಾರ್ಜುನಪ್ಪ, ಸಿ.ಪಿ.ನಾಗೇಂದ್ರ, ಹೆಚ್.ಎಂ.ಪ್ರಸಾದ್, ಮಹೇಶ್, ಬಾಡಿಗ ಮಾದಪ್ಪ ಗಿರೀಶ್, ತೇಜಕುಮಾರ್, ಕೆ.ಶೇಖರ್ ಸೇರಿದಂತೆ ಸಮಾಜದ ಬಂಧುಗಳು ಹಾಜರಿದ್ದರು.

ರಾಜಕೀಯ ಸ್ಥಾನಮಾನ ಪಡೆಯಲು ಎಡಗೈ ಸಮಾಜ ಒಗ್ಗೂಡಲಿ: ಪುರಸಭಾ ಸದಸ್ಯ ಅರ್ಜುನ್



ತಿ.ನರಸೀಪುರ, ಜೂ.18(ಎಸ್‌ಕೆ)– ಮೈಸೂರು–ಚಾಮರಾಜನಗರ ಜಿಲ್ಲೆಗಳಲ್ಲಿ ಎಡಗೈ ಸಮಾಜದವರು ಹೆಚ್ಚಿನ ಸಂಖ್ಯೆಯಲ್ಲಿ ಜನಪ್ರತಿನಿಧಿಗಳಾಗಿ ಚುನಾಯಿತರಾಗಬೇಕು ಎಂದು ಪುರಸಭಾ ಸದಸ್ಯ ಅರ್ಜುನ್ ತಿಳಿಸಿದರು.

ಪಟ್ಟಣದ ಅವರ ಕಚೇರಿಯಲ್ಲಿ ತಾಲೂಕು ಬಾಬು ಜಗಜೀವನ ರಾಂ ಸಂಘದಿಂದ ಏರ್ಪಡಿಸಿದ್ದ ಸೋಮನಾಥಪುರ ಗ್ರಾಪಂ ನೂತನ ಉಪಾಧ್ಯಕ್ಷ ಸಿದ್ದಪ್ಪ ಅವರ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದ ಅವರು, ಸಮಾಜದ ಬಂಧುಗಳು ಇತರೆ ಸಮಾಜದವರ ಪ್ರೀತಿ, ವಿಶ್ವಾಸ ಗಳಿಸಿ, ಮುಂಬರುವ ತಾಪಂ ಹಾಗೂ ಜಿಪಂಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಗೆಲುವು ಸಾಧಿಸಬೇಕು ಎಂದು ಸಲಹೆ ನೀಡಿದರು.

ಹೆಚ್ಚು ಜನಸಂಖ್ಯೆಯುಳ್ಳ ನಮ್ಮ ಸಮಾಜ ರಾಜಕೀಯ ಸ್ಥಾನಮಾನ ಪಡೆಯುವಲ್ಲಿ ತೀವ್ರ ಹಿನ್ನಡೆ ಅನುಭವಿಸುತ್ತಿದೆ. ಇದಕ್ಕೆ ನಮ್ಮಲ್ಲಿ ಒಗ್ಗಟ್ಟು ಇಲ್ಲದಿರುವುದೇ ಕಾರಣ. ಮುಂದಿನ ದಿನಗಳಲ್ಲಿ ಎಲ್ಲರೂ ಒಗ್ಗಟ್ಟಾಗಿ ಸಮಾಜದ ಒಳಿತಿಗಾಗಿ ಕೆಲಸ ಮಾಡುವಂತಾಗಬೇಕು. ಆಗ ಮಾತ್ರ ಹೆಚ್ಚಿನ ಸಂಖ್ಯೆಯಲ್ಲಿ ನಮ್ಮ ಸಮಾಜದ ಜನಪ್ರತಿನಿಧಿಗಳು ಆಯ್ಕೆಯಾಗಲು ಸಾಧ್ಯ ಎಂದರು.

ಬಾಬು ಜಗಜೀವನರಾಂ ಸಂಘದ ಅಧ್ಯಕ್ಷ ಮಲೆಯೂರು ಶಂಕರ್ ಮಾತನಾಡಿ, ಯಾವುದೇ ರಾಜಕೀಯ ಪಕ್ಷಗಳು ಇರಲಿ ಅವಕಾಶಗಳು ದೊರೆತಾಗ ಅದನ್ನು ಬಳಸಿಕೊಂಡು ಚುನಾಯಿತ ಪ್ರತಿನಿಧಿಗಳಾಗಿ, ಸಮಾಜದ ವಿಚಾರಗಳು ಬಂದಾಗ ಪಕ್ಷಬೇಧ ಮರೆತು ಒಗ್ಗಟ್ಟಾಗಿ ದುಡಿಯುವಂತಾಗಬೇಕು ಎಂದು ಹೇಳಿದರು.

ಈ ವೇಳೆ ಸೋಮನಾಥಪುರ ಗ್ರಾಮ ಪಂಚಾಯತಿ ನೂತನ ಉಪಾಧ್ಯಕ್ಷ ಸಿದ್ದಪ್ಪ ಅವರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಸಂಘದ ಉಪಾಧ್ಯಕ್ಷ ಗೋವಿಂದರಾಜು, ಖಜಾಂಚಿ ಬಿ.ಎಲ್.ಮಹದೇವ, ಬನ್ನೂರು ಪುರಸಭೆ ಸದಸ್ಯ ಶಿವಣ್ಣ, ಗ್ರಾಪಂ ಮಾಜಿ ಅಧ್ಯಕ್ಷ ಪುಟ್ಟಯ್ಯ, ಸದಸ್ಯ ರಾಚಪ್ಪ, ಸುನೀಲ್, ಮಾದೇಶ್, ರಾಜಣ್ಣ ಶಿವಣ್ಣ ಶಂಭು, ರಾಜು, ಮಹದೇವ, ನಿಂಗರಾಜು, ರವಿ, ಸಂದೀಪ, ಪ್ರದೀಪ್, ಗೋಪಾಲ್, ನಿಂಗಣ್ಣ ಇತರರು ಇದ್ದರು.

ದ್ವಿತೀಯ ಪಿಯು ಫಲಿತಾಂಶ: ಗ್ರಾಮಾಂತರ ವಿದ್ಯಾರ್ಥಿಗಳ ಅತ್ಯುನ್ನತ ಸಾಧನೆ

ಪ್ರಸಕ್ತ ಸಾಲಿನ ದ್ವಿತೀಯ ಪಿಯುಸಿ ಫಲಿತಾಂಶ ಶನಿವಾರ ಮಧ್ಯಾಹ್ನ ಪ್ರಕಟಗೊಂಡಿದ್ದು, ಮೈಸೂರು ಜಿಲ್ಲೆಯ ತಿ.ನರಸೀಪುರ, ನಂಜನಗೂಡು, ಕೆ.ಆರ್.ನಗರ, ಹುಣಸೂರು, ಹೆಚ್.ಡಿ.ಕೋಟೆ ಸೇರಿದಂತೆ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗುವ ಮೂಲಕ ಸಾಧನೆ ಮಾಡಿದ್ದಾರೆ.

ಮೂಗೂರಿನ ಕರ್ನಾಟಕ ಪಬ್ಲಿಕ್ ಶಾಲೆ ಪಿಯು ಕಾಲೇಜಿಗೆ ಶೇ.56ರಷ್ಟು ಫಲಿತಾಂಶ


ಮಮತಾ(564)


ರಂಜಿತಾ (551)


ಜಯಮ್ಮ(539)


ಮೋಹನ್(524)


ಅಂಕಿತಾ (517)


ಹರ್ಷಿತಾ(513)


ಶ್ವೇತಾ(522)

ಮೂಗೂರು, ಜೂ.18(ಎಂಬಿಆರ್)– ಕಳೆದ ಏಪ್ರಿಲ್‌ನಲ್ಲಿ ನಡೆದ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಮೂಗೂರು ಕರ್ನಾಟಕ ಪಬ್ಲಿಕ್ ಶಾಲೆ ಕಾಲೇಜು ವಿಭಾಗಕ್ಕೆ ಶೇ. 56ರಷ್ಟು ಫಲಿತಾಂಶ ಲಭಿಸಿದೆ. ಪ್ರಥಮ ದರ್ಜೆಯಲ್ಲಿ 30, ದ್ವಿತೀಯ 12, ತೃತೀಯ 10 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ. ಈ ಪೈಕಿ ಕಲಾ ವಿಭಾಗಕ್ಕೆ ಶೇ. 56, ವಾಣಿಜ್ಯ ಶೇ. 59, ವಿಜ್ಞಾನ ವಿಭಾಗಕ್ಕೆ ಶೇ. 46ರಷ್ಟು ಫಲಿತಾಂಶ ಬಂದಿದೆ. ಪರೀಕ್ಷೆಗೆ ಹಾಜರಾಗಿದ್ದ 106 ವಿದ್ಯಾರ್ಥಿಗಳಲ್ಲಿ 59ಮಂದಿ ಉತ್ತೀರ್ಣರಾಗಿದ್ದಾರೆ.


ವಿಜ್ಞಾನ ವಿಭಾಗದ ಟಿ.ಎಸ್.ಮಮತಾ 564, ಎಂ.ಎಸ್.ರಂಜಿತಾ 551, ಜಯಮ್ಮಣಿ 539, ಪಿ.ಮೋಹನ್ ಕುಮಾರ್ 524, ಎಸ್.ಶ್ವೇತಾ 522, ಟಿ.ಸಿ.ಅಂಕಿತಾ 517, ಕೆ.ಎನ್.ಹರ್ಷಿತಾ 513 ಅಂಕ ಪಡೆದಿದ್ದಾರೆ. ಎಂದು ಕಾಲೇಜಿನ ಪ್ರಾಂಶುಪಾಲ ಎಂ.ಎಸ್.ರಾಜಶ್ರೀ ತಿಳಿಸಿದ್ದಾರೆ. ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಗೊಂಡ ವಿದ್ಯಾರ್ಥಿಗಳನ್ನು ಕಾಲೇಜಿನ ಆಡಳಿತ ಮಂಡಳಿ ಅಭಿನಂದಿಸಿದೆ.

ಹೆಚ್.ಡಿ.ಕೋಟೆ: ಕಲಾ ವಿಭಾಗದಲ್ಲಿ ಲಕ್ಷ್ಮೀ, ವಾಣಿಜ್ಯ ವಿಭಾಗದಲ್ಲಿ ಅರ್ಚನಾ, ವಿಜ್ಞಾನ ವಿಭಾಗದಲ್ಲಿ ಅಕ್ಷಯ್ ಕುಮಾರ್ ಪ್ರಥಮ


ಅಕ್ಷಯ


ಯೋಹನ್


ಕಿಶೋರ್


ಅರ್ಚನಾ


ಸಿಂಚನಾ

ಹೆಚ್.ಡಿ.ಕೋಟೆ, ಜೂ.18(ಮಂಜು)– ದ್ವಿತೀಯ ಪಿಯುಸಿ ಫಲಿತಾಂಶದಲ್ಲಿ ತಾಲೂಕಿನ ವಿದ್ಯಾರ್ಥಿಗಳು ಸಾಧನೆ ಮಾಡಿದ್ದು, ಕಲಾ ವಿಭಾಗದಲ್ಲಿ ಎಂಎಂಕೆ ಕಾಲೇಜಿನ ಎನ್.ಲಕ್ಷ್ಮೀ 570, ವಾಣಿಜ್ಯ ವಿಭಾಗದಲ್ಲಿ ಸೆಂಟ್ ಮೇರಿಸ್ ಸಂಯುಕ್ತ ಪಿಯು ಕಾಲೇಜಿನ ಅರ್ಚನಾ 584 ಹಾಗೂ ವಿಜ್ಞಾನ ವಿಭಾಗದಲ್ಲಿ ಆದಿಚುಂಚನಗಿರಿ ಕಾಲೇಜಿನ ಅಕ್ಷಯ್ ಕುಮಾರ್ 577 ಅಂಕ ಪಡೆದು ತಾಲೂಕಿಗೆ ಪ್ರಥಮ ಸ್ಥಾನ ಪಡೆದಿದ್ದಾರೆ.

ಸೆಂಟ್ ಮೇರಿಸ್ ಪಿಯು ಕಾಲೇಜು: ಪಟ್ಟಣದ ಸೆಂಟ್ ಮೇರಿಸ್ ಸಂಯುಕ್ತ ಪದವಿ ಪೂರ್ವ ಕಾಲೇಜಿನಿಂದ ಪರೀಕ್ಷೆಗೆ ಹಾಜರಾದ 286 ವಿದ್ಯಾರ್ಥಿಗಳಲ್ಲಿ 240 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದು, ಉನ್ನತ ಶ್ರೇಣಿಯಲ್ಲಿ 59, ಪ್ರಥಮ ದರ್ಜೆಯಲ್ಲಿ 60, ದ್ವಿತೀಯ ದರ್ಜೆಯಲ್ಲಿ 4 ಮತ್ತು ತೃತೀಯ ದರ್ಜೆಯಲ್ಲಿ 13 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದು, ಶೇ. 84ರಷ್ಟು ಫಲಿತಾಂಶ ಪಡೆದಿದೆ. ವಿಜ್ಞಾನ ವಿಭಾಗದಲ್ಲಿ ಸಿಂಚನಾ 572 ಅಂಕಗಳನ್ನು ಪಡೆದು ಕಾಲೇಜಿಗೆ ಪ್ರಥಮ ಹಾಗೂ ತಾಲೂಕಿಗೆ ದ್ವಿತೀಯ ಸ್ಥಾನ ಪಡೆದಿದ್ದಾಳೆ.

ಎಂಎಂಕೆ ಕಾಲೇಜು: ತುಂಬಸೋಗೆ ಗ್ರಾಮದ ಎಂಎಂಕೆ ಕಾಲೇಜಿನಲ್ಲಿ ವಾಣಿಜ್ಯ ವಿಭಾಗದಲ್ಲಿ 16 ವಿದ್ಯಾರ್ಥಿಗಳ ಪೈಕಿ 14, ವಿಜ್ಞಾನ ವಿಭಾಗದಲ್ಲಿ 23 ವಿದ್ಯಾರ್ಥಿಗಳಲ್ಲಿ 22 ಹಾಗೂ ಕಲಾ ವಿಭಾಗದಲ್ಲಿ 16 ವಿದ್ಯಾರ್ಥಿಗಳಲ್ಲಿ 14 ಮಂದಿ ಉತ್ತೀರ್ಣರಾಗಿ ಕಾಲೇಜಿಗೆ ಶೇ. 90ರಷ್ಟು ಫಲಿತಾಂಶ ಬಂದಿದೆ.

ಆದಿಚುಂಚನಗಿರಿ ಪಿಯು ಕಾಲೇಜು: ಪಟ್ಟಣದ ಆದಿಚುಂಚನಗಿರಿ ಪದವಿ ಪೂರ್ವ ಕಾಲೇಜಿಗೆ ಶೇ. 80 ಫಲಿತಾಂಶ ಬಂದಿದ್ದು, ಕಲಾ ವಿಭಾಗದಲ್ಲಿ ಶೇ. 80.1, ವಾಣಿಜ್ಯ ವಿಭಾಗದಲ್ಲಿ ಶೇ. 79.5 ಹಾಗೂ ವಿಜ್ಞಾನ ವಿಭಾಗದಲ್ಲಿ ಶೇ. 89.5 ಫಲಿತಾಂಶ ಬಂದಿದೆ.

ಸರ್ಕಾರಿ ಪಿಯು ಕಾಲೇಜು: ಸರ್ಕಾರಿ ಪದವಿ ಪೂರ್ವ ಕಾಲೇಜು ಶೇ. 50ರಷ್ಟು ಫಲಿತಾಂಶ ಪಡೆದಿದ್ದು, ಗಣಿತ ವಿಷಯದಲ್ಲಿ ಕಿಶೋರ್ ಮತ್ತು ಮೊಹಮ್ಮದ್ ಯೋಹನ್ ಶೇ. 100ರಷ್ಟು ಅಂಕ ಪಡೆದಿದ್ದಾರೆ.



ಕಲಾ ವಿಭಾಗದಲ್ಲಿ ಹೆಚ್.ಡಿ.ಕೋಟೆ ತಾಲೂಕಿಗೆ ಪ್ರಥಮ ಸ್ಥಾನ ಪಡೆದ ವಿದ್ಯಾರ್ಥಿನಿ ಲಕ್ಷ್ಮೀ ಅವರನ್ನು ಕಾಲೇಜಿನ ಉಪನ್ಯಾಸಕ ಅಭಿನಂದಿಸಿದರು.ಈ ವೇಳೆ ಲಕ್ಷ್ಮೀ ತಂದೆ–ತಾಯಿ ಇದ್ದಾರೆ.

ಟ್ಯಾಲೆಂಟ್ ಕಾಲೇಜಿಗೆ ಉತ್ತಮ ಫಲಿತಾಂಶ


ದೀಕ್ಷಾ (572)


ಪಾರ್ವತಿ(542)


ಛಾಯಾ (571)


ಪ್ರಶ್ವಿತ್ (558)


ಪಲ್ಲವಿ (567)

ಹುಣಸೂರು, ಜೂ.18 (ಕೆಕೆ)– ಪಟ್ಟಣದ ಟ್ಯಾಲೆಂಟ್ ಸಂಯುಕ್ತ ಪದವಿ ಪೂರ್ವ ಕಾಲೇಜಿಗೆ ಉತ್ತಮ ಫಲಿತಾಂಶ ಬಂದಿದೆ ಎಂದು ಕಾಲೇಜಿನ ಪ್ರಾಂಶುಪಾಲ ಮಂಜುನಾಥ್ ತಿಳಿಸಿದರು.

ವಿಜ್ಞಾನ ವಿಭಾಗದಲ್ಲಿ 15 ಮಂದಿ ಅತ್ಯುನ್ನತ ಶ್ರೇಣಿ, 32 ಪ್ರಥಮ, 7 ಮಂದಿ ದ್ವಿತೀಯ ದರ್ಜೆಯಲ್ಲಿ ಉತ್ತೀರ್ಣರಾಗುವ ಮೂಲಕ ಶೇ.92ರಷ್ಟು ಫಲಿತಾಂಶ ಬಂದಿದೆ. ವಾಣಿಜ್ಯ ವಿಭಾಗದಲ್ಲಿ 6 ಮಂದಿ ಅತ್ಯುನ್ನತ, 26 ಪ್ರಥಮ, 18 ದ್ವಿತೀಯ ಹಾಗೂ 12 ಮಂದಿ ತೃತೀಯ ದರ್ಜೆಯಲ್ಲಿ ಉತೀರ್ಣರಾಗುವ ಮೂಲಕ ಶೇ.90 ಫಲಿತಾಂಶ ಬಂದಿದೆ ಕಲಾ ವಿಭಾಗದಲ್ಲಿ ಓರ್ವ ಅತ್ಯುನ್ನತ ಶ್ರೇಣಿ, 6 ಪ್ರಥಮ, 7 ಮಂದಿ ದ್ವಿತೀಯ ದರ್ಜೆಯಲ್ಲಿ ಉತೀರ್ಣರಾಗುವ ಮೂಲಕ ಶೇ. 74 ಫಲಿತಾಂಶ ಬಂದಿದೆ

ಆರು ವಿದ್ಯಾರ್ಥಿಗಳು ಗಣಿತದಲ್ಲಿ 100ಕ್ಕೆ 100 ಅಂಕ ಪಡೆದುಕೊಂಡಿದ್ದಾರೆ.

ಕಲಾ ವಿಭಾಗದಲ್ಲಿ ದಿಲೀಪ್ 600ಕ್ಕೆ 495, ವಾಣಿಜ್ಯ ವಿಭಾಗದಲ್ಲಿ ಆರ್.ಪಾರ್ವತಿ 600ಕ್ಕೆ 542 ಹಾಗೂ ವಿಜ್ಞಾನ ವಿಭಾಗದಲ್ಲಿ ದೀಕ್ಷಾ 600ಕ್ಕೆ 572, ಛಾಯ 600ಕ್ಕೆ 571, ಪಲ್ಲವಿ600ಕ್ಕೆ 567, ಪ್ರಶ್ವಿತ್ 600ಕ್ಕೆ 558 ಅಂಕಗಳನ್ನು ಪಡೆದು ಕಾಲೇಜಿಗೆ ಕೀರ್ತಿ ತಂದಿದ್ದಾರೆ ಎಂದರು.

ಬಿಂದುಸಾರ ಅತ್ಯುನ್ನತ ಶ್ರೇಣಿ



ಮಲ್ಕುಂಡಿ, ಜೂ.18(ಚನ್ನಪ್ಪ)– ನಂಜನಗೂಡು ತಾಲೂಕಿನ ಹುರ ಗ್ರಾಮದ ಗ್ರಾಪಂ ಅಧ್ಯಕ್ಷ ಚಂದ್ರು ಅವರ ಪುತ್ರ ಸಿ.ಬಿಂದುಸಾರ ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದಲ್ಲಿ 600ಕ್ಕೆ 572(ಶೇ.95.16) ಅಂಕ ಪಡೆದು ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾನೆ.